ಸಂಪುಟ: 06 ಸಂಚಿಕೆ: 225 ಪುಟಗಳು: 08 ಶನಿವಾರ 31 ಅಕ್ಟೋಬರ್ 2026
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035621249
₹5

ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಸೋಲು ಎಂಬುದು ಅಂತಿಮವಲ್ಲ, ಅದು ಗೆಲುವಿನ ಹಾದಿಯಲ್ಲಿ ಸಿಗುವ ಒಂದು ಪಾಠವಷ್ಟೇ. ನಿಮ್ಮ ಗುರಿಯತ್ತ ಸಾಗುವ ಹಾದಿಯಲ್ಲಿ ಅಡೆತಡೆಗಳು ಎದುರಾದಾಗ ಧೃತಿಗೆಡಬೇಡಿ. ಕತ್ತಲೆ ಹೆಚ್ಚಾದಷ್ಟೂ ಸೂರ್ಯೋದಯ ಹತ್ತಿರವಿದೆ ಎಂದರ್ಥ.

ಕಾಗೋಡು ತಿಮ್ಮಪ್ಪ, ನಟ ಅಶೋಕ್, ಜಿಮ್ ರವಿ ಸೇರಿ 71 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

2026ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟ ಮಾಡಿದೆ. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 71 ಸಾಧಕರನ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಸಂಬಂಧ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಈ ಬಾರಿ 71 ಸಾಧಕರಿಗೆ ಪ್ರಶಸ್ತಿ ಕೊಡಲು ಆಯ್ಕೆ ಮಾಡಿದ್ದಾವೆ. ಈ ಪೈಕಿ 12 ಸಾಧಕರು ಮಹಿಳೆಯರೇ ಆಗಿದ್ದಾರೆ. 5 ಪ್ರತ್ಯೇಕ ಸಮಿತಿ ಮಾಡಿದ್ದೆವು ಒಟ್ಟು 4 ಬಾರಿ ಸಭೆ ನಡೆಸಲಾಗಿತ್ತು. ಕೆಲವು ಅರ್ಜಿ ಹಾಕಿದವರನ್ನೂ ಪ್ರಶಸ್ತಿಗೆ ಪರಿಗಣಿಸಿದ್ದೇವೆ. ಅರ್ಜಿ ಹಾಕದ ಕೆಲವರನ್ನ ನಾವೇ ಗುರುತಿಸಿದ್ದೆವೆ ಎಂದು ತಿಳಿಸಿದರು. ಇನ್ನೂ ಸಾಹಸ ಸಿಂಹ ಡಾ. ವಿಷ್ಣುವರ್ಧನ್ (ದಿವಂಗತ) ಹಾಗೂ ಸರೋಜಾದೇವಿ ಅವರಿಗೆ ಘೋಷಣೆ ಮಾಡಲಾಗಿರುವ ಕರ್ನಾಟಕ ರತ್ನ ಪ್ರಶಸ್ತಿಯನ್ನ ನವೆಂಬರ್ 19 ರಂದು ಪ್ರಧಾನ ಮಾಡುತ್ತೇವೆ. ಅಂಬರೀಶ್ ಅವರ ಬಗ್ಗೆಯೂ ನಮಗೆ ಗೌರವ ಇದೆ ಅದು ಮುಂದೆ ಖಂಡಿತ ಪರಿಗಣಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಪ್ರಶಸ್ತಿಯು 25 ಗ್ರಾಮ್ ಚಿನ್ನದ ಪದಕ ಹಾಗೂ 5 ಲಕ್ಷ ರೂ. ನಗದು ಬಹುಮಾನವನ್ನು ಒಳಗೊಂಡಿರುತ್ತದೆ.

ಸಚಿವರ ಗೃಹ ಕಚೇರಿಯಿಂದ ಸ್ಪಷ್ಟನೆ : ಎಚ್ ಡಿ ಕೆ

• ಉದಯವಾಹಿನಿ, ನವದೆಹಲಿ

ದೆಹಲಿಯಲ್ಲಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಅಧಿಕೃತ ನಿವಾಸದಲ್ಲಿ ಪರಿಶೀಲನೆ ನಡೆಸಲಾಗಿದೆ ಮತ್ತು ಮಹಜರು ಸಿದ್ಧಪಡಿಸಲಾಗಿದೆ ಎಂಬ ವರದಿಗಳು ಸಂಪೂರ್ಣ ಸುಳ್ಳು, ದುರುದ್ದೇಶಪೂರಿತ ಮತ್ತು ತಪ್ಪು ಕಲ್ಪನೆಗಳನ್ನು ಬಿತ್ತುವ ಪ್ರಯತ್ನಗಳಾಗಿವೆ ಎಂದು ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರ ಗೃಹ ಕಚೇರಿ ಸ್ಪಷ್ಟಪಡಿಸಿದೆ.ಈ ಸಂಬಂಧ ಮಾಧ್ಯಮ ಪ್ರಕಟಣೆ ಪ್ರಕಟಿಸಿರುವ ಕಚೇರಿ, ಕರ್ನಾಟಕ ರಾಜ್ಯ ಸರ್ಕಾರದೊಳಗಿನ ಕೆಲ ಸ್ವಾರ್ಥ ಹಿತಾಸಕ್ತಿಗಳು, ನೇರವಾಗಿ ಅಥವಾ ಸಿಸಿಬಿ ಯಂತಹ ತನಿಖಾ ಸಂಸ್ಥೆಗಳ ಮೂಲಕ ವ್ಯಕ್ತಿಗಳ ಘನತೆಗೆ ಧಕ್ಕೆ ತರುವ ಮತ್ತು ಸುಳ್ಳು ನಿರೂಪಣೆಯನ್ನು ಸೃಷ್ಟಿಸುವ ಉದ್ದೇಶದಿಂದ ಮಾಧ್ಯಮಗಳಲ್ಲಿ ಕಟ್ಟುಕಥೆಗಳನ್ನು ಹಾಗೂ ದಾರಿತಪ್ಪಿಸುವ ಮಾಹಿತಿಯನ್ನು ಹರಡಲು ಪ್ರಯತ್ನಿಸುತ್ತಿರುವುದು ಸ್ಪಷ್ಟವಾಗಿದೆ ಎಂದಿದೆ.ಪರಿಶೀಲಿಸದ ಮಾಹಿತಿಯನ್ನು ಆಯ್ದು ಸೋರಿಕೆ ಮಾಡುವ ಮೂಲಕ ಮತ್ತು ದಿನಪತ್ರಿಕೆ ಮತ್ತು ಸುದ್ದಿವಾಹಿನಿಗಳನ್ನು ರಾಜಕೀಯ ಕೆಸರೆರಚಾಟಕ್ಕೆ ಬಳಸಿಕೊಳ್ಳುವ ಮೂಲಕ ಸರಕಾರವು ಇಂತಹ ತಂತ್ರಗಳನ್ನು ಅನುಸರಿಸಬಾರದು ಎಂದು ಎಚ್ಚರಿಸುತ್ತೇವೆ ಎಂದು ತಿಳಿಸಿದೆ.

ದರ್ಶನ್ ಕುಟುಂಬದ ವಿರುದ್ಧ ಮಾತನಾಡದಂತೆ ಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ಕೊಲೆ ಪ್ರಕರಣದ ಆರೋಪದಲ್ಲಿ ಜೈಲಲ್ಲಿರುವ ನಟ ದರ್ಶನ್ ಹಾಗೂ ಅವರ ಕುಟುಂಬದ ವಿರುದ್ಧ ಮಾತನಾಡದಂತೆ ಸೆಷನ್ಸ್ ಕೋರ್ಟ್ ಆದೇಶ ಹೊರಡಿಸಿದೆ. ಧನ್ವೀರ್ ಮತ್ತು ವಿಜಯಲಕ್ಷ್ಮಿ ಜಟಾಪಟಿ ಪ್ರಕರಣ ಹಿನ್ನೆಲೆಯಲ್ಲಿ ಅವಹೇಳನಕಾರಿ ಹೇಳಿಕೆ ನೀಡದಂತೆ ನಿನ್ನೆಯಷ್ಟೇ ಕೋರ್ಟ್‌ಗೆ ದರ್ಶನ್ ಪರ ವಕೀಲರು ಮನವಿ ಮಾಡಿದ್ದರು. ಇನ್ನು, ತಂದೆ ವರ್ಷದ ತಿಥಿ ಕಾರ್ಯಕ್ಕೆ ಪ್ರದೋಷ್‌ಗೆ ಮಧ್ಯಂತರ ಜಾಮೀನು ನೀಡಲು ನಿರಾಕರಿಸಲಾಗಿದೆ. 59ನೇ ಸಿಸಿಹೆಚ್ ಕೋರ್ಟ್ ಪ್ರದೋಷ್ ಮಧ್ಯಂತರ ಜಾಮೀನು ಅರ್ಜಿ ವಜಾಗೊಳಿಸಿದೆ. ತಂದೆ ಪಿತೃಕಾರ್ಯದಲ್ಲಿ ಪಾಲ್ಗೊಳ್ಳಲು 3 ವಾರ ಜಾಮೀನಿಗೆ ಪ್ರದೋಷ್ ಅರ್ಜಿ ಹಾಕಿದ್ದ. ಕನಿಷ್ಠ 3 ವಾರಗಳ ಜಾಮೀನು ನೀಡುವಂತೆ ಪ್ರದೋಷ್ ಪರ ವಕೀಲರು ವಾದ ಮಂಡಿಸಿದ್ದರು. ಪ್ರದೋಷ್ ಜಾಮೀನು ಅರ್ಜಿಗೆ ದರ್ಶನ್ ಪರ ವಕೀಲರ ವಿರೋಧಿಸಿದ್ದರು. ಮಾಫಿ ಸಾಕ್ಷಿಯಾಗಿರುವ ವ್ಯಕ್ತಿಗೆ ಜಾಮೀನು ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಸಾಕ್ಷ್ಯ ವಿಚಾರಣೆ ಮತ್ತು ಕ್ರಾಸ್ ಎಗ್ಸಾಮಿನೇಷನ್ ಮುಗಿಯುವವರೆಗೂ ಜೈಲಿನಲ್ಲಿಯೇ ಇರಬೇಕು. ಷರತ್ತು ವಿಧಿಸಿಯೇ ಕೋರ್ಟ್ ಆತನನ್ನು ಮಾಫಿ ಸಾಕ್ಷಿಯಾಗಿ ಒಪ್ಪಿಕೊಂಡಿದೆ. ಹೊರಗೆ ಬಿಟ್ಟರೆ ಕೋರ್ಟ್ ವಿಧಿಸಿರುವ ಷರತ್ತು ನಿಷ್ಫಲವಾಗುತ್ತವೆ .

ಮಲ್ಲಿಕಾರ್ಜುನ ಖರ್ಗೆಗೆ ಅಶೋಕ್ ಸವಾಲು

• ಉದಯವಾಹಿನಿ, ಬೆಂಗಳೂರು

ಸಂಸತ್ ವಿಸರ್ಜಿಸಿ ಮತಪತ್ರ ಬಳಸಿ ಚುನಾವಣೆ ಮಾಡಿ ಎಂದಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಕರ್ನಾಟಕ ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ಸವಾಲು ಹಾಕಿದ್ದು, ನೀವು ಅಧಿಕಾರದಲ್ಲಿರುವ ರಾಜ್ಯದಲ್ಲೇ ಇದನ್ನು ಮಾಡೋಣ. ನಿಮಗೆ ತಾಕತ್ತಿದ್ದರೆ ನೀವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಗೆಲ್ಲಿ ಎಂದಿದ್ದಾರೆ. ಕರ್ನಾಟಕ, ತೆಲಂಗಾಣ, ಕೇರಳದಲ್ಲಿ ಗೆದ್ದಾಗ ಚೆನ್ನಾಗಿರುತ್ತೆ. ಪಾರ್ಲಿಮೆಂಟ್ ಚುನಾವಣೆಯಲ್ಲಿ ಮಾತ್ರ ಇವಿಎಂ ಬೇಡ ಅಂತಾರೆ. ಅದಕ್ಕೆ ನೀವೇ ಮಾದರಿ ಆಗಿಬಿಡಿ ಮಲ್ಲಿಕಾರ್ಜುನ ಖರ್ಗೆ ಅವರೇ ಎಂದು ಅಶೋಕ್‌ಹೇಳಿದ್ದಾರೆ.

ರಾಜ್ಯಾದ್ಯಂತ ಇಂದಿನಿಂದ 4 ದಿನಗಳ ಕಾಲ ಪಕ್ಷಿ ಗಣತಿ

• ಉದಯವಾಹಿನಿ, ಬೆಂಗಳೂರು

ದೀಪಾವಳಿಯ ಸಂದರ್ಭದಲ್ಲಿ ಪರಿಸರ ಸ್ನೇಹಿ ಪಟಾಕಿಗಳನ್ನು ಬಳಸಬೇಕು ಮತ್ತು ಸುಪ್ರೀಂಕೋರ್ಟ್‌ನ ನಿರ್ದೇಶಗಳನ್ನು ಪಾಲಿಸಬೇಕೆಂದು ಪರಿಸರ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಸೂಚಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನ ನಿರ್ದೇಶನದ ಪ್ರಕಾರ ರಾತ್ರಿ 8 ರಿಂದ 10ಗಂಟೆ ನಡುವೆ ಮಾತ್ರ ಪಟಾಕಿ ಸಿಡಿಸಬೇಕು. ಹಸಿರು ಪಟಾಕಿಗಳನ್ನೇ ತಯಾರಿಸಬೇಕು, ಮಾರಾಟ ಮಾಡಬೇಕು ಮತ್ತು ಬಳಸಬೇಕು ಎಂದು ಸೂಚಿಸಿದರು. ಈ ಬಗ್ಗೆ ಮುಂಜಾಗ್ರತೆ ವಹಿಸುವಂತೆ ಅಪಾರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದು ಅವರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪೊಲೀಸರಿಗೆ ನಿರ್ದೇಶಗಳನ್ನು

ನೀಡಲಿದ್ದಾರೆ. ಪರಿಸರ ರಕ್ಷಣೆ, ಪ್ರಾಣಿ ಪಕ್ಷಗಳಿಗೆ ಹಾನಿಯಾಗುವುದು, ತಡೆಯುವುದು ಸೇರಿದಂತೆ ಸುಮಾರು 10 ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿರುವುದಾಗಿ ಹೇಳಿದರು. ದೀಪಾವಳಿ ಹಿಂದೂಗಳ ಹಬ್ಬ, ಅಲ್ಲಿ ಪಟಾಕಿಗಳನ್ನು ಹೊಡೆಯುವುದನ್ನು ನಿರ್ಬಂಧಿಸಲಾಗುವುದಿಲ್ಲ. ಆದರೆ ಕಡಿಮೆ ಪ್ರಮಾಣದ ಪಟಾಕಿ ಹೊಡೆಯಬೇಕು ಮತ್ತು ಪರಿಸರ ರಕ್ಷಣೆಗೆ ಅದ್ಯತೆ ನೀಡಬೇಕೆಂದು ಸಲಹೆ ನೀಡಿದರು.ಗಣೇಶೋತ್ಸವ ಸಂದರ್ಭದಲ್ಲಿ ಪ್ಲಾಸ್ಟ್ ಆಫ್ ಪ್ಯಾರಿಸ್ ಗಣೇಶ ಮೂರ್ತಿಗಳ ತಯಾರಿಕೆಗೆ ಕಡಿವಾಣ ಹಾಕಲಾಗಿತ್ತು. ಮುಂದಿನ ವರ್ಷದಿಂದ ಪರಿಸರ ಮಾಲಿನ್ಯ ನಿಯಂತ್ರಣದಿಂದಲೇ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ವಿತರಿಸುವುದಾಗಿ ಹೇಳಿದರು.ದೇಶಾದ್ಯಂತ ನವೆಂಬರ್ 2ರಿಂದ ಪಕ್ಷಿಗಳ ಗಣತಿಕಾರ್ಯ ನಡೆಯಲಿದೆ. ಬರ್ಡ್ ಕೌಂಟ್ ಇಂಡಿಯಾ (ಬಿಸಿಐ) ಹಾಗೂ ಕೆಬಿಎಂಎನ್ (ಕೆಬಿಎಂಎನ್) ಸಹಭಾಗಿತ್ವದಲ್ಲಿ ಈ ಗಣತಿ ಕಾರ್ಯ ನಡೆಯಲಿದೆ. ಪಕ್ಷಿ ವೀಕ್ಷಕರ ಗುಂಪುಗಳು, ಸಂಶೋಧಕರು ಹಾಗೂ ಸಂರಕ್ಷಣಾ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಉತ್ತರಾಖಂಡದಲ್ಲಿ ಹೆಲಿಕಾಪ್ಟರ್ ಪತನ

ನಿರಂತರವಾಗಿ ಮೇಲ್ವಿಚಾರಣೆ

ಘಟನೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಜೋಶಿಮಠದ ಸಮೀಪ ಇರುವ ಚಾಯಿ ಗ್ರಾಮದ ಬಳಿ ಹೆಲಿಕಾಪ್ಟರ್ ಪತನಗೊಂಡಿರುವ ದುರದೃಷ್ಟಕರ ಸಂಗತಿಯಾಗಿದೆ. ಜಿಲ್ಲಾಡಳಿತ, ವಿಪತ್ತು ನಿರ್ವಹಣಾ ಇಲಾಖೆ ಮತ್ತು

ಎಸ್‌ಡಿಆರ್‌ಎಫ್ ವತಿಯಿಂದ ಜಂಟಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಘಟನೆಯನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದು, ಗಂಭೀರವಾಗಿ ಗಾಯಗೊಂಡವರನ್ನು ಉತ್ತಮ ಚಿಕಿತ್ಸೆಗಾಗಿ ತಕ್ಷಣವೇ ಏರ್‌ಲಿಫ್ಟ್ ಮೂಲಕ ಸ್ಥಳಾಂತರಿಸಲು ಸೂಚನೆ ನೀಡಲಾಗಿದೆ. ಪ್ರಯಾಣಿಕರು ಸುರಕ್ಷಿತವಾಗಿ ಮರಳಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

• ಉದಯವಾಹಿನಿ, ದೆಹಲಿ

ಆರು ಜನರಿದ್ದ ಹೆಲಿಕಾಪ್ಟರ್‌ವೊಂದು ಉತ್ತರಾಖಂಡದಲ್ಲಿನ ಜೋಶಿಮಠ ಪ್ರದೇಶದ ಸಂಪರ್ಕ ಕಡಿತಗೊಂಡು ಕಣ್ಮರೆಯಾಗಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ಚಮೋಲಿ ಪೊಲೀಸ್ ವರಿಷ್ಠಾಧಿಕಾರಿ ಸುರ್ಜೀತ್ ಸಿಂಗ್ ಪನ್ವಾರ್ ತಿಳಿಸಿದ್ದಾರೆ. ಈ ಮೂಲಕ ಆರು ಜನರ ಸಾವನ್ನು ಅವರು ದೃಢಪಡಿಸಿದ್ದಾರೆ. ಖಾಸಗಿ ಮಾಲೀಕತ್ವಕ್ಕೆ ಸೇರಿದ್ದ ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿನ ಸಿಸಿಬಿ ಇನ್ಸ್‌ಪೆಕ್ಟರ್ ಸೇರಿದಂತೆ ಐವರು ಪ್ರಯಾಣಿಕರು ಮತ್ತು ಓರ್ವ ಪೈಲಟ್ ಇದ್ದರು ಎಂದು ಅಧಿಕಾರಿಗಳು ಈ ಮೊದಲು ತಿಳಿಸಿದ್ದರು.

ಹೆಲಿಕಾಪ್ಟರ್‌ನಲ್ಲಿದ್ದವರನ್ನು ದೆಹಲಿ ಮೂಲದ ಕ್ಯಾಪ್ಟನ್ ಹಿಮಾಂಶು ಸಭರ್ವಾಲ್ (48), ಸಿಸಿಬಿ ಇನ್ಸ್‌ಪೆಕ್ಟರ್‌ಅರುಣ್ ಸಾಲುಂಕೆ(44) ಸೇರಿದಂತೆ ವಕೀಲರಾದ ಸುಧೀರ್ ಕೆ.(50), ಶಂಕರ್ ಗೌಡ(39), ತುಮಕೂರಿನ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಎನ್ನಲಾದ ಹೆಚ್.ಎಸ್.ನಟರಾಜ್(51) ಹಾಗೂ ಗುತ್ತಿಗೆದಾರ ಪ್ರತಾಪ್ ಗೌಡ(41) ಎಂಬುವರು ನಾಪತ್ತೆಯಾಗಿದ್ದರು. ಇದೀಗ ಹೆಲಿಕಾಪ್ಟರ್ ಪತ್ತೆಯಾಗಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ಎಸ್‌ಪಿದೃಢಪಡಿಸಿದ್ದಾರೆ.

2007ನೇ ಬ್ಯಾಚ್ ಅಧಿಕಾರಿಯಾಗಿರುವ ಅರುಣ್ ಸಾಲುಂಕೆಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ರಾಮಮೂರ್ತಿನಗರ ನಿವಾಸಿಯಾಗಿದ್ದಾರೆ. ಇಂದಿರಾನಗರ, ಬಾಣಸವಾಡಿ ಸೇರಿದಂತೆ ಹಲವು ಠಾಣೆಗಳಲ್ಲಿ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದರು. ಕೆಲ ತಿಂಗಳಿಂದ ಸಿಸಿಬಿಯ ವಿಶೇಷ ವಿಚಾರಣಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಈ ಹಿಂದೆ ಬಾಣಸವಾಡಿ ಇನ್ಸ್ ಪೆಕ್ಟರ್ ಆಗಿದ್ದಾಗ ಸಾರ್ವಜನಿಕರ ಉತ್ತಮ ಪ್ರತಿಕ್ರಿಯೆ ಆಧಾರಿತ ಬೆಂಗಳೂರು ಪೊಲೀಸರ ಲೋಕಸ್ಪಂದನ ಪ್ರಕ್ರಿಯೆಯಡಿ ಠಾಣೆಗೆ ಅತ್ಯುತ್ತಮ ಪೊಲೀಸ್ ಠಾಣೆ ಎಂಬ ಗೌರವ ದೊರೆತಿತ್ತು. ಬೆಳಗಾವಿ ಮೂಲದ ಅರುಣ್ ಅವರು ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದರು. ಬದರಿನಾಥ ಧಾಮದಿಂದ ಡೆಹ್ರಾಡೂನ್‌ಗೆ ಮರಳುತ್ತಿದ್ದ 'ಟ್ರಾನ್ಸ್ ಭಾರತ್ ಏವಿಯೇಷನ್' ಸಂಸ್ಥೆಗೆ ಸೇರಿದ ಹೆಲಿಕಾಪ್ಟರ್ ಇದಾಗಿದೆ. ಜೋಶಿಮಠ ಪ್ರದೇಶದಲ್ಲಿರುವ ಮಾರ್ವಾರಿ ಸೇತುವೆಯ ಮೇಲ್ಭಾಗದಲ್ಲಿ, ಜೆಪಿ ಪವರ್ ಹೌಸ್ ಬಳಿ ಗುಡ್ಡದ ಬದಿಗೆ ಅಪ್ಪಳಿಸಿದೆ ಎಂದು ವರದಿಯಾಗಿದೆ. ಇದರಲ್ಲಿ ಒಬ್ಬ ಪೈಲಟ್ ಮತ್ತು ಐವರು ಪ್ರಯಾಣಿಕರು ಇದ್ದರು. ಹೆಲಿಕಾಪ್ಟರ್‌ನಲ್ಲಿದ್ದ ಪ್ರಯಾಣಿಕರು ಬೆಂಗಳೂರು ಮೂಲದವರಾಗಿದ್ದಾರೆ.

ಅಪಘಾತದ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆಯೇ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಲಾಗಿದ್ದು, ಪೊಲೀಸ್, ಎಸ್‌ಡಿಆರ್‌ಎಫ್, ಸೇನೆ ಮತ್ತು ಐಟಿಬಿಪಿ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಲಾಗಿದೆ ಎಂದು ಯುಸಿಎಡಿಎ ಸಿಇಒ, ಪ್ರತೀಕ್ ಜೈನ್ ಈ ಮೊದಲು ಮಾಹಿತಿ ನೀಡಿದ್ದರು. ಘಟನೆಯ ಪ್ರಾಥಮಿಕ ಮಾಹಿತಿ ಲಭ್ಯವಾಗಿದ್ದು, ಹೆಚ್ಚಿನ ಮಾಹಿತಿ ನಿರೀಕ್ಷೆಯಲ್ಲಿರುವುದಾಗಿ ಚಮೋಲಿ ಜಿಲ್ಲಾ ಮ್ಯಾಜಿಸ್ಟ್ರೇಟರ್ ಗೌರವ್‌ಕುಮಾರ್ ತಿಳಿಸಿದ್ದಾರೆ.

ಎಸ್‌ಡಿಆರ್‌ಎಫ್ ವತಿಯಿಂದ ಜಂಟಿ ರಕ್ಷಣಾ ಕಾರ್ಯಾಚರಣೆ

ಘಟನೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಜೋಶಿಮಠದ ಸಮೀಪ ಇರುವ ಚಾಯಿ ಗ್ರಾಮದ ಬಳಿ ಹೆಲಿಕಾಪ್ಟರ್ ಪತನಗೊಂಡಿರುವ ದುರದೃಷ್ಟಕರ ಸಂಗತಿಯಾಗಿದೆ.

ಜಿಲ್ಲಾಡಳಿತ, ವಿಪತ್ತು ನಿರ್ವಹಣಾ ಇಲಾಖೆ ಮತ್ತು ಎಸ್‌ಡಿಆರ್‌ಎಫ್ ವತಿಯಿಂದ ಜಂಟಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಘಟನೆಯನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದು, ಗಂಭೀರವಾಗಿ ಗಾಯಗೊಂಡವರನ್ನು ಉತ್ತಮ ಚಿಕಿತ್ಸೆಗಾಗಿ ತಕ್ಷಣವೇ ಏರ್‌ಲಿಫ್ಟ್ ಮೂಲಕ ಸ್ಥಳಾಂತರಿಸಲು ಸೂಚನೆ ನೀಡಲಾಗಿದೆ. ಪ್ರಯಾಣಿಕರು ಸುರಕ್ಷಿತವಾಗಿ ಮರಳಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

ಹೆಲಿಕಾಪ್ಟರ್ ಅವಶೇಷ ಪತ್ತೆ

ಸದ್ಯ ಪತನಗೊಂಡಿರುವ ಹೆಲಿಕಾಪ್ಟರ್‌ನ ಅವಶೇಷಗಳು ಪತ್ತೆಯಾಗಿದ್ದು, ಹಿಮಪಾತದ ನಡುವೆಯೂ ರಕ್ಷಣಾ ತಂಡಗಳು ಅಪಘಾತ ನಡೆದ ಸ್ಥಳವನ್ನು ತಲುಪಲು ಪ್ರಯರ್ನಿಸುತ್ತಿವೆ. ಅಪಘಾತದ ಸ್ಥಳ ನೋಡಿದರೆ, ಯಾವುದೇ ಪ್ರಯಾಣಿಕ ಬದುಕುಳಿದಿರುವುದು ಅನುಮಾನ ಎಂದು ಹೇಳಲಾಗುತ್ತಿದೆ. ಕಳೆದ ವರ್ಷ ಉತ್ತರಕಾಶಿಯಲ್ಲಿ ಹೆಲಿಕಾಪ್ಟರ್ ಪತನಗೊಂಡು ಐವರು ಮೃತಪಟ್ಟ ಘಟನೆ ಮಾಸುವ ಮುನ್ನವೇ, ಉತ್ತರಾಖಂಡದಲ್ಲಿ ಮತ್ತೊಂದು ಹೆಲಿಕಾಪ್ಟರ್ ಪತನಗೊಂಡಿರುವುದು ನಿಜಕ್ಕೂ ದುರ್ದೈವದ ಸಂಗತಿ.

1
ಉತ್ತರಾಖಂಡ ಚಮೋಲಿ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಪತನ.

2
ಹೆಲಿಕಾಪ್ಟರ್‌ನಲ್ಲಿದ್ದ ಬೆಂಗಳೂರಿನ ಐವರು ಪ್ರಯಾಣಿಕರು.

3
ಹೆಲಿಕಾಪ್ಟರ್ ದುರಂತಕ್ಕೆ ತೀವ್ರ ಆಘಾತ ವ್ಯಕ್ತಪಡಿಸಿದ ಸಿಎಂ ಪುಷ್ಕರ್ ಸಿಂಗ್ ಧಾಮಿ.

ಸಿಸಿಬಿ ಇನ್ಸ್‌ಪೆಕ್ಟರ್ ಸೇರಿ ಕರ್ನಾಟಕ ಮೂಲದ ಐವರು, ಪೈಲಟ್ ಸಾವು

ಸಿಸಿಬಿ ಇನ್ಸ್‌ಪೆಕ್ಟರ್ ಅರುಣ್ ಸಾಲಂಕೆ ಸಾವು

ಮೃತ ಪ್ರಯಾಣಿಕರನ್ನು ಬೆಂಗಳೂರು ಮೂಲದ ಪ್ರತಾಪ, ಸಿಸಿಬಿ ಇನ್ಸ್‌ಪೆಕ್ಟರ್ ಅರುಣ್ ಸಾಲಂಕೆ, ಶಂಕರ್ ಗೌಡ, ಸುಧೀರ್ ಕೆ. ಮತ್ತು ಎಚ್.ಎಸ್. ನಟರಾಜ ಎಂದು ಗುರುತಿಸಲಾಗಿದೆ. ಹೆಲಿಕಾಪ್ಟರ್ ಅನ್ನು ಕ್ಯಾಪ್ಟನ್ ಹಿಮಾಂಶು ಚಲಾಯಿಸುತ್ತಿದ್ದರು ಎಂದು ವರದಿಯಾಗಿದೆ. ಬೆಂಗಳೂರಿನಲ್ಲಿ ವಾಸವಿದ್ದ ಇನ್ಸ್‌ಪೆಕ್ಟರ್ ಅರುಣ್ ಸಾಲಂಕೆ, ವಕೀಲರಾದ ಸುಧೀರ್, ಶಂಕರ್‌ಗೌಡ, ನಟರಾಜ್ ಅವರೊಂದಿಗೆ ಚಾರ್ ಧಾಮ್ ಪ್ರವಾಸಕ್ಕೆ ತೆರಳಿದ್ದರು ಎನ್ನಲಾಗಿದೆ. ಸಿಸಿಬಿ ಇನ್ಸ್‌ಪೆಕ್ಟರ್ ಇಬ್ಬರು ಮಕ್ಕಳು, ಪತ್ನಿಯನ್ನು ಅಗಲಿದ್ದಾರೆ. ಇನ್ನೂ ಘಟನೆ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಜೋಶಿಮಠದ ಸಮೀಪವಿರುವ ಹಾಥಿ ಪರ್ವತ ಪ್ರದೇಶದ ಚೈನ್ ಗ್ರಾಮದ ಬಳಿ ಹೆಲಿಕಾಪ್ಟರ್ ಪತನಗೊಂಡಿರುವ ದುರದೃಷ್ಟಕರ ಸುದ್ದಿ ನಮಗೆ ಲಭ್ಯವಾಗಿದೆ. ಜಿಲ್ಲಾಡಳಿತ, ವಿಪತ್ತು ನಿರ್ವಹಣಾ ಇಲಾಖೆ ಮತ್ತು ಎಸ್‌ಡಿಆರ್‌ಎಫ್ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿವೆ ಎಂದರು.

ರಕ್ಷಣಾ ಕಾರ್ಯಾಚರಣೆಗೆ ಚಾಲನೆ

ನಾನು ಸ್ವತಃ ಈ ಸಂಪೂರ್ಣ ಘಟನೆಯನ್ನು ನಿರಂತರವಾಗಿ ಗಮನಿಸುತ್ತಿದ್ದೇನೆ. ಗಂಭೀರವಾಗಿ ಗಾಯಗೊಂಡವರನ್ನು ಉತ್ತಮ ಚಿಕಿತ್ಸೆಗಾಗಿ ತಕ್ಷಣವೇ ವಾಯುಮಾರ್ಗದ ಮೂಲಕ ಉನ್ನತ ವೈದ್ಯಕೀಯ ಕೇಂದ್ರಗಳಿಗೆ ಸಾಗಿಸಲು ಸೂಚನೆ ನೀಡಲಾಗಿದೆ. ಪ್ರಯಾಣಿಕರು ಸುರಕ್ಷಿತವಾಗಿ ಮರಳಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಟ್ರಾನ್ಸ್ ಭಾರತ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಹೆಲಿಕಾಪ್ಟರ್, ಮಧ್ಯಾಹ್ನ ಸುಮಾರು 1:14 ಗಂಟೆಗೆ ಟೇಕ್-ಆಫ್ ಆದ ಕೆಲವೇ ಸಮಯದ ಬಳಿಕ ಪತನಕ್ಕೀಡಾಗಿದೆ. ಟ್ರ್ಯಾಕಿಂಗ್ ವ್ಯವಸ್ಥೆಯು ಹೆಲಿಕಾಪ್ಟರ್‌ನ್ನು ಪತ್ತೆಹಚ್ಚಲು ವಿಫಲವಾಗಿದ್ದು, ಅದರ ಪ್ರಸ್ತುತ ಸ್ಥಳ ಎಲ್ಲಿದೆ ಎಂಬುದು ಇನ್ನೂ ತಿಳಿದುಬಂದಿಲ್ಲ ಎಂದು ಉತ್ತರಾಖಂಡ ನಾಗರಿಕ ವಿಮಾನಯಾನ ಅಭಿವೃದ್ಧಿ ಪ್ರಾಧಿಕಾರವು ಹೇಳಿಕೆಯಲ್ಲಿ ತಿಳಿಸಿದೆ.

ಪಶ್ಚಿಮ ಪದವೀಧರರ ಚುನಾವಣೆಯಲ್ಲಿ ಕಾಂಗ್ರೇಸ್‌ನಿಂದ ನಕಲಿ ಮತದಾನ: ಬಿಜೆಪಿ ಆರೋಪ, ಸಚಿವ ಲಮಾಣಿ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಪಶ್ಚಿಮ ಪದವೀಧರರ ಚುನಾವಣೆಯಲ್ಲಿ ಸಚಿವ ರುದ್ರಪ್ಪ ಲಮಾಣಿ ಸಮ್ಮುಖದಲ್ಲೇ ನಕಲಿ ವೋಟಿಂಗ್ ನಡೆದಿದೆ ಎಂದು ವಿಡಿಯೋ ದಾಖಲೆಯೊಂದಿಗೆ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಆರೋಪಿಸಿದ್ದಾರೆ.ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹಾವೇರಿಯಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಕಾಂಘ್ರ್ಯಏಸ್ ಕಾರ್ಯಕರ್ತೆಯೊಬ್ಬರಿಂದ ನಕಲಿ ಮತದಾನದ ಆರೋಪ ಮಾಡಿದ್ದಾರೆ. ಕಾಂಗ್ರೇಸ್ ಜಿಲ್ಲಾ ಘಟಕದ ಅಧ್ಯಕ್ಷ ಸಂಜೀವಕುಮಾರ ನೆರಳಗಿ ಅವರ ಪತ್ನಿ ಆಶಾ ಪಾಟೀಲ್ ಹೆಸರಿನಲ್ಲಿ ನಕಲಿ ಮತದಾನ ಆಗಿದೆ. ತಹಶೀಲ್ದಾರ್ ಕಚೇರಿಯ ಬೂತ್ ನಂಬರ್ 85 ರಲ್ಲಿ ನಕಲಿ ಮತದಾನ ನಡೆದಿದೆ ಎಂದು ಆರೋಪಿಸಿದ್ದಾರೆ.

ಕಾಂಗ್ರೇಸ್‌ನವರು ವೋಟ್ ಚೋರಿ ಆರೋಪ ಮಾಡ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲೇ ಕಾಂಗ್ರೇಸ್ ವೋಟ್ ಚೋರಿ ಮಾಡಿದೆ. ಆಶಾ ಪಾಟೀಲ್ ವೋಟನ್ನು ಬೇರೆಯವರು ಚಲಾಯಿಸಿದ್ದಾರೆ. ಇದರ ಬಗ್ಗೆ ಕಾಂಗ್ರೇಸ್ ಸ್ಪಷ್ಟನೆ ಕೊಡಬೇಕು. ಸಚಿವ ರುದ್ರಪ್ಪ ಲಮಾಣಿ ಮೊದಲು ಮತ ಹಾಕ್ತಾರೆ. ಸಚಿವ ಲಮಾಣಿ ಹಿಂದೆನೇ ನಿಂತಿದ್ದ ಶಿಲ್ಪಾ ಬುಡಣ್ಣವರ್ ಅನ್ನೋರು ನಕಲಿ ಮತ ಹಾಕಿದ್ದಾರೆ ಎಂದು ಶಾಸಕ ಮಹೇಶ್ ಟೆಂಗಿನಕಾಯಿ ಆರೋಪಿಸಿದ್ದಾರೆ.

ನಕಲಿ ಮತದಾನದ ಸಂಬಂಧ ವಿಡಿಯೋ ಬಿಡುಗಡೆ ಮಾಡಿದ ಮಹೇಶ್ ಟೆಂಗಿನಕಾಯಿ, ನಕಲಿ ವೋಟ್ ವಿಚಾರಕ್ಕೆ ಅಲ್ಲಿ ಬಿಜೆಪಿ ಪ್ರತಿಭಟನೆ ಮಾಡಿದ ಮೇಲೆ ಅಧಿಕಾರಿಗಳಿಬ್ಬರ ಸಸ್ಪೆಂಡ್ ಮಾಡಿದ್ದಾರೆ. ಈಗ ಕಾಂಗ್ರೇಸ್ ದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಮೊದಲು ಇದಕ್ಕೆ ಉತ್ತರ ಕೊಡಲಿ. ಕಾಂಗ್ರೇಸ್‌ನಲ್ಲಿ ವೋಟ್ ಚೋರಿ ರಕ್ತಗತವಾಗಿ ಬಂದಿದೆ ಎಂದು ದೂರಿದರು.

ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಿ - ಸಚಿವ ರುದ್ರಪ್ಪ ಲಮಾಣಿ: ಬಿಜೆಪಿ ಆರೋಪಕ್ಕೆ ಸ್ಪಷ್ಟೀಕರಣ ನೀಡಿರುವ ಸಚಿವ ರುದ್ರಪ್ಪ ಲಮಾಣಿ, ಹಾವೇರಿಯಲ್ಲಿ ನಡೆದ ಪಶ್ಚಿಮ ಪದವೀಧರರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯಲ್ಲಿ ನಕಲಿ ಮತದಾನ ನಡೆದಿದೆ ಎಂಬ ಆರೋಪದ ಕುರಿತು ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಮತದಾನಕ್ಕೆ ಬಂದವರು ನೈಜ ಮತದಾರರೇ ಅಥವಾ ಅಲ್ಲವೇ ಎಂಬುದನ್ನು ಸರತಿ ಸಾಲಿನಲ್ಲಿ ನಿಂತಿರುವ ಇತರ ಮತದಾರರಿಗೆ ತಿಳಿಯಲು ಸಾಧ್ಯವಿಲ್ಲ. ಮತದಾರರ ಗುರುತಿನ ಚೀಟಿ ಹಾಗೂ ಮತದಾರರ ಪಟ್ಟಿಯಲ್ಲಿನ ಹೆಸರನ್ನು ಪರಿಶೀಲಿಸಿ ಮತದಾನಕ್ಕೆ ಅವಕಾಶ ನೀಡುವುದು ಚುನಾವಣಾಧಿಕಾರಿಗಳ ಜವಾಬ್ದಾರಿ ಎಂದು ಸ್ಪಷ್ಟಪಡಿಸಿದರು.

ಮತದಾನದ ವೇಳೆ ಯಾವುದೇ ಅನುಮಾನ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಪರಿಶೀಲನೆ ನಡೆಸಬೇಕು. ತಪ್ಪುಗಳಿಗೆ ನಾನು ಯಾವುದೇ ಕಾರಣಕ್ಕೂ ಪ್ರೋತ್ಸಾಹ ನೀಡುವುದಿಲ್ಲ ಅಥವಾ ಬೆಂಬಲಿಸುವುದಿಲ್ಲ. ಈ ಪ್ರಕರಣದಲ್ಲಿ ನನ್ನ ಹೆಸರನ್ನು ಅನಗತ್ಯವಾಗಿ ಎಳೆದು ತಂದು ರಾಜಕೀಯ ಪ್ರಚಾರ ಪಡೆಯಲು ಬಿಜೆಪಿ ಮುಖಂಡರು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಮತದಾನ ಪ್ರಕ್ರಿಯೆಯಲ್ಲಿ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಉನ್ನತ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಚುನಾವಣಾ ಸಿಬ್ಬಂದಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ವಾಟಾಳ್ ನಾಗರಾಜ್‌ಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕು ಎಂದು ನನಗೆ ಆಸೆ: ಸಿಎಂ ಡಿ.ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯೋತ್ಸವ ಆಚರಣೆಗಳು ಮತ್ತು ಪ್ರಶಸ್ತಿ ವಿತರಣೆಯ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಹತ್ವದ ಹೇಳಿಕೆ ನೀಡಿದ್ದಾರೆ. ಈ ಬಾರಿ ರಾಜ್ಯೋತ್ಸವವನ್ನು ವಿಶೇಷವಾಗಿ ಆಚರಿಸಲಾಗುವುದು. ಪ್ರತಿಯೊಬ್ಬ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಧ್ವಜಾರೋಹಣ ಮಾಡಿ, ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳ ಕುರಿತು ಮಾತನಾಡಿದ ಡಿಕೆ ಶಿವಕುಮಾರ್, ಹಿಂದಿನ ವರ್ಷಗಳಲ್ಲಿ ನೀಡಿದಂತೆಯೇ ಈ ಬಾರಿಯೂ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದರು. ಹಿರಿಯ ಹೋರಾಟಗಾರ ವಾಟಾಳ್ ನಾಗರಾಜ್ ಅವರ ಹೆಸರನ್ನು ಪ್ರಶಸ್ತಿಗೆ ಸಮಿತಿಯಿಂದ ತೆರವುಗೊಳಿಸಲಾಗಿತ್ತು. ''ವಾಟಾಳ್ ನಾಗರಾಜ್ ಅವರಿಗೆ ಪ್ರಶಸ್ತಿ ನೀಡಬೇಕು ಎಂದು ನಮಗೂ ಆಸೆ ಇತ್ತು. ಅವರು ಸಾಕಷ್ಟು ಹೋರಾಟ ಮಾಡಿದ್ದಾರೆ. ಆದರೆ, ಅವರು ಪ್ರಶಸ್ತಿ ಬೇಡ ಎಂದು ಹೇಳಿದ್ದಾರೆ. ಹಿಂದೆಯೂ ಅವರು ಪ್ರಶಸ್ತಿಯನ್ನು ನಿರಾಕರಿಸಿದ್ದರು, ಈಗಲೂ ಬೇಡ ಎಂದಿದ್ದಾರೆ'' ಎಂದು ಡಿಕೆ ಶಿವಕುಮಾರ್ ಸ್ಪಷ್ಟಪಡಿಸಿದರು.

ಈ ದಿನದ ದರ ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹14,226/Gram24ct ₹13,040/Gram22ct ಬೆಳ್ಳಿ: ₹210.00/Gram

ಸುಧೀಂದ್ರನಗರ ರಾಯರ ಮಠದಲ್ಲಿ ಟಿಟಿಡಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸುಧೀಂದ್ರನಗರದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನವೆಂಬರ್ 3ರಿಂದ 6ರವರೆಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಭಜನಾ ಕಾರ್ಯಕ್ರಮ: (ಪ್ರತಿದಿನ ಸಂಜೆ 6 ರಿಂದ 7): ನವೆಂಬರ್ 3-ಶೇಷಾದ್ರಿಪುರದ ಶ್ರೀ ಸುಶಮೀಂದ್ರ ಭಜನಾ ಮಂಡಳಿ, ನವೆಂಬರ್ 4-ಹೊಸಕೆರೆಹಳ್ಳಿಯ ಶ್ರುತಿ ಭಜನಾ ಮಂಡಳಿ ಮತ್ತು ನವೆಂಬರ್ 5-ಸುಧೀಂದ್ರನಗರದ ಶ್ರೀ ವಿಜಯ ವಿಠಲ ಭಜನಾ ಮಂಡಳಿಯ ಸದಸ್ಯರುಗಳಿಂದ ಭಜನಾ ಕಾರ್ಯಕ್ರಮ ಜರುಗಲಿದೆ. **ಪ್ರವಚನ ಕಾರ್ಯಕ್ರಮ:** (ಪ್ರತಿದಿನ ಸಂಜೆ 7 ರಿಂದ 8) : ನವೆಂಬರ್ 3 ರಿಂದ 5ರ ವರೆಗೆ ಶಾಲಿಗ್ರಾಮವಾಗಿ ಪೌರಾಣಿಕ ಮತ್ತು ವ್ಯಾಖ್ಯಾನವಾಗಿ ಡಾ|| ವಿನಾಯಕ ನಾಮಣ್ಣವರ್ ಪ್ರವಚನ ನೀಡಲಿದ್ದಾರೆ.

ಹರಿನಾಮ ಸಂಕೀರ್ತನೆ: ನವೆಂಬರ್ 6, ಶುಕ್ರವಾರ ಸಂಜೆ 6-30ಕ್ಕೆ ಹರಿನಾಮ ಸಂಕೀರ್ತನೆ. ಕು|| ಮೃದುಲಾ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ಮೃದಂಗ ವಾದನದಲ್ಲಿ ಶ್ರೀ ಮುರಳೀ ನಾರಾಯಣರಾವ್ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. **ಸ್ಥಳ:** ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡ ರಸ್ತೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

ಉದಯವಾಹಿನಿ ಚಿತ್ರ



ಹಾಲಿನ ದರ ಏರಿಕೆ ಬಹುದಿನಗಳ ಬೇಡಿಕೆ

• ಉದಯವಾಹಿನಿ, ಬೆಂಗಳೂರು

ಹಾಲಿನ ದರ ಏರಿಕೆ ಬಹುದಿನಗಳ ಬೇಡಿಕೆಯಾಗಿತ್ತು, ಹೆಚ್ಚುವರಿ ಹಣ ರೈತರಿಗೆ ತಲುಪಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ನಂದಿನಿ ಬ್ರ್ಯಾಂಡ್ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದಕ್ಕೆ ವಿರೋಧ ಪಕ್ಷಗಳು ತೀವ್ರವಾಗಿ ಸರ್ಕಾರವನ್ನು ಟೀಕಿಸುತ್ತಿವೆ. ಇದಕ್ಕೆ ಸುದ್ದಿಗಾರರ ಜೊತೆ ಮಾತನಾಡುತ್ತಾ ಉತ್ತರಿಸಿದ ಸಿಎಂ ಡಿ.ಕೆ.ಶಿವಕುಮಾರ್, ಹೆಚ್ಚಳವಾಗಿರುವ 8 ರೂಪಾಯಿಯಲ್ಲಿ 7 ರೂಪಾಯಿ ರೈತರಿಗೆ ಹಾಗೂ 1 ರೂಪಾಯಿ ಸಹಕಾರ ಸಂಘಗಳಿಗೆ (ಕರ್ನಾಟಕ ಹಾಲು ಮಹಾಮಂಡಳ) ದೊರೆಯಲಿದೆ. ಪರಿಷ್ಕೃತ ದರ ನವೆಂಬರ್ 1ರಿಂದ ಜಾರಿಗೆ ಬರಲಿದೆ ಎಂದರು. ಇದು ಬಹುದಿನಗಳಿಂದ ಬಾಕಿ ಉಳಿದಿದ್ದ ಬೇಡಿಕೆಯಾಗಿತ್ತು. ದರ ಹೆಚ್ಚಳದಿಂದ ಬರುವ ಹೆಚ್ಚುವರಿ ಹಣ ರೈತರಿಗೆ ತಲುಪಲಿದೆ ಎಂದು ಹೇಳಿದರು.

ರೈತರು ಎದುರಿಸುತ್ತಿರುವ ಸಂಕಷ್ಟದ ಹಿನ್ನೆಲೆಯಲ್ಲಿ ಅವರಿಗೆ ನೆರವಾಗಲು ಕ್ರಮಕೈಗೊಳ್ಳುವಂತೆ ವಿಧಾನ ಪರಿಷತ್ತಿನ ಎಲ್ಲಾ ಪಕ್ಷಗಳ ಸದಸ್ಯರು ಒತ್ತಾಯಿಸಿದ್ದರು. ಹಾಲು ಉತ್ಪಾದಕರೇ ಜೀವಿಗಳಾಗಿದ್ದು ಪ್ರತಿಭಟನೆ ನಡೆಸಿದ್ದಾರೆ. ಸಹಕಾರ ಸಂಘಗಳು ಹಾಲಿನ ದರ ಹೆಚ್ಚಳಕ್ಕೆ ಆಗ್ರಹಿಸಿದ್ದವು' ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಹೈಕೋರ್ಟ್‌ಗೆ ಸರ್ಕಾರದ ಭರವಸೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಔಷಧಗಳು, ವೈದ್ಯಕೀಯ ಉಪಕರಣಗಳು ಹಾಗೂ ಬಳಕೆಯ ವಸ್ತುಗಳ ಮೂಲ ದರವನ್ನು ಬಹಿರಂಗವಾಗಿ ಪ್ರಕಟಿಸುವಂತೆ ಆಸ್ಪತ್ರೆಗಳಿಗೆ ಸೂಚಿಸಿ ಹೊರಡಿಸಿರುವ ಸುತ್ತೋಲೆಯನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ಒತ್ತಾಯಿಸುವುದಿಲ್ಲ ಎಂದು ರಾಜ್ಯ ಸರ್ಕಾರ ಹೈಕೋರ್ಟ್ ಗೆ ಮಾಹಿತಿ ನೀಡಿದೆ.

ಖಾಸಗಿ ಆಸ್ಪತ್ರೆಗಳ ಪರವಾಗಿ ಪ್ರೈವೇಟ್ ಹಾಸ್ಪಿಟಲ್ಸ್ ಅಂಡ್ ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ ಡಾ.ಶೋಭಾ ಪ್ರಕಾಶ್, ಪ್ರಿಸ್ಟೈನ್ ಹಾಸ್ಪಿಟಲ್ಸ್ ಅಂಡ್ ರಿಸರ್ಚ್ ಸೆಂಟರ್ ಪ್ರೈವೇಟ್ ಲಿಮಿಟೆಡ್‌ನ ವೈದ್ಯ ಡಾ.ಹಾಲಗೆರೆ ಮಲ್ಲಿಕಾರ್ಜುನ ಪ್ರಸನ್ನ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರ ಏಕಸದಸ್ಯ ಪೀಠಕ್ಕೆ ಸರ್ಕಾರ ಈ ಸ್ಪಷ್ಟನೆ ನೀಡಿದೆ. ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಬಿ.ವಿ.ಭಾನುಪ್ರಕಾಶ್, ಔಷಧಗಳು, ವೈದ್ಯಕೀಯ ಉಪಕರಣಗಳು ಮತ್ತು ಬಳಕೆಯ ವಸ್ತುಗಳ ಮೂಲ ದರವನ್ನು ಬಹಿರಂಗಪಡಿಸುವಂತೆ ಸರ್ಕಾರ ಅಕ್ಟೋಬರ್ 1ರಂದು ಸುತ್ತೋಲೆ ಹೊರಡಿಸಿದೆ. ಆದರೆ, ಅರ್ಜಿದಾರರು ಸುತ್ತೋಲೆ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿರುವುದು ತಡವಾಗಿದೆ. ಸುತ್ತೋಲೆಯಲ್ಲಿ ಉಲ್ಲೇಖಿಸಿರುವ ಕಾನೂನು ನಿಬಂಧನೆಗಳಿಗೆ ಅರ್ಜಿದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಸರ್ಕಾರಕ್ಕೆ ಸ್ವಲ್ಪ ಕಾಲಾವಕಾಶ ನೀಡಿದರೆ, ಸುತ್ತೋಲೆಯನ್ನು ಹಿಂಪಡೆದು ಹೊಸದಾಗಿ ಸುತ್ತೋಲೆ ಹೊರಡಿಸುವ ಸಾಧ್ಯತೆಯೂ ಇದೆ ಎಂದು ವಿವರಿಸಿದರು.

ಕಾರ್ಮೋಡ: ಕುಸಿದ ಇಳುವರಿ- ರೇಷ್ಮೆ ಕೃಷಿಗೂ ತಟ್ಟಿದ ಬಿಸಿ!

ಕೆಲವು ಕಡೆಗಳಲ್ಲಿ ಬೆಳೆಯೇ ಇಲ್ಲದಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಬೆಳೆ ಬಂದಿದ್ದರೂ ಇಳುವರಿ ತೀರಾ ಕಡಿಮೆ ಇದೆ ಅಥವಾ ಕಾಯಿಗಳ ಗಾತ್ರವೂ ಗಣನೀಯವಾಗಿ ಕುಗ್ಗಿದೆ.

• ಉದಯವಾಹಿನಿ, ಬೆಂಗಳೂರು

1 ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರು
2 ತೀವ್ರ ಬರಗಾಲದ ಪ್ರಭಾವಕ್ಕೆ ಒಳಗಾಗಿವೆ
3 ಕೇವಲ 358 ಮಿ ಮಳೆ ಮಾತ್ರ ಸುರಿದಿದೆ

ರಾಜ್ಯವು ಬರಗಾಲದ ಸಂಕಷ್ಟದಲ್ಲಿರುವಾಗ, ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಮತ್ತು ಮಾಗಡಿ ತಾಲ್ಲೂಕುಗಳ ಹಲವು ಹಳ್ಳಿಗಳಲ್ಲಿ ರಸ್ತೆಗಳ ಇಕ್ಕೆಲಗಳಲ್ಲಿ ಕಾಣಸಿಗುವ ಹಸಿರು ಪರಿಸರವು ಗಮನ ಸೆಳೆಯುತ್ತದೆ.

ಆದರೆ, ಇದು ಇಲ್ಲಿನ ರೈತರ ಮುಖದಲ್ಲಿ ನಗು ಮೂಡಿಸಿಲ್ಲ. ಇದಕ್ಕೆ ಕಾರಣ, ಅಕಾಲಿಕ ಮತ್ತು ಕೊರತೆಯ ಮಳೆಯು ಬೆಳೆ ಇಳುವರಿಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಕೆಲವು ಕಡೆಗಳಲ್ಲಿ ಬೆಳೆಯೇ ಇಲ್ಲದಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಬೆಳೆ ಬಂದಿದ್ದರೂ ಇಳುವರಿ ತೀರಾ ಕಡಿಮೆ ಇದೆ ಅಥವಾ ಕಾಯಿಗಳ ಗಾತ್ರವೂ ಗಣನೀಯವಾಗಿ ಕುಗ್ಗಿದೆ.

ಹಿಂದೆ ರಾಮನಗರ ಜಿಲ್ಲೆ ಎಂದು ಕರೆಯಲ್ಪಡುತ್ತಿದ್ದ ಈಗಿನ ಬೆಂಗಳೂರು ದಕ್ಷಿಣ ಜಿಲ್ಲೆಯು, ಬೆಂಗಳೂರಿನಿಂದ ಸುಮಾರು 50 ಕಿ.ಮೀ ದೂರದಲ್ಲಿದೆ. ಇದು ರಾಮನಗರ, ಮಾಗಡಿ, ಚನ್ನಪಟ್ಟಣ ಮತ್ತು ಕನಕಪುರ ಎಂಬ ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಭಾಗವನ್ನು ಪ್ರತಿನಿಧಿಸುತ್ತಾರೆ.

ರಾಮನಗರ ಮತ್ತು ಮಾಗಡಿ ತಾಲ್ಲೂಕುಗಳು ಅಧಿಕೃತವಾಗಿ ಬರಪೀಡಿತ ಪ್ರದೇಶಗಳೆಂದು ಘೋಷಿಸಲ್ಪಟ್ಟಿದ್ದರೆ, ಉಳಿದ ಎರಡು ತಾಲ್ಲೂಕುಗಳು ಕೂಡ ತೀವ್ರ ಬರಗಾಲದ ಪ್ರಭಾವಕ್ಕೆ ಒಳಗಾಗಿವೆ. ನೈಋತ್ಯ ಮುಂಗಾರು ಅವಧಿಯಲ್ಲಿ ಈ ಜಿಲ್ಲೆಯಲ್ಲಿ ವಾಡಿಕೆಯಂತೆ 436 ಮಿ.ಮೀ ಮಳೆಯಾಗಬೇಕಿತ್ತು, ಆದರೆ ಕೇವಲ 358 ಮಿ.ಮೀ ಮಳೆ ಮಾತ್ರ ಸುರಿದಿದೆ. ಇಲ್ಲಿನ ಕೃಷಿ ಚಟುವಟಿಕೆಗಳು ಹೆಚ್ಚಾಗಿ ಕೊಳವೆಬಾವಿಗಳು, ಕಾಲುವೆಗಳು ಮತ್ತು ಮಳೆನೀರನ್ನೇ ಅವಲಂಬಿಸಿವೆ. ಇಲ್ಲಿನ ಬಹುತೇಕ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರೆ, ಇನ್ನೂ ಅನೇಕ ರೈತರು ರಾಗಿ, ತೆಂಗು, ಮಾವು ಮತ್ತು ಇತರ ಬೆಳೆಗಳನ್ನು ಬೆಳೆಯುತ್ತಾರೆ.

ಉದಯವಾಹಿನಿ ಚಿತ್ರ

ರಾಮನಗರ ತಾಲ್ಲೂಕಿನ ಕೂನಗಲ್ಲು ಗ್ರಾಮದ ರೈತ ಚಂದ್ರಶೇಖರಯ್ಯ ಅವರ ಬಳಿ 110 ಮಾವಿನ ಮರಗಳಿವೆ. ಸಾಮಾನ್ಯವಾಗಿ ಇಲ್ಲಿ ನವೆಂಬರ್ ತಿಂಗಳಲ್ಲೇ ಮಾವಿನ ಮರಗಳು ಹೂ ಬಿಡಲು ಪ್ರಾರಂಭಿಸುತ್ತವೆ. ಆದರೆ ಈ ವರ್ಷ, ಈಗ ಹೊಸದಾಗಿ ಎಲೆಗಳು ಚಿಗುರುತ್ತಿವೆ, ಹೀಗಾಗಿ ಹೂ ಬಿಡುವ ಪ್ರಕ್ರಿಯೆ ಫೆಬ್ರವರಿ ತಿಂಗಳವರೆಗೆ ವಿಳಂಬವಾಗಬಹುದು.

ಆ ನಂತರ ಹೂವುಗಳು ಕಾಯಿಗಳಾಗಿ, ಮುಂದೆ ಹಣ್ಣುಗಳಾಗುತ್ತವೆ. ಈ ಬಾರಿ ಎಷ್ಟು ಇಳುವರಿ ಸಿಗುತ್ತದೆ ಎಂದು ಹೇಳಲಾಗದು, ಆದರೆ ಬಹಳ ಕಡಿಮೆ ಸಿಗುವ ಸಾಧ್ಯತೆಯಿದೆ. ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ, ಅಂದರೆ ನಮಗೆ ಮಳೆಯ ಅಗತ್ಯವಿದ್ದಾಗ ಮಳೆ ಬರಲಿಲ್ಲ. ಈಗ ಸ್ವಲ್ಪ ಮಳೆಯಾಗಿದೆ, ಆದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು.

ಮಾಗಡಿ ತಾಲ್ಲೂಕಿನ ಚೆಂದರಾಯನಹಳ್ಳಿಯವರಾದ, ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕಾಲೇಜು ವಿದ್ಯಾರ್ಥಿ ಭವನ್, ಈ ವರ್ಷ ಎರಡು ಬಾರಿ ರಾಗಿ ಬಿತ್ತನೆ ಮಾಡಿದ್ದರೂ, ಎರಡೂ ಬಾರಿ ಮೊಳಕೆ ಬರಲಿಲ್ಲ ಎಂದು ಹೇಳಿದರು. ಆಗಸ್ಟ್‌ನಲ್ಲಿ ಮಳೆಯಾಗಿದ್ದರೆ, ನಾವು ಈ ಪರಿಸ್ಥಿತಿಗೆ ಬರುತ್ತಿರಲಿಲ್ಲ, ಎಂದು ಅವರು ಅಭಿಪ್ರಾಯಪಟ್ಟರು.

ಉಳಿದ ಎರಡು ತಾಲ್ಲೂಕುಗಳು ಕೂಡ ತೀವ್ರ ಬರಗಾಲದ ಪ್ರಭಾವಕ್ಕೆ ಒಳಗಾಗಿವೆ.

> 30 ತೆಂಗಿನ ಮರಗಳನ್ನು ಹೊಂದಿರುವ ತೋಟವನ್ನು ನಿರ್ವಹಿಸುತ್ತಿದ್ದಾರೆ. ನಮಗೆ ಪ್ರತಿ ಎರಡು ತಿಂಗಳಿಗೊಮ್ಮೆ ಬೆಳೆ ಸಿಗುತ್ತದೆ. ಸಾಮಾನ್ಯವಾಗಿ ನನಗೆ ಸುಮಾರು 1,000 ತೆಂಗಿನಕಾಯಿಗಳು ಸಿಗುತ್ತಿದ್ದವು, ಆದರೆ ಈ ಬಾರಿ ಅವು ಅರ್ಧದಷ್ಟು ಕಡಿಮೆಯಾಗಿವೆ. ತೆಂಗಿನಕಾಯಿಗಳ ಗಾತ್ರ ಕೂಡ ಚಿಕ್ಕದಾಗಿದೆ, ಎಂದು ತಿಳಿಸಿದ್ದಾರೆ.- ರಾಘವೇಂದ್ರ

> ಬಿಸಿಲಿನ ತೀವ್ರತೆಯಿಂದಾಗಿ ಸೊಪ್ಪಿನ ಇಳುವರಿ ಕಡಿಮೆಯಾಗಿದೆ, ಜೊತೆಗೆ ಮಳೆಯಿಲ್ಲದ ವಾತಾವರಣದಿಂದಾಗಿ ನುಸಿ ಬಾಧೆಯೂ ಹೆಚ್ಚಾಗಿದ್ದು, ಇದು ಒಟ್ಟಾರೆ ಇಳುವರಿಯ ಮೇಲೆ ಮತ್ತಷ್ಟು ಪರಿಣಾಮ ಬೀರಿದೆ, ಎಂದು ಅವರು ಹೇಳಿದರು.
> - ಗಂಗರಾಜನಹಳ್ಳಿಯ ನಾಗರಾಜ

14 ಕೋಟಿ ರೂ. ವೆಚ್ಚದ ಪ್ರಾಜೆಕ್ಟ್‌ಗೆ ಸಚಿವ ಸಂಪುಟ ಅನುಮೋದನೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು ಹಾಗೂ ಅವುಗಳ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ಉದ್ದೇಶದ 'ಪ್ರಾಜೆಕ್ಟ್ ಕೆ-ಮಾನಿಟರ್' ಯೋಜನೆಯನ್ನು 14 ಕೋಟಿ ರೂಪಾಯಿ ವೆಚ್ಚದಲ್ಲಿ ಜಾರಿಗೊಳಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೃಹತ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಿ, ಅವುಗಳು ಜನರಿಗೆ ಎಷ್ಟರಮಟ್ಟಿಗೆ ತಲುಪುತ್ತಿವೆ ಎಂಬುದನ್ನು ಪರಿಶೀಲಿಸಲು ಸಚಿವ ಸಂಪುಟ ನಿರ್ಧರಿಸಿದೆ' ಎಂದು ತಿಳಿಸಿದರು.

ಕೆ-ಮಾನಿಟರ್ ಯೋಜನೆಯಡಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಸೋರಿಕೆಗಳಿವೆಯೇ, ಅವುಗಳ ಅನುಷ್ಠಾನದಲ್ಲಿ ಲೋಪದೋಷಗಳಿವೆಯೇ ಹಾಗೂ ಈ ಯೋಜನೆಗಳಿಂದ ಜನರಿಗೆ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಯಾವ ರೀತಿಯ ಪ್ರಯೋಜನಗಳಾಗುತ್ತಿವೆ ಎಂಬುದರ ಕುರಿತು ಅಧ್ಯಯನ ನಡೆಸಲಾಗುವುದು ಎಂದು ವಿವರಿಸಿದರು.

ಯೋಜನೆಯ ಮೊದಲ ಹಂತದಲ್ಲಿ ವಿವಿಧ ಸರ್ಕಾರಿ ಯೋಜನೆಗಳ ಒಂದು ಲಕ್ಷ ಫಲಾನುಭವಿಗಳನ್ನು ಗುರುತಿಸಿ, 60 ಸಾವಿರ ಮಂದಿಯಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು. ಈ ಮೌಲ್ಯಮಾಪನದ ಫಲಿತಾಂಶಗಳ ಆಧಾರದಲ್ಲಿ ಸರ್ಕಾರಿ ಯೋಜನೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ತರಲು ಅವಕಾಶವಿದೆ ಎಂದರು.

ಸರ್ಕಾರದ ಐದು ಪ್ರಮುಖ ಗ್ಯಾರಂಟಿ ಯೋಜನೆಗಳನ್ನೂ ಈ ಮೌಲ್ಯಮಾಪನದ ವ್ಯಾಪ್ತಿಗೆ ತರಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಕೃಷ್ಣ ಬೈರೇಗೌಡ, 'ಗ್ಯಾರಂಟಿ ಯೋಜನೆಗಳು ಸೇರಿದಂತೆ ಎಲ್ಲಾ ಯೋಜನೆಗಳನ್ನೂ ಪರಿಗಣಿಸಲಾಗುವುದು.

ಕಾಂಗ್ರೆಸ್ ಕಾರ್ಯಕರ್ತರನ್ನು ರೈಲ್ವೆ ಇಲಾಖೆ ತಡೆಯುತ್ತಿದೆ

• ಉದಯವಾಹಿನಿ, ಬೆಂಗಳೂರು

ನವೆಂಬರ್ 1ರಂದು ದೆಹಲಿಯಲ್ಲಿ ನಡೆಯಲಿರುವ ಬೃಹತ್ ರ್ಯಾಲಿಯಲ್ಲಿ ಪಾಲ್ಗೊಳ್ಳಲು ತೆರಳುವ ಕಾಂಗ್ರೆಸ್ ಕಾರ್ಯಕರ್ತರಿಗೆ ವಿಶೇಷ ರೈಲು ವ್ಯವಸ್ಥೆ ಕಲ್ಪಿಸುವಂತೆ ಮಾಡಿದ ಮನವಿಯನ್ನು ರೈಲ್ವೆ ಅಧಿಕಾರಿಗಳು ತಿರಸ್ಕರಿಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು, ಬೆಂಗಳೂರಿನಿಂದ ಒಂದು ಮತ್ತು ಹುಬ್ಬಳ್ಳಿಯಿಂದ ಒಂದು ಸೇರಿದಂತೆ ಎರಡು ವಿಶೇಷ ರೈಲುಗಳನ್ನು ಒದಗಿಸುವಂತೆ ರೈಲ್ವೆ ಇಲಾಖೆಗೆ ಮನವಿ ಮಾಡಲಾಗಿತ್ತು. ಆದರೆ, ಅಧಿಕಾರಿಗಳು ಅದನ್ನು ತಿರಸ್ಕರಿಸಿದ್ದಾರೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ನಾವು ಕೆಕೆ ಎಕ್ಸ್‌ಪ್ರೆಸ್ ಸೇರಿದಂತೆ ಇತರ ರೈಲುಗಳ ಸಾಮಾನ್ಯ ಬೋಗಿಗಳಲ್ಲೇ ದೆಹಲಿಗೆ ತೆರಳುತ್ತೇವೆ. ಕೆಲವು ಕಾರ್ಯಕರ್ತರು ಚೆನ್ನೈಗೆ ತೆರಳಿ, ಅಲ್ಲಿಂದ ಸಂಪರ್ಕ ರೈಲುಗಳ ಮೂಲಕ ದೆಹಲಿಗೆ ಪ್ರಯಾಣಿಸುತ್ತಿದ್ದಾರೆ. ಕಟ್ಪಾಡಿ ಜಂಕ್ಷನ್‌ನಂತಹ ಸ್ಥಳಗಳಲ್ಲಿ ಕೇರಳದಿಂದ ದೆಹಲಿಗೆ ತೆರಳುವ ರೈಲುಗಳನ್ನು ಹತ್ತುತ್ತಿದ್ದಾರೆ. ಇನ್ನು ಕೆಲವರು ವಿಮಾನ ಸೇರಿದಂತೆ ಇತರ ಸಾರಿಗೆ ವ್ಯವಸ್ಥೆಗಳ ಮೂಲಕ ದೆಹಲಿ ತಲುಪಿದ್ದಾರೆ ಎಂದು ಹೇಳಿದರು. ರೈಲ್ವೆ ಅಧಿಕಾರಿಗಳ ವರ್ತನೆಯಿಂದ ನಮಗೆ ನಿರಾಸೆಯಾಗಿದೆ. ರ್ಯಾಲಿಗಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳಿಂದ ಸಾವಿರಾರು ಕಾರ್ಯಕರ್ತರನ್ನು ದೆಹಲಿಗೆ ಕರೆದೊಯ್ಯುವ ಗುರಿಯನ್ನು ಪಕ್ಷ ಹೊಂದಿದೆ ಎಂದು ತಿಳಿಸಿದರು.

ಹೈದರಾಬಾದ್‌ನಿಂದ ದೆಹಲಿಗೆ ಎರಡು ವಿಶೇಷ ರೈಲುಗಳನ್ನು ಒದಗಿಸುವಂತೆ ಸಾಕಷ್ಟು ಮುಂಚಿತವಾಗಿಯೇ ಮನವಿ ಸಲ್ಲಿಸಲಾಗಿತ್ತು. ಆದರೆ, ರೈಲ್ವೆ ಅಧಿಕಾರಿಗಳು ಐದು ದಿನಗಳ ಕಾಲ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಕೊನೆಗೆ ಹಿಂದಿನ ರಾತ್ರಿ ಹೊರಡಬೇಕಿದ್ದ ವಿಶೇಷ ರೈಲಿನ ಮನವಿಯನ್ನು ತಿರಸ್ಕರಿಸಿದ್ದಾರೆ ಎಂದು ಆರೋಪಿಸಿವೆ. ರೈಲ್ವೆ ಸಚಿವಾಲಯದ ಒತ್ತಡದಿಂದ ಅಧಿಕಾರಿಗಳು ಈ ರೀತಿ ವರ್ತಿಸುತ್ತಿರಬಹುದು ಎಂಬ ಆರೋಪಗಳೂ ಕೇಳಿ ಬಂದಿವೆ.

ಮಾಜಿ ಮಹಾಪೌರರಾದ ಎಂ.ಗೌತಮ್ ಕುಮಾರ್ ರವರ ಹುಟ್ಟುಹಬ್ಬದ ಸಂಭ್ರಮಾಚರಣೆ

• ಉದಯವಾಹಿನಿ, ಬೆಂಗಳೂರು

ಮಾಜಿ ಮಹಾಪೌರರು, ಬೆಂಗಳೂರು ಕೇಂದ್ರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಂ.ಗೌತಮ್ ಕುಮಾರ್ ಅವರ ಹುಟ್ಟುಹಬ್ಬದ ಸಂಭ್ರಮಾಚರಣೆ. ಲೋಕಸಭಾ ಸದಸ್ಯರಾದ ಪಿ.ಸಿ.ಮೋಹನ್ ರವರು, ಕೇಂದ್ರ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಸಪ್ತಗಿರಿಗೌಡರು ಎಂ.ಗೌತಮ್ ಕುಮಾರ್ ರವರಿಗೆ ಶುಭ ಕೋರಿ ಸನ್ಮಾನಿಸಿದರು. ಕಾರ್ಯದರ್ಶಿ ಯದುಕುಮಾರ್ ಗೌಡ, ಮಹಿಳಾ ಮುಖಂಡರುಗಳಾದ ನೀತಾ ರೆಡ್ಡಿ, ಆನಿತಾ, ರೇವತಿ, ವರ್ಷಾ ಶರ್ಮ, ಮಾಜಿ ಪಾಲಿಕೆ ಸದಸ್ಯ ಕೃಷ್ಣಪ್ಪ, ಆರ್.ಎಸ್.ಎಸ್.ಮುಖಂಡರು, ಬಿಜೆಪಿ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು. ಗೋಪೂಜೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಎಂ.ಗೌತಮ್ ಕುಮಾರ್ ರವರು ಮಾತನಾಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಭಾರತೀಯ ಜನತಾ ಪಾರ್ಟಿ ನನ್ನ ಜೀವನದಲ್ಲಿ ಶಿಸ್ತು, ತಾಳ್ಮೆ ಮತ್ತು ಸಂಘಟನೆ ಹೋರಾಟ ಇವೆಲ್ಲವು ಕಲಿಸಿತು.

ದೇಶ ಮೊದಲು, ದೇಶಕ್ಕಾಗಿ ನಾವು ಎಂಬ ದೇಶಭಕ್ತಿ ಕಲಿಸಿತು. ಬಿಜೆಪಿ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನು ದೇಶದ ಪ್ರಧಾನಿಯಾಗಬಲ್ಲ ಎಂಬುದು ನಿರೂಪಿಸಿದ್ದಾರೆ. ಚಹಾ ಮಾರುತ್ತಿದ್ದ ಬಾಲಕ ಇಂದು ದೇಶದ ಪ್ರಧಾನಿ ಸ್ಥಾನ ಅಲಂಕಾರಿಸಿದ್ದಾರೆ . ಸಾಮಾನ್ಯ ಕಾರ್ಯಕರ್ತನಾದ ನನಗೆ ಎರಡು ಬಾರಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ

ಉದಯವಾಹಿನಿ ಚಿತ್ರ



ಸ್ಪರ್ಧಿಸಲು ಅವಕಾಶ ಕೊಟ್ಟರು. ಜನರ ಬೆಂಬಲ ಮತ್ತು ಪಕ್ಷದ ಸಹಕಾರದಿಂದ ಎರಡು ಬಾರಿ ಬಿಬಿಎಂಪಿ ಸದಸ್ಯನಾಗಿ ಆಯ್ಕೆಯಾದೇ. ನಂತರ ಬೆಂಗಳೂರುನಗರ ಮಹಾಪೌರರಾಗಿ ಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗಿತ್ತು. ಪಕ್ಷ ಎಲ್ಲವು ನನಗೆ ಕೊಟ್ಟಿದೆ.

ಮುಂಬರುವ ಪಾಲಿಕೆ ಚುನಾವಣೆ ಮತ್ತು ವಿಧಾನಸಭಾ ಚುನಾವಣೆ ಬಿಜೆಪಿ, ಜೆಡಿಎಸ್ ಮೈತ್ರಿ ಪಕ್ಷಗಳು ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬರಲಿದೆ. ಪಕ್ಷ ಸಂಘಟನೆಗೆ ಮೊದಲ ಆದ್ಯತೆ. ಕಾರ್ಯಕರ್ತರೆ ಪಕ್ಷದ ಜೀವಾಳ.

ರಾಜಕೀಯ ಮತ್ತು ಸಮಾಜಸೇವೆಯಲ್ಲಿ ಸದಾ ನನ್ನ ಜೊತೆಯಲ್ಲಿ ನಿಂತು ಸಹಕಾರ, ಬೆಂಬಲ ನೀಡಿದ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಜನತೆಗೆ ಹೃತ್ಪೂರ್ವಕ ಧನ್ಯವಾದಗಳು ಅರ್ಪಿಸುತ್ತೇನೆ ಎಂದು ಹೇಳಿದರು.

ಸೋರಹುಣಸೆ ಹಾಲು ಉತ್ಪಾದಕರ ಸಂಘ ನಿಯಮಿತ ನೂತನ ಕಟ್ಟಡ ಉದ್ಘಾಟನೆ

• ಉದಯವಾಹಿನಿ, ಕೆ.ಆರ್.ಪುರ

ನಗರೀಕರಣದ ತೀವ್ರ ತರಹದ ಸವಾಲುಗಳ ಮಧ್ಯೆಯೂ ಸೋರಹುಣಸೆ ಹಾಲು ಉತ್ಪಾದಕರ ಸಹಕಾರ ಸಂಘವು ಸಾವಿರಾರು ಲೀಟರ್ ಹಾಲು ಮಾರಾಟ ಮಾಡುತ್ತಿರುವುದು ಶ್ಲಾಘನೀಯ ಮತ್ತು ಅತ್ಯಂತ ಉತ್ತಮ ಕಾರ್ಯವಾಗಿದೆ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ತಿಳಿಸಿದರು.ಮಹದೇವಪುರ ಕ್ಷೇತ್ರದ ವರ್ತೂರು ಸಮೀಪದ ಸೋರಹುಣಸೆ ಹಾಲು ಉತ್ಪಾದಕರ ಸಂಘ ನಿಯಮಿತ ನೂತನ ಕಟ್ಟಡ ಉದ್ಘಾಟನೆಯನ್ನು ನೆರವೇರಿಸಿ ಮತನಾಡಿದ ಅವರು. ಬೆಂಗಳೂರಿ ನಂತಹ ಮಹಾನಗರದ ಸುತ್ತಮುತ್ತಲಿನ ಪ್ರದೇಶಗಳು ವೇಗವಾಗಿ ನಗರೀಕರಣಗೊಳ್ಳುತ್ತಿರುವಾಗ (ಕೃಷಿ ಭೂಮಿ ಮತ್ತು ಮೇವಿನ ಜಾಗಗಳು ಕಡಿಮೆಯಾಗುತ್ತಿರುವಾಗ), ಸ್ಥಳೀಯವಾಗಿ ಹೈನುಗಾರಿಕೆಯನ್ನು ಜೀವಂತವಾಗಿಡುವುದು ಸುಲಭದ ಮಾತಲ್ಲ. ಇಂತಹ ಪರಿಸ್ಥಿತಿಯಲ್ಲೂ ಈ ಸಂಘವು ಸಾಧಿಸುತ್ತಿರುವ ಉತ್ತಮ ಎಂದರು. ಸಂಘದ ಅಧ್ಯಕ್ಷರು ಜಯರಾಮ್ ರೆಡ್ಡಿ ಮತನಾಡಿ, ಹವಾಮಾನ ವೈಪರೀತ್ಯ, ಬರಗಾಲ ಹಾಗೂ ಜಾನುವಾರುಗಳ ನಿರ್ವಹಣಾ ವೆಚ್ಚ (ಹಿಂಡಿ, ಬೂಸಾ ಇತ್ಯಾದಿ) ಗಣನೀಯವಾಗಿ ಹೆಚ್ಚಿದೆ. ಹಾಲಿನ ದರ ಏರಿಕೆಯ ಲಾಭ ನೇರವಾಗಿ ತಳಮಟ್ಟದ ರೈತರಿಗೆ ಸಿಗುತ್ತಿಲ್ಲ ಎಂಬ ಆಕ್ರೋಶ ವ್ಯಕ್ತಪಡಿಸಿದರು. ಸಂಘದ ಉಪಾಧ್ಯಕ್ಷ ಆರ್. ವಿಶ್ವನಾಥ್, ಹಿರಿಯ ಮುಖಂಡರಾದ ರಾಘವೇಂದ್ರ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ವಿಶ್ವನಾಥ್ ರೆಡ್ಡಿ, ಕಾರ್ಯದರ್ಶಿ ಮಂಜುನಾಥ್ ರೆಡ್ಡಿ, ಸಂಘದ ನಿರ್ದೇಶಕರು, ಗ್ರಾಮಸ್ಥರು ಸೇರಿದಂತೆ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಅಗ್ನಿಶಾಮಕ ಠಾಣೆ ಸ್ಥಾಪನೆಗೆ ರಾಜ್ಯ ಸರ್ಕಾರ ಮುಂದು..!

• ಉದಯವಾಹಿನಿ, ಬೆಂಗಳೂರು

ಬೆಂಕಿ ಅವಘಡ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ತ್ವರಿತವಾಗಿ ನೆರವು ಒದಗಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ತಾಲ್ಲೂಕುಗಳು ಹಾಗೂ ಪ್ರಮುಖ ಹೋಬಳಿಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಯೋಜನೆ ರೂಪಿಸುತ್ತಿದೆ. ಬನ್ನೇರುಘಟ್ಟ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ನಡೆದ 2ನೇ ಅಖಿಲ ಭಾರತ ಅಗ್ನಿಶಾಮಕ ಸೇವೆಗಳ ಕ್ರೀಡಾಕೂಟ-2026ಕ್ಕೆ ಚಾಲನೆ ನೀಡಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾತನಾಡಿದರು. ಈ ವೇಳೆ ಅಗತ್ಯ ಮೂಲಸೌಕರ್ಯ, ಸೌಲಭ್ಯಗಳು ಮತ್ತು ಆರ್ಥಿಕ ನೆರವು ಒದಗಿಸುವ ಮೂಲಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯನ್ನು ಬಲಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ದೇಶದ ಪ್ರತಿಯೊಂದು ತಾಲ್ಲೂಕಿನಲ್ಲೂ ಅಗ್ನಿಶಾಮಕ ಠಾಣೆ ಸ್ಥಾಪಿಸಬೇಕೆಂಬ ಕೇಂದ್ರ ಸರ್ಕಾರದ ಆಶಯಕ್ಕೆ ಅನುಗುಣವಾಗಿ ರಾಜ್ಯದಲ್ಲಿಯೂ ಈ ವಿಸ್ತರಣಾ ಯೋಜನೆ ರೂಪಿಸಲಾಗುತ್ತಿದೆ. ವೇಗ ಹೆಚ್ಚಲಿದ್ದು, ಸಂಕಷ್ಟದಲ್ಲಿರುವ ಜನರನ್ನು ಅಗ್ನಿಶಾಮಕ ಸಿಬ್ಬಂದಿ ಶೀಘ್ರವಾಗಿ ತಲುಪಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ನಿಯಮ ಉಲ್ಲಂಘಿಸಿದ 24 ಕುಡಿಯುವ ನೀರಿನ ಘಟಕಗಳಿಗೆ ನೋಟಿಸ್..!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕಳಪೆ ಹಾಗೂ ಅಶುದ್ಧ ಪ್ಯಾಕೇಜ್ಡ್ ಕುಡಿಯುವ ನೀರಿನ ಮಾರಾಟಕ್ಕೆ ಬ್ರೇಕ್ ಹಾಕಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಭಾರಿ ಕಾರ್ಯಾಚರಣೆ ನಡೆಸಿದೆ. ನಿಯಮ ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದ 24 ಪ್ಯಾಕೇಜ್ಡ್ ಕುಡಿಯುವ ನೀರಿನ ಘಟಕಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದ್ದು, ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ. ಈ ಕುರಿತು ಮಾಹಿತಿ ನೀಡಿರುವ

ಉದಯವಾಹಿನಿ ಚಿತ್ರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್, ರಾಜ್ಯದಾದ್ಯಂತ 45 ಪ್ಯಾಕೇಜ್ಡ್ ಕುಡಿಯುವ ನೀರಿನ ತಯಾರಿಕಾ ಘಟಕಗಳನ್ನು ಪರಿಶೀಲಿಸಲಾಗಿದೆ. ಪ್ರಯೋಗಾಲಯ ಪರೀಕ್ಷೆಗಾಗಿ 32 ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ವಿವಿಧ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ 24 ಘಟಕಗಳಿಗೆ ನೋಟಿಸ್ ನೀಡಲಾಗಿದೆ ಎಂದು ಹೇಳಿದ್ದಾರೆ.

ಈ ವಿಶೇಷ ತಪಾಸಣಾ ಕಾರ್ಯಾಚರಣೆಗಾಗಿ ಆಹಾರ ಸುರಕ್ಷತಾ ಅಧಿಕಾರಿಗಳನ್ನೊಳಗೊಂಡ 23 ತಂಡಗಳನ್ನು ಜಿಲ್ಲೆಗಳಲ್ಲಿ ನಿಯೋಜಿಸಲಾಗಿತ್ತು. ಶುಕ್ರವಾರವೂ ತಪಾಸಣೆ ಮುಂದುವರಿಯಲಿದೆ.

ಪರಿಶೀಲನೆ ವೇಳೆ ಹಲವು ಘಟಕಗಳಲ್ಲಿ ಸ್ವಚ್ಛತೆಯ ಕೊರತೆ, ಸಿಬ್ಬಂದಿಗೆ ವೈದ್ಯಕೀಯ ಪ್ರಮಾಣಪತ್ರಗಳಿಲ್ಲದಿರುವುದು, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಪರವಾನಗಿ ಇಲ್ಲದಿರುವುದು, ಲೇಬಲ್‌ಗಳಲ್ಲಿನ ಲೋಪಗಳು ಕೀಟ ನಿಯಂತ್ರಣ ಪ್ರಮಾಣಪತ್ರಗಳ ಕೊರತೆ ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ನ. 1 ಮಂಜುನಾಥೇಶ್ವರ ದೇವಾಲಯ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ನಗರದ ವೈಟ್‌ಫೀಲ್ಡ್‌ನ ಕ್ಷೇತ್ರ ಅಜ್ಜಗೊಂಡನ ಹಳ್ಳಿಯಲ್ಲಿ ನೆಲೆಸಿರುವ ಮಂಜುನಾಥೇಶ್ವರ ಸ್ವಾಮಿಯ ಮಂಡಲಾಭಿಷೇಕ ಹಾಗೂ ನೂತನ ಕಲ್ಯಾಣ ಮಂಟಪ ಉದ್ಘಾಟನಾ ಸಮಾರಂಭವನ್ನು ನ. 1 ರಂದು ಭಾನುವಾರ ಏರ್ಪಡಿಸಲಾಗಿದೆ.

ನಾಳೆ ಬೆಳಿಗ್ಗೆ ದೇವರಿಗೆ ಗಣಪತಿ ಪೂಜೆ, ಕಳಶಸ್ಥಾಪನೆ, ವಾಸ್ತು ರಾಕ್ಷೆಘ್ನ ಹೋಮ ಹಾಗೂ ಬಲಿಹರಣ,, ಭಾನುವಾರ ನ. 1 ರಂದು ಬೆಳಿಗ್ಗೆ 9ಕ್ಕೆ ಶ್ರೀ ಗಿರಿಜಾ ಕಲ್ಯಾಣೋತ್ಸವ, ಮಧ್ಯಾಹ್ನ 12 ಗಂಟೆಗೆ ಕಲ್ಯಾಣ ಮಂಟಪ ಉದ್ಘಾಟನೆ ನೆರವೇರಲಿದೆ.

ಈ ಕಾರ್ಯಕ್ರಮವನ್ನು ತುಮಕೂರಿನ ನೊಣವಿನಕೆರೆಯ ಅಜ್ಜಯ್ಯ ಸ್ವಾಮಿ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾ ಸ್ವಾಮಿಗಳು ಉದ್ಘಾಟಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಹೊಸಕೋಟೆ ಕ್ಷೇತ್ರದ ಶಾಸಕ ಶರತ್ ಬಚ್ಚೇಗೌಡ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಬೈರತಿ ಸುರೇಶ್, ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ, ಎಸ್.ಆರ್. ವಿಶ್ವನಾಥ್, ಸಮೃದ್ಧಿ ವಿ. ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್, ಮಾಜಿ ಸಚಿವ ಆರ್. ಕೃಷ್ಣಪ್ಪ, ಸಿಂಗನಾಯಕನಹಳ್ಳಿ ರೈತ ಸೇವಾ ಸಹಕಾರ ಸಂಘದ ಅಧ್ಯಕ್ಷೆ ಡಾ. ವಾಣಿಶ್ರೀ ವಿಶ್ವನಾಥ್, ಕರ್ನಾಟಕ ಚಿತ್ರಕಲಾ ಪರಿಷತ್ ಉಪಾಧ್ಯಕ್ಷ ಎ. ರಾಮಕೃಷ್ಣಪ್ಪ, ಬಿಬಿಎಂಪಿ ಮಾಜಿ ಸದಸ್ಯ ಸಿ.ಆರ್. ಜಯಪ್ಪರೆಡ್ಡಿ, ಎನ್. ಶ್ರೀನಿವಾಸ್ ಸಿಂಡಿಕೇಟ್ ಬ್ಯಾಂಕ್ ಎ.ಜಿ.ಎಂ. ಅವರುಗಳು ಆಗಮಿಸಲಿದ್ದಾರೆ.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ದೇವಸ್ಥಾನದ ಅಧ್ಯಕ್ಷ ಕೆ.ಎನ್. ರಮೇಶ್ ಹಾಗೂ ಟ್ರಸ್ಟಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕೇಂದ್ರೀಯ ಕಾರಾಗೃಹ ವಿಸ್ತರಣೆ; ಭೂಸ್ವಾಧೀನಕ್ಕೆ ಹೈಕೋರ್ಟ್ ಅನುಮತಿ

ಬದಲಾಗಿ, ಸಂಸ್ಥೆಯ ಒಟ್ಟಾರೆ ಕಾರ್ಯನಿರ್ವಹಣೆಯ ಅವಶ್ಯಕತೆಗಳು ಮತ್ತು ದೀರ್ಘಕಾಲೀನ ಕಾರ್ಯಾಚರಣೆಯ ಅಗತ್ಯಗಳ ಹಿನ್ನೆಲೆಯಲ್ಲಿ ಪರಿಗಣಿಸಬೇಕು.

• ಉದಯವಾಹಿನಿ, ಬೆಂಗಳೂರು

1 ಹೆಚ್ಚುವರಿ ಭೂಮಿಯ ಅಗತ್ಯವಿದೆ
2 ಈಗಿನ ಕಟ್ಟಡಗಳಿಗೆ ಮಾತ್ರ ಸೀಮಿತ
3 ಕಟ್ಟಡಗಳು, ವಸತಿ ಬಡಾವಣೆಗಳು

ಪರಪ್ಪನ ಅಗ್ರಹಾರದಲ್ಲಿ, ಅತಿಯಾದ ಜನಸಂದಣಿಯಿರುವ ಕಾರಣ ಕೇಂದ್ರ ಕಾರಾಗೃಹದ ವಿಸ್ತರಣೆ ಮತ್ತು ಭದ್ರತೆಗಾಗಿ ಇದರಲ್ಲಿ ಬಫರ್ ವಲಯ ಮತ್ತು ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣವೂ ಸೇರಿದೆ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿದಿದೆ.

ಕಾರಾಗೃಹ ಮೂಲಸೌಕರ್ಯಗಳ ಸ್ಥಾಪನೆ ಮತ್ತು ವಿಸ್ತರಣೆಯು ರಾಜ್ಯದ ಪ್ರಮುಖ ಜವಾಬ್ದಾರಿಯಾಗಿದೆ. ಇದು ಕೇವಲ ಕೈದಿಗಳಿಗೆ ವಸತಿ ಕಲ್ಪಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ, ಕೈದಿಗಳ ಸುರಕ್ಷತೆ (ಕಸ್ಟೋಡಿಯಲ್ ಸೆಕ್ಯುರಿಟಿ), ಪರಿಣಾಮಕಾರಿ ಕಾರಾಗೃಹ ಆಡಳಿತ, ಕೈದಿಗಳ ಪ್ರತ್ಯೇಕೀಕರಣ, ಸೂಕ್ತ ಪೂರಕ ಸೌಲಭ್ಯಗಳು ಮತ್ತು ಸುರಕ್ಷಿತ ವಾತಾವರಣವನ್ನು ಕಾಪಾಡುವಂತಹ ವ್ಯಾಪಕ ಅಂಶಗಳನ್ನು ಒಳಗೊಂಡಿದೆ.

ಈ ಉದ್ದೇಶಗಳಿಗಾಗಿ ಹೆಚ್ಚುವರಿ ಭೂಮಿಯ ಅಗತ್ಯವಿದೆ. ಕೇವಲ ಕಾರಾಗೃಹದ ಆವರಣದಲ್ಲಿರುವ ಈಗಿನ ಕಟ್ಟಡಗಳಿಗೆ ಮಾತ್ರ ಸೀಮಿತವಾಗಿ ಯೋಚಿಸಬಾರದು. ಬದಲಾಗಿ, ಸಂಸ್ಥೆಯ ಒಟ್ಟಾರೆ ಕಾರ್ಯನಿರ್ವಹಣೆಯ ಅವಶ್ಯಕತೆಗಳು ಮತ್ತು ದೀರ್ಘಕಾಲೀನ ಕಾರ್ಯಾಚರಣೆಯ ಅಗತ್ಯಗಳ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸಬೇಕು

ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಮಾರ್ಚ್ 25, 2013 ರಂದು ವಿಶೇಷ ಭೂಸ್ವಾಧೀನ ಅಧಿಕಾರಿ ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿರುವಂತೆ, ಅಧಿಸೂಚನೆ ಹೊರಡಿಸಲಾದ ಈ ಭೂಮಿಯಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಆರ್‌ಸಿಸಿ ಕಟ್ಟಡಗಳು, ವಸತಿ ಬಡಾವಣೆಗಳು, ಇಂಜಿನಿಯರಿಂಗ್ ಕಾರ್ಯಾಗಾರಗಳು ಮತ್ತು ಅಭಿವೃದ್ಧಿಪಡಿಸಿದ ನಿವೇಶನಗಳ ವಿಷಯದಲ್ಲಿ, ಕಾನೂನುಬದ್ಧವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇಶಿಸಿದೆ.

ನ್ಯಾಯಮೂರ್ತಿ ಡಿ.ಕೆ. ಸಿಂಗ್ ಮತ್ತು ನ್ಯಾಯಮೂರ್ತಿ ಎಚ್. ಶಾಂತಿ ಭೂಷಣ್ ಅವರಿದ್ದ ವಿಭಾಗೀಯ ಪೀಠವು ಬುಧವಾರ (ಅಕ್ಟೋಬರ್ 28) ಈ ಆದೇಶವನ್ನು ನೀಡಿದೆ. ಭೂಮಾಲೀಕರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆಯಲ್ಲಿ, ಏಕಸದಸ್ಯ ಪೀಠವು ಭೂಮಾಲೀಕರ ಪರವಾಗಿ ಮೇ 2, 2025 ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಗಳನ್ನು ಪುರಸ್ಕರಿಸುವ ಮೂಲಕ ನ್ಯಾಯಾಲಯವು ಈ ಆದೇಶವನ್ನು ಹೊರಡಿಸಿದೆ.

ಆದ್ದರಿಂದ, ಅಸ್ತಿತ್ವದಲ್ಲಿರುವ ಕೇಂದ್ರ ಕಾರಾಗೃಹದ ವಿಸ್ತರಣೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಸದುದ್ದೇಶಪೂರ್ವಕವಾದ ಸಾರ್ವಜನಿಕ ಉದ್ದೇಶವನ್ನು ಹೊಂದಿದೆ ಎಂದು ನಾವು ಪರಿಗಣಿಸುತ್ತೇವೆ.

ಒಂದು ಸಾರ್ವಜನಿಕ ಯೋಜನೆಗೆ ಖಾಸಗಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅನಿವಾರ್ಯವಾಗಿದ್ದರೂ, ಅಂತಹ ಸ್ವಾಧೀನವು ಕಾನೂನುಬದ್ಧವಾಗಿದ್ದು, ಭೂಮಾಲೀಕರಿಗೆ ಲಭ್ಯವಿರುವ ರಕ್ಷಣಾತ್ಮಕ ಹಕ್ಕುಗಳನ್ನು ಗೌರವಿಸಲಾಗಿದ್ದರೆ, ಕೇವಲ ಖಾಸಗಿ ಆಸ್ತಿ ಕಳೆದುಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕಾಗಿ ರಾಜ್ಯ ಸರ್ಕಾರವು ಆ ಅಗತ್ಯ ಸಾರ್ವಜನಿಕ ಯೋಜನೆಯನ್ನು ಕೈಬಿಡಬೇಕಾದ ಅಗತ್ಯವಿಲ್ಲ ಎಂದು ಸಹ ನ್ಯಾಯಾಲಯ ಸ್ಪಷ್ಟಪಡಿಸಿದೆ.

> ಕಡ್ಡಾಯವಾದ ಶಾಸನಬದ್ಧ ನಿಯಮಗಳ ಉಲ್ಲಂಘನೆ ಸಾಬೀತಾಗದ ಹೊರತು, ಕೇವಲ ಪ್ರಕ್ರಿಯೆಗೆ ಸಂಬಂಧಿಸಿದ ತಾಂತ್ರಿಕ ಸೂಕ್ಷ್ಮತೆಗಳ ಆಧಾರದ ಮೇಲೆ ಈ ಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ ಎಂದು ತಿಳಿಸಿದೆ.- ನ್ಯಾಯಾಲಯ

ಸರ್ಕಾರ ಸೂಕ್ತವಾಗಿ ಯೋಚಿಸಿಲ್ಲ

ಅಂತಿಮ ಘೋಷಣೆಯಲ್ಲಿ ಪ್ರತ್ಯೇಕವಾದ ಔಪಚಾರಿಕ ಆದೇಶ ಅಥವಾ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸಿಲ್ಲ ಎಂಬ ಕಾರಣಕ್ಕಾಗಿಯೇ, ರಾಜ್ಯ ಸರ್ಕಾರವು ಈ ವಿಷಯದ ಬಗ್ಗೆ ಸೂಕ್ತವಾಗಿ ಯೋಚಿಸಿಲ್ಲ (ಅಪ್ಲೈಡ್ ಮೈಂಡ್) ಎಂದು ಭಾವಿಸಲು ಸಾಧ್ಯವಿಲ್ಲ.

2028ಕ್ಕೂ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ನಾನೆ

• ಉದಯವಾಹಿನಿ, ಕೆ.ಆರ್.ಪೇಟೆ

ತಾಲ್ಲೂಕಿನ ಸಾರಂಗಿ, ಶ್ಯಾರಹಳ್ಳಿ, ಹೆತ್ತಗೋನಹಳ್ಳಿ ಹಾಗು ಚಂದಗೋನಹಳ್ಳಿ,ಮಂಚಿಬೀಡು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಟಿ ಮಂಜು ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು, ಈ ಸೇತುವೆಗಳು ಈ ಭಾಗದ ಜನರ ಬಹುದಿನದ ಬೇಡಿಕೆಯಾಗಿತ್ತು.

ಈ ಸೇತುವೆ ನಿರ್ಮಾಣದಿಂದ ಹತ್ತಾರು ಗ್ರಾಮಗಳ ಜನರಿಗೆ, ರೈತರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಕಾಮಗಾರಿಯನ್ನು ಗುಣಮಟ್ಟದಿಂದ ಮಾಡಬೇಕು, ಯಾವುದೇ ಲೋಪ ಬರಬಾರದು ಎಂದು ಗುತ್ತಿಗೆದಾರರಿಗೆ ಖಡಕ್ ಸೂಚನೆ ನೀಡಿದರು.

ಜನರ ಬಹುದಿನದ ಬೇಡಿಕೆಯಾಗಿತ್ತು. ಈ ಸೇತುವೆ ನಿರ್ಮಾಣದಿಂದ ಹತ್ತಾರು ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮಾತನಾಡುವವರು ವಾಸ್ತವ ಸ್ಥಿತಿ ಅರಿಯಬೇಕು ಹಿಂದೆ ಜವಾಬ್ದಾರಿಯಲ್ಲಿದ್ದ ಜನಪ್ರತಿನಿಧಿಗಳು ಕೆಲಸ ಮಾಡಿದ್ದರೆ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಪೂಜೆ ನೆರವೇರಿಸುವ ಅಗತ್ಯವಿರಲಿಲ್ಲ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಜೆಎಸ್‌ಎಸ್ ಕಾಲೇಜಿನಿಂದ ಸ್ವಚ್ಛತಾ ಅಭಿಯಾನ

• ಉದಯವಾಹಿನಿ, ಚಾಮರಾಜನಗರ

ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ರೋಟರಿ ಸಿಲ್ಕ್ ಸಿಟಿ, ಚಾಮರಾಜನಗರ ಇವರ ಸಹಯೋಗದಲ್ಲಿ ಬಿಳಿಗಿರಿರಂಗನ ಬೆಟ್ಟದ ಶ್ರೀಬಿಳಿಗಿರಿರಂಗನಾಥ ಸ್ವಾಮಿ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸುವ ಅಭಿಯಾನ ನಡೆಯಿತು. ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಅಡಿಯಲ್ಲಿ 2026-27ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರ. ಅ 27 ರಿಂದ ನ. 2ರವರೆಗೆ ಬಿಳಿಗಿರಿರಂಗನ ಬೆಟ್ಟದ ಬಂಗ್ಲೆ ಪೊಡುವಿನಲ್ಲಿ ನಡೆಯುತ್ತಿದ್ದು, ಇದರ ಅಂಗವಾಗಿ ಇಂದು ಬೆಳಿಗ್ಗೆ ರೋಟರಿ ಸಿಲ್ಕ್ ಸಿಟಿಯ ಸಹಯೋಗದಲ್ಲಿ ವಿದ್ಯಾರ್ಥಿಗಳು ದೇವಸ್ಥಾನದ ಆವರಣದಲ್ಲಿದ್ದ ಪ್ಲಾಸ್ಟಿಕ್ ತ್ಯಾಜ್ಯ ಹಾಗೂ ಕಸವನ್ನು ಸಂಗ್ರಹಿಸಿ ಪರಿಸರ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಆರ್.ಎನ್. ಶ್ರೀಧರ್ ಮಾತನಾಡಿ, ನಮ್ಮ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿಯಾಗಿದೆ. ನಾವು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಮ್ಮ ನೆರೆಹೊರೆಯವರಲ್ಲಿಯೂ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಬೇಕು. ಸಾರ್ವಜನಿಕ ಸ್ಥಳಗಳು ಹಾಗೂ ಧಾರ್ಮಿಕ ಕ್ಷೇತ್ರಗಳ ಸ್ವಚ್ಛತೆಯನ್ನು ಕಾಪಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು. ರೋಟರಿ ಮಾಜಿ ಸಹಾಯಕ ಗವರ್ನರ್ ಡಿ.ಎಸ್. ಗಿರೀಶ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ಭಾಗವಹಿಸುವುದು ವಿದ್ಯಾರ್ಥಿ ಜೀವನದ ಅತ್ಯಂತ ಅಮೂಲ್ಯವಾದ ಅವಕಾಶ. ಕಾಲೇಜಿನಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರೂ, ಕೆಲವೇ ವಿದ್ಯಾರ್ಥಿಗಳಿಗೆ ಇಂತಹ ಶಿಬಿರಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ.

ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಪ್ರತಿಭಟನೆ

ಹುಣಸೂರು ತಾಲ್ಲೂಕಿನಲ್ಲಿ ಪಕ್ಷದ ಸಂಘಟನೆ ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಸಮಗ್ರ ಮಾಹಿತಿ ನೀಡಿದ್ದಾರೆ

• ಉದಯವಾಹಿನಿ, ಮೈಸೂರು

1 ಇತಿಹಾಸಕ್ಕೆ ಅವಮಾನ ಬೇಡ
2 ಪರಂಪರೆಗೆ ಅಪಮಾನ ಬೇಡ
3 ರಾಜಮನೆತನಕ್ಕೆ ಬೆಂಬಲವಿದೆ

ಮೈಸೂರು ಅಮರನೆ ಮತ್ತು ರಾಜವಂಶಸ್ಥರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ನೀಡಿದ್ದ ಹೇಳಿಕೆ ಖಂಡಿಸಿ ಮೈಸೂರು ನಿವಾಸಿಗಳು ಮತ್ತು ಅರಮನೆ ಉಳಿಸಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಜಮಾವಣೆಗೊಂಡ ನೂರಾರು ಮಂದಿ ಪ್ರತಿಭಟನಾಕಾರರು, ರಾಜರ ಕೊಡುಗೆ ಸ್ಮರಿಸೋಣ, ರಾಜಮನೆತನದ ಗೌರವದೊಂದಿಗೆ ಬಾಳೋಣ, ಇತಿಹಾಸಕ್ಕೆ ಅವಮಾನ ಬೇಡ, ರಾಜ ಪರಂಪರೆಗೆ ಅಪಮಾನ ಬೇಡ, ನಾವು ಮೈಸೂರಿನ ಮಹಾಜನತೆಯ ಸಂಪೂರ್ಣ ರಾಜಮನೆತನಕ್ಕೆ ಬೆಂಬಲವಿದೆ ಎಂಬಿತ್ಯಾದಿ ಘೋಷಣ ಪೋಸ್ಟರ್‌ಗಳನ್ನು ಹಿಡಿದು ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಮೈಸೂರು ಸಂಸ್ಥಾನದ ಇತಿಹಾಸ ತಿಳಿಯದ ಜಿಲ್ಲಾ ಉಸ್ತುವಾರಿ ಸಚಿವರು ಅರಮನೆಯ ಬಗ್ಗೆ ಉದ್ಧಟತನದ ಹೇಳಿಕೆಗಳನ್ನು ನೀಡಿರುವುದು ಖಂಡನೀಯ. ಈ ಬಾರಿಯ ದಸರಾ ಉತ್ಸವದಲ್ಲಿ ವಜ್ರಮುಷ್ಠಿ ಕಾಳಗ ನಡೆಯದಂತೆ ಮಾಡಿದ್ದಲ್ಲದೇ, ಸಂಪ್ರದಾಯಕ್ಕೆ ಅಪಮಾನ ಮಾಡಿದ್ದಾರೆ. ಜತೆಗೆ ಪತ್ರಕರ್ತರಿಗೂ ಅಪಮಾನ

ಉದಯವಾಹಿನಿ ಚಿತ್ರ

ಮಾಡಿದ್ದಾರೆ. ಹೀಗಾಗಿ ಸಂವಿಧಾನದಡಿಯಲ್ಲಿ ಮಂತ್ರಿಯಾಗದೆ ಪ್ರಭಾವದಿಂದ ಮಂತ್ರಿಯಾಗಿರುವ ಯತೀಂದ್ರ ಕೂಡಲೇ ಅವರ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ಮೈಸೂರು ಸುಂದರ ಮತ್ತು ಅಭಿವೃದ್ಧಿ ನಗರವಾಗಿರುವುದಕ್ಕೆ ರಾಜಮನೆತನದ ಕೊಡುಗೆ ಕಾರಣ. ಸಚಿವರು ಅಂಬಾರಿಯ ಬೆಲೆ ಗೊತ್ತಿಲ್ಲದೆ ದುರಂಹಕಾರದಿಂದ ಮಾತನಾಡಿರುವುದು ತರವಲ್ಲ. ದಸರೆ ಮೆರವಣಿಗೆಯಲ್ಲಿ ಸ್ತಬ್ಧ ಚಿತ್ರ ನೋಡಲು ಜನ ಬರಲ್ಲ. ಜನ ಬರುವುದೇ ಅಂಬಾರಿ ನೋಡಲು. ಅಂತಹ ಅಂಬಾರಿಗೆ ಬಾಡಿಗೆ ಕೊಡುತ್ತೇವೆ ಎಂದು ಕೇವಲವಾಗಿ ಮಾತನಾಡಿದ್ದಾರೆ. ಈ ಮನಸ್ಥಿತಿಯನ್ನು ಸಚಿವರು ಬಿಡಬೇಕು. ರಾಜಮನೆತನದ ಕೊಡುಗೆ ಬಗ್ಗೆ ಅರಿತು ಮಾತನಾಡಿ ಎಂದು ಕಿಡಿ ಕಾರಿದರು.

ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು ತಾವು ಓದಿದ್ದು ಎಲ್ಲಿ, ಜ್ಞಾನ ಪಡೆದದ್ದು ಎಲ್ಲಿ ಎಂಬುದನ್ನು ಅರಿತುಕೊಳ್ಳಬೇಕು. ಮೈಸೂರು ಅರಮನೆ ಸರ್ಕಾರಕ್ಕೆ ಸೇರಿದ್ದು ಎಂದು ದುರಂಹಕಾರದ ಮಾತುಗಳನ್ನಾಡುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಸಾಧನೆ ಮಾಡಲು ಸಾಧ್ಯವಾಗದಿದ್ದರೂ ಪ್ರಿಯಾಂಕ್ ಖರ್ಗೆಗೆ ಪ್ರತಿಸ್ಪರ್ಧಿಯಾಗಿ ಡಾ.ಯತೀಂದ್ರ ಹೇಳಿಕೆ ನೀಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೆಲ್ಲವೂ ರಾಜಮನೆತನದ ವಿರುದ್ಧವಾಗಿ ಮಾತನಾಡುವುದು ಸಾಮಾನ್ಯವಾಗಿದೆ. ಇದೇ ರೀತಿ ಮುಂದುವರೆದರೆ ಮೈಸೂರಿನ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಉಪಮೇಯರ್ ಶೈಲೇಂದ್ರ, ಮಾಜಿ ಸದಸ್ಯ ಪ್ರಶಾಂತ್ ಗೌಡ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ರಾಕೇಶ್ ಭಟ್, ರಘು ಸೇರಿದಂತೆ

ಕ್ರೈಸ್ತ ಸಮುದಾಯಕ್ಕೆ ಮೈಸೂರು ಮಹಾರಾಜರ ಕೊಡುಗೆ ಅಪಾರವಾಗಿದೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ಕಡಿಮೆ ದರದಲ್ಲಿ ಜಾಗ ನೀಡಿ ಸಹಕಾರ ನೀಡಿದ್ದಾರೆ. ಮೈಸೂರನ್ನು ಸುಂದರ ನಗರವನ್ನಾಗಿ ಮಾಡಲು ಅವರ ಕೊಡುಗೆ ಅಪಾರವಾಗಿದೆ. ರಾಜವಂಶಸ್ಥರ ಕೊಡುಗೆಯನ್ನು ನಾವೆಲ್ಲರೂ ಸ್ಮರಿಸಬೇಕು ಎಂದರು. -ಫಾ.ಜಾನ್ ಎವರೆಂಡ್ ಪಾಲ್

ಹುಲ್ಲಹಳ್ಳಿ ರಾಂಪುರ ನಾಲೆಯ ಮೂಲಕ ನೀರು ಕೊಟ್ಟಿದ್ದಕ್ಕೆ ಸಿದ್ದರಾಮಯ್ಯ ಅವರು ಅನ್ನ ತಿಂದಿರುವುದು. ರಾಜ್ಯದ ಕಾಂಗ್ರೆಸ್ ಸರ್ಕಾರ, ರಾಜ ಪರಂಪರೆಯ ಬಗ್ಗೆ ಯಾವಾಗಲೂ ಅಪಮಾನ ಮಾಡುತ್ತಾ ಬಂದಿದೆ. ಇದೇ ರೀತಿ ಮುಂದುವರೆದರೆ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು. -ದಯಾನಂದ ಪಟೇಲ್

ಸರ್ವರ್ ಸಮಸ್ಯೆಯಿಂದ ರೇಷನ್ ವಿತರಣೆ ಅಸ್ತವ್ಯಸ್ತ ಮೂರು ದಿನಗಳಿಂದ ಪಡಿತರಕ್ಕಾಗಿ ಕಾದು ಕುಳಿತ ಗ್ರಾಮಸ್ಥರು

• ಉದಯವಾಹಿನಿ, ಗುಂಡ್ಲುಪೇಟೆ

ಸರ್ವರ್ ಸ್ಲೋ ಸಮಸ್ಯೆಯಿಂದಾಗಿ ಬನ್ನಿತಾಳಪುರ ಗ್ರಾಮದ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಲು ಹೆಬ್ಬೆಟ್ಟು ಗುರುತು ನೀಡಲಾಗದೆ ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ ಮೂರು ದಿನಗಳಿಂದಲೂ ಸರ್ವರ್ ಸಮಸ್ಯೆ ಮುಂದುವರಿದಿದ್ದು, ರೇಷನ್ ಪಡೆಯಲು ಬೆಳಿಗ್ಗೆಯಿಂದ ಸಂಜೆವರೆಗೆ ಅಂಗಡಿಯ ಮುಂದೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕೂಲಿ ಕೆಲಸ ಹಾಗೂ ಜಮೀನಿನ ಕೆಲಸಗಳಿಗೆ ತೆರಳಲಾಗದೆ ಗ್ರಾಮಸ್ಥರು ಆರ್ಥಿಕ ನಷ್ಟ ಅನುಭವಿಸುವಂತಾಗಿದೆ. ಅಲ್ಲದೆ, ಪಡಿತರ ಪಡೆಯುವ ವಿಚಾರದಲ್ಲಿ ಸಾರ್ವಜನಿಕರ ನಡುವೆ ಜಗಳ-ಗಲಾಟೆಗಳು ನಡೆಯುತ್ತಿವೆ. ಇದು ಕೇವಲ ಬನ್ನಿತಾಳಪುರ ಗ್ರಾಮದ ಸಮಸ್ಯೆಯಾಗಿರದೆ ರಾಜ್ಯಮಟ್ಟದಲ್ಲಿ ಕಂಡುಬರುತ್ತಿರುವ ಸಮಸ್ಯೆಯಾಗಿದೆ. ಆಹಾರ ಇಲಾಖೆ ಅಧಿಕಾರಿಗಳು ಈ ವಿಚಾರವನ್ನು ಮೇಲ್ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದು ತಕ್ಷಣ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಮಾನ್ಯ ಶಾಸಕರು ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಗ್ರಾಮಸ್ಥರಿಗೆ ಪಡಿತರ ವಿತರಣೆ ಸುಗಮವಾಗುವಂತೆ ಕ್ರಮ ವಹಿಸಬೇಕೆಂದು ಗ್ರಾಮಸ್ಥರು ಕಳಕಳಿಯಿಂದ ಮನವಿ ಮಾಡಿದ್ದಾರೆ.

ಉದಯವಾಹಿನಿ ಚಿತ್ರ

ಭತ್ತಕ್ಕೆ ಹನಿ ನೀರಾವರಿ ಪದ್ಧತಿ ಅಳವಡಿಸಿ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಳವಳ್ಳಿ

ಹನಿ ನೀರಾವರಿ ಪದ್ಧತಿಯಲ್ಲಿ ಭತ್ತದ ಬೆಳೆಯುವುದರಿಂದ ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಶೇ 50ರಿಂದ 60ರಷ್ಟು ನೀರಿನ ಉಳಿತಾಯವಾಗುತ್ತದೆ ಎಂದು ಮಹಾರಾಷ್ಟ್ರದ ಜೈನ್ ಸಂಸ್ಥೆಯ ಹಿರಿಯ ಕೃಷಿ ವಿಜ್ಞಾನಿ ಸೋಮನ್ ತಿಳಿಸಿದರು.

ತಾಲ್ಲೂಕಿನ ದೇವಲಿಂಗಣಾಪುರ ಗ್ರಾಮದ ಹೊರವಲಯದ ಜಮೀನಿನಲ್ಲಿ ಪೂರಿಗಾಲಿ ಸ್ವಯಂ ಚಾಲಿತ ಹನಿ ಮತ್ತು ತುಂತುರು ನೀರಾವರಿ ಯೋಜನೆಯಡಿ ಹನಿ ನೀರಾವರಿ ಮತ್ತು ರಸಗೊಬ್ಬರ ಪೂರೈಕೆ ಪದ್ಧತಿಯ ಮೂಲಕ ಭತ್ತ ಬೆಳೆ ಬೆಳೆಯುವ ಕುರಿತು ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗದ್ದೆಯಲ್ಲಿ ನಿರಂತರ ನೀರು ನಿಲ್ಲದ ಕಾರಣ ಕಳೆಗಳ ಹಾವಳಿ ಮತ್ತು ಕೀಟ-ರೋಗಗಳ ಬಾಧೆ ಕಡಿಮೆ ಇರುತ್ತದೆ. ಹನಿ ನೀರಾವರಿ ಪದ್ಧತಿಯಿಂದಾಗಿ ಆಳುಗಳ ಅವಶ್ಯಕತೆ ಕಡಿಮೆಯಾಗುತ್ತದೆ. ಸರಿಯಾದ ಪ್ರಮಾಣದ ನೀರು ಮತ್ತು ರಸಗೊಬ್ಬರ ಒದಗಿಸುವುದರಿಂದ ಉತ್ಪಾದಕತೆ ಹೆಚ್ಚಾಗುತ್ತದೆ. ನಾಟಿ ಮಾಡುವ ಮುನ್ನ ಪ್ರತಿ ಎಕರೆಗೆ 5ರಿಂದ 8 ಟನ್ ಕೊಟ್ಟಿಗೆ ಗೊಬ್ಬರ ನೀಡಬೇಕು. ಈ ವ್ಯವಸ್ಥೆಯಡಿ ಬಿತ್ತನೆ ಮಾಡಿದ 15 ದಿನ ನಂತರ ಗೊಬ್ಬರ ನೀಡಿ ಎಂದು ಮಾಹಿತಿ ನೀಡಿದರು. ಭತ್ತದ ನಾಟಿಗೆ ಮುನ್ನವೇ ಹನಿ ನೀರಾವರಿಗೆ ಹೊಂದಿಕೊಳ್ಳುವ ಹಾಗೂ ಕಡಿಮೆ ಅವಧಿಯಲ್ಲಿ ಬೆಳೆಯುವ ಭತ್ತದ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮಣ್ಣಿನಲ್ಲಿ ಅಗತ್ಯ ತೇವಾಂಶ ಇಡುವಂತೆ ನಿಯಮಿತವಾಗಿ ಹನಿ ನೀರಾವರಿ ವ್ಯವಸ್ಥೆಯನ್ನು ನಿರ್ವಹಿಸಬೇಕು. ಈ ಭಾಗದಲ್ಲಿ ಬೃಹತ್ ಹನಿ ನೀರಾವರಿ ಪದ್ಧತಿ ಜಾರಿಯಲ್ಲಿ ಇರುವುದರಿಂದ ರೈತರು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದು ಕರೆ ನೀಡಿದರು.

ಸಮಾರಂಭವನ್ನು ಅಚ್ಚುಕಟ್ಟಾಗಿ ಆಯೋಜಿಸಲು ಅಧಿಕಾರಿಗಳಿಗೆ ಸೂಚನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ನವೆಂಬರ್ 1ರಂದು ಜಿಲ್ಲಾಡಳಿತದ ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣ ದಲ್ಲಿ ಅದ್ದೂರಿಯಾಗಿ ನಡೆಯಲಿರುವ ಕನ್ನಡ ರಾಜ್ಯೋತ್ಸವ ಸಮಾರಂಭದ ಸಿದ್ಧತೆಗಳನ್ನು ಜಿಲ್ಲಾಧಿಕಾರಿ ಜಿ. ಪ್ರಭು ಪರಿಶೀಲಿಸಿದರು. ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿದ್ಧತಾ ಕಾರ್ಯಗಳನ್ನು ವೀಕ್ಷಿಸಿದ ಅವರು, ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಸಮಾರಂಭದ ವೇದಿಕೆ ನಿರ್ಮಾಣ, ಧ್ವಜಾರೋಹಣ, ಆಸನ ವ್ಯವಸ್ಥೆ, ಸ್ವಚ್ಛತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಪರಂಪರೆಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ರಾಜ್ಯೋತ್ಸವ ಆಚರಣೆ ನಡೆಸಲು ಎಲ್ಲಾ ಸಿದ್ಧತೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು. ಇದೇ ವೇಳೆ ಒಳಾಂಗಣ ಕ್ರೀಡಾಂಗಣಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ. ಪ್ರಭು, ನವೀಕರಣ ಗೊಂಡಿರುವ ಸುಸಜ್ಜಿತ ಬ್ಯಾಡ್ಮಿಂಟನ್ ಕೋರ್ಟ್ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಿರುವ ಸೌಲಭ್ಯಗಳನ್ನು ವೀಕ್ಷಿಸಿದರು. ಜಿಲ್ಲಾ ಈಜುಕೊಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಅಲ್ಲಿನ ಪ್ರಸ್ತುತ ಸ್ಥಿತಿಗತಿಗಳನ್ನು ಪರಿಶೀಲಿಸಿ, ಸ್ಥಳದಲ್ಲಿದ್ದ ಕ್ರೀಡಾ ಇಲಾಖೆಯ ಪ್ರಭಾರ ಅಧಿಕಾರಿ ಮಹೇಶ್ ಪತ್ರಿ ಹಾಗೂ ಸಿಬ್ಬಂದಿಯಿಂದ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ಈಜುಕೊಳದಲ್ಲಿನ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಈಜುಕೊಳದ ನಿರ್ವಹಣೆಗೆ ನಗರಸಭೆಯಿಂದ ಅಗತ್ಯ ಅನುದಾನ ಒದಗಿಸುವಂತೆಯೂ ಮೌಖಿಕವಾಗಿ ನಿರ್ದೇಶನ ನೀಡಿದರು.

ಪ್ರಧಾನಿ ವಿರುದ್ಧದ ಸಿಜೆಪಿ ಪ್ರತಿಭಟನೆ ಕಾಂಗ್ರೆಸ್‌ನ ಕುತಂತ್ರ: ಮಾಜಿ ಸಂಸದ ಪ್ರತಾಪ್ ಸಿಂಹ

• ಉದಯವಾಹಿನಿ, ಕೋಲಾರ,

ದೆಹಲಿಯಲ್ಲಿ ನಡೆಯುತ್ತಿರುವ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧದ ಪ್ರತಿಭಟನೆ ಮತ್ತು ದೇಶದಲ್ಲಿ ನಡೆಯುತ್ತಿರುವ ಸಿಜೆಪಿ ಹೋರಾಟ ಕಾಂಗ್ರೆಸ್ ಕುತಂತ್ರದ ಭಾಗವಾಗಿದ್ದು ಜೆನ್‌ಜಿಗಳಿಗೆ ಜಾಗೃತಿ ಮೂಡಿಸುತ್ತಿದ್ದೇವೆ ಎಂಬ ಸೋಗಿನಲ್ಲಿ ಪ್ರಧಾನಿ ಮೋದಿ ಅವರ ಮೇಲೆ ಎತ್ತಿಕಟ್ಟಲಾಗುತ್ತಿದೆ ಎಂದು ಮಾಜಿ ಸಂಸದ ಪ್ರತಾಪಸಿಂಹ ಆರೋಪಿಸಿದರು. ಇಲ್ಲಿನ ಕನ್ನಡ ಭವನದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರದಲ್ಲಿ ಕೇಂದ್ರ ಸಚಿವರ ನಿರ್ಲಕ್ಷ್ಯ ಮತ್ತು ಕೈವಾಡ ಇಲ್ಲವಾದರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ಯಾವುದೇ ಲೋಪವಿಲ್ಲದಿದ್ದರೂ ಮುಖ್ಯ ಚುನಾವಣಾ ಆಯುಕ್ತ

ಉದಯವಾಹಿನಿ ಚಿತ್ರ

ಜ್ಞಾನೇಶ್ ಕುಮಾರ್ ರಾಜೀನಾಮೆ ಕೊಡಬೇಕು ಎಂದು ಹೋರಾಟ ಮಾಡುವುದು ಸರಿಯಲ್ಲ. ಇದರ ಹಿಂದೆ ಕಾಂಗ್ರೆಸ್ ಕೈವಾಡ ಎದ್ದು ಕಾಣುತ್ತಿದೆ. ಕಾಂಗ್ರೆಸ್ ಮತ್ತು ಸಿಜೆಪಿ ಒಂದೇ ಎಂಬ ಸಚಿವ ಪ್ರಿಯಾಂಕ್‌ಖರ್ಗೆ ಅವರ ಹೇಳಿಕೆ ಇದನ್ನು ಸಾರ್ವಜನಿಕವಾಗಿ ಪುಷ್ಟೀಕರಿಸಿದೆ ಎಂದು ಆರೋಪಿಸಿದರು. 21 ವರ್ಷದಿಂದ ಎಸ್‌ಐಆರ್ ನಡೆಯದ ಕಾರಣ ಮೃತಪಟ್ಟ, ವಲಸೆ ಹೋದ ಮತ್ತು ಹಲವಾರು ಕಡೆ ಮತದಾನದ ಹಕ್ಕು ಹೊಂದಿದ್ದ ವ್ಯಕ್ತಿಗಳ ಮಾಹಿತಿ ಇರಲಿಲ್ಲ.

ಎಸ್‌ಐಆರ್‌ನಿಂದ ಎಲ್ಲವೂ ಶುದ್ಧೀಕರಣವಾಗಿದ್ದು ಯಾರದ್ದಾದರೂ ಹೆಸರು ತಪ್ಪಿ ಹೋಗಿದ್ದರೆ ಮತಗಟ್ಟೆ ಮಟ್ಟದ ಅಧಿಕಾರಿಗೆ ದೂರು ನೀಡಬಹುದು. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಿಂದ ಇಳಿದು ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ವಿಶ್ವಾಸ ವ್ಯಕ್ತಪಡಿಸಿದರು.

ಜನರ ವಿಶ್ವಾಸವನ್ನು ಕಾಂಗ್ರೆಸ್ ಸರ್ಕಾರ ಕಳೆದುಕೊಂಡಿದ್ದು ಬ್ಯಾಲೆಟ್ ಪೇಪರ್ ಮೂಲಕ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಒಂದೂ ಸ್ಥಾನ ಉಳಿಸಿಕೊಳ್ಳಲು ಆಗಿಲ್ಲ. ಎಸ್‌ಐಆರ್‌ನಿಂದ ಎಲ್ಲವೂ ಶುದ್ಧೀಕರಣವಾಗಿದ್ದು ಯಾರದ್ದಾದರೂ 4 ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಜಯಗಳಿಸಿದ್ದು ಇದು ಮುಂದಿನ ಎಲ್ಲಾ ಎಲೆಕ್ಷನ್‌ಗಳಿಗೆ ದಿಕ್ಸೂಚಿ ಆಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ವರ್ತೂರ್ ಪ್ರಕಾಶ್, ಮಾಜಿ ಸಂಸದ ಮುನಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ, ಮಾಜಿ ಶಾಸಕ ಸಂಪಂಗಿ , ವೆಂಕಟಮುನಿಯಪ್ಪ, ರಾಜ್ಯ ಬಿಜೆಪಿ ಮುಖಂಡ ಗೋಪಾಲಯ್ಯ , ಮುಖಂಡರಾದ ರಾಜೇಶ್‌ಸಿಂಗ್, ಕೆಂಬೋಡಿ ನಾರಾಯಣಸ್ವಾಮಿ ಇದ್ದರು.

ಸಂಘಟನೆ ಜೊತೆಗೆ ಸಂವಿಧಾನ ಮೌಲ್ಯಗಳ ರಕ್ಷಣೆಯಾಗಲಿ

ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ರಕ್ಷಿಸುವುದು ಅತ್ಯಂತ ಮಹತ್ವದ್ದಾಗಿದೆ ಜಾಗೃತಿ ಮೂಡಿಸಬೇಕು

• ಉದಯವಾಹಿನಿ, ತಿ.ನರಸೀಪುರ

ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವುದರ ಜೊತೆಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗೆ ಕಾರ್ಯಕರ್ತರು ಸಂಘಟಿತರಾಗಿ ಶ್ರಮಿಸಬೇಕು ಎಂದು ಶಾಸಕ ಡಾ.ಎಚ್.ಸಿ. ಮಹದೇವಪ್ಪ ಕರೆ ನೀಡಿದರು.

1 ಆಯ್ಕೆಗೆ ಒಮ್ಮತದ ಪಟ್ಟಿ ಸಿದ್ದಪಡಿಸಬೇಕು
2 ಸಭೆಗಳನ್ನು ಸಂಘಟನೆಯನ್ನು ವಿಸ್ತರಿಸಬೇಕು
3 ಪರಸ್ಪರ ಬಗೆಹರಿಸಿಕೊಂಡು ಮುನ್ನಡೆಯಬೇಕು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ವತಿಯಿಂದ ಹಮ್ಮಿಕೊಂಡಿರುವ ಸಂಘಟನ್ ಸೃಜನ್ ಅಭಿಯಾನ 2ರ ಅಂಗವಾಗಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಬ್ಲಾಕ್‌ನಿಂದ ಪಂಚಾಯಿತಿ ಮಟ್ಟದವರೆಗೆ ಬಲಪಡಿಸಬೇಕು.

ಕಡಕೊಳ ಸೇರಿದಂತೆ ವಿವಿಧ ಬ್ಲಾಕ್‌ಗಳ ವ್ಯಾಪ್ತಿಯಲ್ಲಿ ಹಿರಿಯರು, ಯುವಕರು ಹಾಗೂ ಮಹಿಳಾ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆಗೆ ಒಮ್ಮತದ ಪಟ್ಟಿ

ಉದಯವಾಹಿನಿ ಚಿತ್ರ

ಸಿದ್ಧಪಡಿಸಬೇಕು. ಪಂಚಾಯಿತಿ ಮಟ್ಟದಲ್ಲಿಯೂ ಸಭೆಗಳನ್ನು ನಡೆಸಿ ಸಂಘಟನೆಯನ್ನು ವಿಸ್ತರಿಸಬೇಕು. ಮುಖಂಡರು ಮತ್ತು ಕಾರ್ಯಕರ್ತರ ನಡುವೆ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೆ, ಸಣ್ಣಪುಟ್ಟ ಸಮಸ್ಯೆಗಳನ್ನು ಪರಸ್ಪರ ಚರ್ಚೆಯ ಮೂಲಕ ಬಗೆಹರಿಸಿಕೊಂಡು ಮುನ್ನಡೆಯಬೇಕು ಎಂದು ಸಲಹೆ ನೀಡಿದರು. ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ರಕ್ಷಿಸುವುದು ಅತ್ಯಂತ ಮಹತ್ವದ್ದಾಗಿದೆ. ಜನಾದೇಶದ ಪಾವಿತ್ರ್ಯ ಹಾಗೂ ಮತದಾನದ ಹಕ್ಕಿನ ರಕ್ಷಣೆಯ ಕುರಿತು ಕಾರ್ಯಕರ್ತರು ಜಾಗೃತಿ ಮೂಡಿಸಬೇಕು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ನಡೆಸಿ ಜನರ ಹಕ್ಕುಗಳು ಹಾಗೂ ಸಂವಿಧಾನದ ಆಶಯಗಳ ಕುರಿತು ಅರಿವು ಮೂಡಿಸಲು ಶ್ರಮಿಸಿದ್ದಾರೆ ಎಂದು ತಿಳಿಸಿದರು. ತಿ.ನರಸೀಪುರ ಕ್ಷೇತ್ರದಲ್ಲಿ ಕುಡಿಯುವ ನೀರು, ಕಾವೇರಿ ಮತ್ತು ಕಪಿಲಾ ನದಿಗಳ ವ್ಯಾಪ್ತಿಯ ನೀರಾವರಿ ಯೋಜನೆಗಳು, ರಸ್ತೆ ಹಾಗೂ ವಿವಿಧ ಮೂಲಸೌಕರ್ಯಗಳ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಬರಗಾಲದಂತಹ ಸಂಕಷ್ಟದ ಸಂದರ್ಭಗಳಲ್ಲಿಯೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಜನಪರ ಕಾರ್ಯಕ್ರಮಗಳನ್ನು ತಲುಪಿಸಲು ಪ್ರಯತ್ನಿಸಲಾಗಿದೆ. ಕಳೆದ

ಬಡವರು, ರೈತರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಸಮಸ್ಯೆಗಳಿಗೆ ಸ್ಪಂದಿಸಿ ಪಕ್ಷದ ಸಂಘಟನೆಯನ್ನು ಬೂತ್‌ಮಟ್ಟದಿಂದ ಬಲಪಡಿಸಬೇಕು. ಮುಂಬರುವ ಚುನಾವಣಾ ಸವಾಲುಗಳನ್ನು ಎದುರಿಸಲು ಕಾರ್ಯಕರ್ತರು ಈಗಿನಿಂದಲೇ ಸಿದ್ಧರಾಗಬೇಕು ಎಂದು ಕರೆ ನೀಡಿದರು. -ಡಾ. ಎಚ್.ಸಿ.ಮಹದೇವಪ್ಪ

ಸಂವಿಧಾನ ದಿನಾಚರಣೆ

ತಾವು ಸಾಮಾಜಿಕ ಕಲ್ಯಾಣ ಸಚಿವರಾಗಿದ್ದ ಸಂದರ್ಭದಲ್ಲಿ ಶಾಲಾ-ಕಾಲೇಜುಗಳಲ್ಲಿ ಸಂವಿಧಾನದ ಪೀಠಿಕೆ ಓದುವ ಕ್ರಮಕ್ಕೆ ಆದ್ಯತೆ ನೀಡಲಾಗಿತ್ತು. ಸಂವಿಧಾನ ದಿನಾಚರಣೆ ಮತ್ತು ಪ್ರಜಾಪ್ರಭುತ್ವ ದಿನಾಚರಣೆಗಳ ಮೂಲಕ ಸಂವಿಧಾನದ ಮೌಲ್ಯಗಳನ್ನು ಜನರಿಗೆ ತಲುಪಿಸುವ ಪ್ರಯತ್ನ ನಡೆಸಲಾಗಿತ್ತು ಎಂದು ಸ್ಮರಿಸಿದರು.

ನಾಲ್ಕು ದಶಕಗಳಿಂದ ಕ್ಷೇತ್ರದ ಜನತೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ತೋರಿರುವ ಪ್ರೀತಿ, ವಿಶ್ವಾಸ ಮತ್ತು ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿಪಾದಿಸಲಾದ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್' ಘೋಷಣೆಯ ಆಶಯದಂತೆ ಪಕ್ಷದ ಸಿದ್ಧಾಂತಗಳನ್ನು ಜನರಿಗೆ ತಲುಪಿಸಬೇಕು.

ಕಾರ್ಯಕರ್ತರ ಅಭಿಪ್ರಾಯಕ್ಕೆ ಆದ್ಯತೆ: ಬೀರಿಹುಂಡಿ ಬಸವಣ್ಣ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ಮಾತನಾಡಿ, ಸಂಘಟನ್ ಸೃಜನ್ ಅಭಿಯಾನ 2ರ ಮುಖ್ಯ ಉದ್ದೇಶ ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಸದೃಢವಾಗಿ ಕಟ್ಟುವುದಾಗಿದೆ. ಪಕ್ಷದ ಸಂಘಟನೆಯಲ್ಲಿ ಯುವಕರು ಮತ್ತು ಮಹಿಳೆಯರಿಗೆ ಹೆಚ್ಚಿನ ಅವಕಾಶ ಹಾಗೂ ಜವಾಬ್ದಾರಿಗಳನ್ನು ನೀಡಬೇಕು. ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಪಕ್ಷದ ಸಂಘಟನಾ ಶಕ್ತಿಯನ್ನು ಹೆಚ್ಚಿಸಬೇಕು ಎಂದರು.

ಮಿನಿ ನ್ಯೂಸ್

ಜವಳಿ, ಸಿದ್ಧ ಉಡುಪು ರಫ್ತು ಹೆಚ್ಚಳಕ್ಕೆ ಕೇಂದ್ರ ಕ್ರಮ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಗಡಿ

ಕೇಂದ್ರ ಸರ್ಕಾರದ ಜವಳಿ ಸಚಿವಾಲಯವು 2030ರ ವೇಳೆಗೆ ಜವಳಿ ಮತ್ತು ಸಿದ್ಧ ಉಡುಪುಗಳ ರಫ್ತನ್ನು ನೂರು ಮಿಲಿಯನ್ ಅಮೆರಿಕನ್ ಡಾಲರ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಆರ್. ಯೋಗೀಶ್ ಹೇಳಿದರು. ಪಟ್ಟಣದ ತಿರುಮಲೆ ಕುರುಹಿನಶೆಟ್ಟಿ ರಂಗನಾಥ ಸ್ವಾಮಿ ಅರವಂಟಿಕೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ರಫ್ತು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸುಮಾರು 35 ಬಿಲಿಯನ್ ಡಾಲರ್ ಮಟ್ಟದಲ್ಲಿರುವ ಜವಳಿ ರಫ್ತನ್ನು ನಿಗದಿತ ಗುರಿಗೆ ತಲುಪಿಸಲು ಜಾಗತಿಕ ಮಾರುಕಟ್ಟೆಯಲ್ಲಿ ದೇಶಿಯ ವಸ್ತುಗಳ ರಫ್ತು ಪ್ರಮಾಣ ಹೆಚ್ಚಿಸುವ ಅಗತ್ಯವಿದೆ' ಎಂದರು. 'ಆ ನಿಟ್ಟಿನಲ್ಲಿ ಉದ್ಯಮಿಗಳಿಗೆ ರಫ್ತು ಅವಕಾಶಗಳ ನೋಂದಣಿ ಪ್ರಕ್ರಿಯೆ ಹಾಗೂ ರಫ್ತು ವಹಿವಾಟಿನ ಕುರಿತು ಅರಿವು ಮೂಡಿಸಲು ಕಾರ್ಯಾಗಾರ ಆಯೋಜಿಸಲಾಗಿದೆ. ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪನ್ನಗಳಿದ್ದರೂ ರಫ್ತು ಪ್ರಕ್ರಿಯೆಗಳ ಅರಿವಿನ ಕೊರತೆಯಿಂದಾಗಿ ಉದ್ಯಮಿಗಳು ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಸಾಧ್ಯವಾಗಿಲ್ಲ'.

ರಫ್ತು ವಹಿವಾಟು ಆರಂಭಿಸಲು ಅಗತ್ಯವಿರುವ ಆಮದು ಮತ್ತು ರಫ್ತು ಕೋಡ್‌ಗಳನ್ನು ಪಡೆಯುವ ವಿಧಾನ ಹಾಗೂ ಅದಕ್ಕೆ ಬೇಕಾದ ದಾಖಲೆಗಳು ಕುರಿತು ಉದ್ಯಮಿಗಳು ತಿಳಿದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ರಾಜವಂಶಸ್ಥರಿಗೆ ಮತ್ತು ನಾಡಿನ ಜನತೆಗೆ ಕ್ಷಮೆ ಕೇಳಬೇಕು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ನಗರ

ಅರಮನೆಯ ಬಹುತೇಕ ಭಾಗ ಸರ್ಕಾರಕ್ಕೆ ಸೇರಿದ್ದು, ರಾಜವಂಶಸ್ಥರಿಗೆ ಉಳಿದುಕೊಳ್ಳಲು ಸ್ವಲ್ಪ ಜಾಗ ನೀಡಲಾಗಿದೆ ಎಂಬ ಹೇಳಿಕೆ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ರಾಜವಂಶಸ್ಥರು ಹಾಗೂ ನಾಡಿನ ಜನತೆಯ ಕ್ಷಮೆ ಕೇಳಬೇಕು ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಜಿಲ್ಲಾ ಮುಖಂಡ ಮಿರ್ಲೆ ಶ್ರೀನಿವಾಸಗೌಡ ಒತ್ತಾಯಿಸಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ರಾಜ್ಯವೆಂದೇ ಹಿಂದೆ ಕರೆಯಲಾಗುತ್ತಿದ್ದ ಈ ನಾಡಿನ ಅಭಿವೃದ್ಧಿಗೆ ಮಹಾರಾಜರ ಕೊಡುಗೆ ಅಪಾರವಾಗಿದೆ. ಹಳೇ ಮೈಸೂರು ಭಾಗ ಸೇರಿದಂತೆ ಕರ್ನಾಟಕದ ಪ್ರಗತಿಯಲ್ಲಿ ರಾಜವಂಶಸ್ಥರು ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಕೊಡುಗೆಯನ್ನು ಮರೆಯಬಾರದು ಎಂದರು. ಮಾಜಿ ಮುಖ್ಯಮಂತ್ರಿ ಹಾಗೂ ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರ ಶಿಫಾರಸಿನಿಂದ ಡಾ.ಯತೀಂದ್ರ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ತಮ್ಮ ವೈಯಕ್ತಿಕ ವರ್ಚಸ್ಸಿನಿಂದಲೇ ಈ ಸ್ಥಾನ ದೊರೆತಿದೆ ಎಂದು ಭಾವಿಸಬಾರದು. ರಾಜವಂಶಸ್ಥರ ಬಗ್ಗೆ ಹಗುರವಾಗಿ ಮಾತನಾಡಿರುವುದು ದುರದೃಷ್ಟಕರ. ಇಂತಹ ಹೇಳಿಕೆಗಳು ಅವರಿಗೆ ಗೌರವ ತರುವುದಿಲ್ಲ ಎಂದು ಟೀಕಿಸಿದರು.

ಕೇವಲ ಕಾನೂನಿನಿಂದ ತಾರತಮ್ಯ ನಿವಾರಣೆಯಾಗದು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಕೇವಲ ಕಾನೂನಿನ ಕಾರಣಕ್ಕೆ ಸಾಮಾಜಿಕ ತಾರತಮ್ಯ ನಿವಾರಣೆ ಆಗದು, ಮಾನಸಿಕ ಬದಲಾವಣೆ ಅಗತ್ಯ ಎಂದು ಮೇಲುಕೋಟೆಯ ಸಾಮಾಜಿಕ ಕಾರ್ಯಕರ್ತ ಸಂತೋಷ್ ಕೌಲಗಿ ಹೇಳಿದರು. ಮಾನಸ ಗಂಗೋತ್ರಿಯ ಡಾ.ಬಾಬು ಜಗಜೀವನರಾಮ್ ಸಂಶೋಧನಾ ಮತ್ತು ಅಧ್ಯಯನ ಕೇಂದ್ರ, ಬಾಬು ಜಗಜೀವನರಾಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಹಯೋಗದಲ್ಲಿ ಮಹಾತ್ಮ ಗಾಂಧಿ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಗಾಂಧಿ ಪ್ರಪಂಚ ಮತ್ತು ಬಾಬೂಜಿ ಚಿಂತನೆ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿನ ಅಸ್ಪೃಶ್ಯತೆ ನಿವಾರಣೆಗೆ ಸಾಕಷ್ಟು ಕಾನೂನು ಅಸ್ಪೃಶ್ಯತೆ ಜೀವಂತವಾಗಿದೆ. ಕಾನೂನುಗಳ ಅನುಷ್ಠಾನದ ಜತೆಗೆ ಜನರ ಮನಸ್ಸಿನ ಪರಿವರ್ತನೆಯಾದಾಗ ಮಾತ್ರ ಅಸ್ಪೃಶ್ಯತೆ ಸಂಪೂರ್ಣ ನಿವಾರಣೆ ಸಾಧ್ಯ. ಈವರೆಗಿನ ಬೆಳವಣಿಗೆ ಗಮನಿಸಿದರೆ ಕೇವಲ ಕಾನೂನಿನಿಂದ ತಾರತಮ್ಯ ನಿವಾರಣೆ ಆಗುವುದಿಲ್ಲ ಎಂಬುದು ಸಾಭೀತಾಗಿದೆ ಎಂದರು.

ದಲಿತ ಮಹಿಳೆಯರು ಸರ್ಕಾರಿ ಶಾಲೆಗಳಲ್ಲಿ ಅಡುಗೆ ಕೆಲಸ ಮಾಡುತ್ತಿದ್ದರೂ, ಅವರು ತಯಾರಿಸಿದ ಆಹಾರವನ್ನು ಮೇಲ್ವರ್ಗದ ಮಕ್ಕಳು ಸೇವಿಸದಂತೆ ತಡೆದ ಘಟನೆಗಳು ನಡೆದಿದೆ. ಕಾನೂನುಗಳು ಬದಲಾವಣೆ ತಂದಿಲ್ಲ ಎಂದರ್ಥವಲ್ಲ. ದಲಿತ ಮಹಿಳೆಯರಿಗೆ ಸರ್ಕಾರಿ ಶಾಲೆಗಳ ಅಡುಗೆ ಕೆಲಸ ಸಿಗುವಲ್ಲಿ ಕಾನೂನುಗಳ ಪಾತ್ರ ಮಹತ್ವದ್ದಾಗಿದೆ ಎಂದು ಅವರು ವಿವರಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ ಅವರ ಕೊಡುಗೆಗಳು ಈ ಬದಲಾವಣೆಗೆ ನೆರವಾಗಿವೆ. ಅಡುಗೆ ಮಾಡುವ ಅವಕಾಶ ದೊರೆತಿರುವುದಷ್ಟೇ ಸಾಕಾಗುವುದಿಲ್ಲ. ಎಲ್ಲಾ ಸಮುದಾಯದ ಜನರು ಒಟ್ಟಿಗೆ ಕುಳಿತು ಊಟ ವಾಡುವಂತಹ ಸಾವಾಜಿಕ ವಾತಾವರಣ ನಿರ್ಮಾಣವಾಗಬೇಕು ಎಂದರು.

ಎಂಪಿಸಿಎಸ್ ನೌಕರರಿಗೆ ಸೌಲಭ್ಯ ಭರವಸೆ ನೀಡಿದ ಬಮುಲ್ ನಿರ್ದೇಶಕರು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ಹಾಲು ಉತ್ಪಾದಕರ ಸಹಕಾರ ಸಂಘಗಳ (ಎಂಪಿಸಿಎಸ್) ನೌಕರರ ಸಮಸ್ಯೆಗಳನ್ನು ಪರಿಹರಿಸುವ ಜೊತೆಗೆ ಅಗತ್ಯ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬಮುಲ್ ನಿರ್ದೇಶಕ ಎಸ್.ಲಿಂಗೇಶ್ ಕುಮಾರ್ ಭರವಸೆ ನೀಡಿದರು.

ತಾಲ್ಲೂಕಿನ ಕೆಂಗಲ್ ಬಳಿ ಆಯೋಜಿಸಿದ್ದ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಸಭೆ ಹಾಗೂ ನಿವೃತ್ತ ನೌಕರರಿಗೆ ಆರ್ಥಿಕ ಸಹಕಾರ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರೈತರು ಮತ್ತು ಬಮುಲ್ ನಡುವೆ ಎಂಪಿಸಿಎಸ್ ನೌಕರರು ಕೊಂಡಿಯಾಗಿ ಕೆಲಸ ಮಾಡುತ್ತಿದ್ದಾರೆ. ನೌಕರರ ಸೇವೆಗೆ ಸೂಕ್ತ ಗೌರವ ನೀಡುವುದು ಹಾಗೂ ಅವರ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸಲಾಗುವುದು ಎಂದರು.

ಸಭೆಯಲ್ಲಿ ಹಾಜರಿದ್ದ ನೌಕರರು ತಮ್ಮ ಹಲವು ಸಮಸ್ಯೆಗಳನ್ನು ನಿರ್ದೇಶಕರು ಹಾಗೂ ಬಮುಲ್ ಅಧಿಕಾರಿಗಳ ಗಮನಕ್ಕೆ ತಂದರು. ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನೌಕರರ ಸಂಘದ ಅಧ್ಯಕ್ಷ ಗರಕಹಳ್ಳಿ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ವಂದಾರಗುಪ್ಪೆ ರವಿ ಸಂಘದ ಲೆಕ್ಕಪತ್ರ ಮಂಡಿಸಿದರು.

ನಿವೃತ್ತ ಸಿಇಒಗಳಾದ ದೊಡ್ಡನಹಳ್ಳಿ ಬಿಳಿಯಪ್ಪ, ಕನ್ನಿದೊಡ್ಡಿ ಪುಟ್ಟಸ್ವಾಮಿ, ಶ್ಯಾನುಭೋಗನಹಳ್ಳಿ ಮಾದಪ್ಪ, ಚನ್ನಂಕೇಗೌಡನದೊಡ್ಡಿ ರಾಜೇಂದ್ರ, ಹಾಲು ಪರೀಕ್ಷರಾದ ಪಟ್ಟು ರಮೇಶ್, ಚನ್ನಂಕೇಗೌಡನದೊಡ್ಡಿ ಚಂದ್ರೇಗೌಡ, ಸಹಾಯಕ ಹನುಮಾಪುರದೊಡ್ಡಿ ಹನುಮಂತಯ್ಯ ಅವರನ್ನು ಸನ್ಮಾನಿಸಿ, ತಲಾ 50 ಸಾವಿರ ಆರ್ಥಿಕ ಸಹಾಯದ ಚೆಕ್ ನೀಡಲಾಯಿತು.

ಅಂತರಾಳದಿಂದ..
EDITORIAL

ಬೆಲೆ ಹೆಚ್ಚಳದ ಬರೆಗಿಂತ ಮಿತವ್ಯಯವೇ ಪರಿಹಾರ

ಸದ್ಯದ ಪರಿಸ್ಥಿತಿಯಲ್ಲಿ ಸರಕಾರ ಎಲ್ಲಾ ತೆರನಾದ ದುಂದುವೆಚ್ಚಗಳಿಗೆ ಕಡಿವಾಣ

ಪ್ರಸಕ್ತ ಮುಂಗಾರು ಮತ್ತು ಹಿಂಗಾರು ಅವಧಿಯಲ್ಲಿ ತೀವ್ರ ಮಳೆ ಕೊರತೆಯ ಕಾರಣದಿಂದಾಗಿ ರಾಜ್ಯಾದ್ಯಂತ ವ್ಯಾಪಕ ಬರ ಪರಿಸ್ಥಿತಿ ತಲೆದೋರಿದೆ. ಬರದಿಂದಾಗಿ ಆಹಾರಧಾನ್ಯಗಳ ಸಹಿತ ಎಲ್ಲಾ ಕೃಷಿ ಬೆಳೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವುದರಿಂದ ಬಹುತೇಕ ಎಲ್ಲಾ ಆಹಾರ ಧಾನ್ಯಗಳು, ದಿನಸಿ ಸಾಮಗ್ರಿಗಳ ಬೆಲೆ ಈಗಾಗಲೇ ಗಗನಕ್ಕೇರಿವೆ. ದಿನಗೂಲಿ ನೌಕರರು, ಕೃಷಿಕೂಲಿ ಕಾರ್ಮಿಕರು ಬೆಲೆ ಹೆಚ್ಚಳದಿಂದಾಗಿ ತತ್ತರಿಸಿಹೋಗುವಂತಾಗಿದ್ದು, ದೈನಂದಿನ ಜೀವನ ನಡೆಸಲೂ ಹೆಣಗಾಡಬೇಕಾದ ಅನಿವಾರ್ಯತೆಯಲ್ಲಿ ಸಿಲುಕಿದ್ದಾರೆ. ಮುಂದಿನ ದಿನಗಳಲ್ಲಿ ಬೆಲೆ ಹೆಚ್ಚಳದ ಪ್ರಕ್ರಿಯೆ ಇನ್ನಷ್ಟು ಏರುಗತಿಯಲ್ಲಿ ಸಾಗುವುದು ಖಚಿತವಾಗಿದೆ.

ಒಂದೆಡೆಯಿಂದ ಬರ, ಮತ್ತೊಂದೆಡೆಯಿಂದ ಒಂದೇ ಸಮನೆ ಹೆಚ್ಚುತ್ತಲೇ ಸಾಗಿರುವ ದಿನಬಳಕೆ ವಸ್ತುಗಳು ಮತ್ತು ಆಹಾರ ಧಾನ್ಯಗಳ ಬೆಲೆಯ ಹೊರೆಯನ್ನು ತಾಳಿಕೊಳ್ಳಲು ರಾಜ್ಯದ ಜನಸಾಮಾನ್ಯರು ಹರಸಾಹಸ ಪಡುತ್ತಿರುವಂತೆಯೇ ರಾಜ್ಯ ಸರಕಾರ ಗಾಯದ ಮೇಲೆ ಬರೆ ಎಳೆಯುವಂತೆ ನಂದಿನಿ ಹಾಲಿನ ಬೆಲೆಯನ್ನು ಲೀಟರ್‌ಗೆ 8 ರೂ.ಗಳಷ್ಟು ಹೆಚ್ಚಿಸಿದೆ. ಅಷ್ಟು ಮಾತ್ರವಲ್ಲದೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರವನ್ನು ಹೆಚ್ಚಿಸುವ ಕುರಿತಂತೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿಕೆ ನೀಡಿರುವುದು ಜನರನ್ನು ಇನ್ನಷ್ಟು ಆತಂಕಕ್ಕೀಡು ಮಾಡಿದೆ. ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳ ಸತತ ಮನವಿಯ ಸಂಬಂಧ ಕಳೆದ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಿ ಬೆಲೆ ಹೆಚ್ಚಳದ ನಿರ್ಧಾರವನ್ನು ಕೈಗೊಂಡಿತ್ತು.

ಆದರೆ ವಿಧಾನ ಪರಿಷತ್‌ನ ಚುನಾವಣೆ ಹಿನ್ನೆಲೆಯಲ್ಲಿ ಸರಕಾರ ಅಧಿಕೃತ ಘೋಷಣೆ ಮಾಡಿರಲಿಲ್ಲ. ಸಂಪುಟ ಸಭೆಯಲ್ಲಿ ಈ ಕುರಿತಂತೆ ಮತ್ತೊಂದು ಸುತ್ತಿನ ಚರ್ಚೆ ನಡೆಸಿ, ಅಂತಿಮ ನಿರ್ಧಾರ ಕೈಗೊಂಡಿದೆ. ಈಗ ಸರಕಾರ ಹೆಚ್ಚಿಸಿರುವ 8 ರೂ.ಗಳ ಪೈಕಿ 7 ರೂ. ಹೈನುಗಾರರಿಗೆ ಹಾಗೂ 1 ರೂ. ಹಾಲು ಉತ್ಪಾದಕ ಒಕ್ಕೂಟಗಳಿಗೆ ಲಭಿಸಲಿದೆ ಎಂದು ಹೇಳುವ ಮೂಲಕ ಸರಕಾರ ಹೈನುಗಾರರ ಹಿತರಕ್ಷಣೆಯ ಪ್ರಶ್ನೆಯನ್ನು ತನ್ನ ನಿರ್ಧಾರದ ಸಮರ್ಥನೆಗಾಗಿ ಗುರಾಣಿಯನ್ನಾಗಿಸಿಕೊಂಡಿದೆ. ಹೈನುಗಾರರ ಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸುತ್ತಿಲ್ಲ ಎಂಬುದು ಸರ್ವವೇದ್ಯವಾದರೂ ಒಮ್ಮೆಲೇ ಲೀಟರ್‌ಗೆ 8 ರೂ.ಗಳಷ್ಟು ಹೆಚ್ಚಳ ಮಾಡಿರುವುದು ಜನಸಾಮಾನ್ಯರ ಕೆಂಗಣ್ಣಿಗೆ ಗುರಿಯಾಗಿದೆ.ಇನ್ನು ರಾಜ್ಯ ರಸ್ತೆ ಸಾರಿಗೆ ಬಸ್ ಗಳ ಪ್ರಯಾಣ ದರವನ್ನು ಹೆಚ್ಚಿಸುವ ಸುಳಿವನ್ನೂ ಸರಕಾರ ಇದೇ ವೇಳೆ ನೀಡಿದ್ದು ಜನಸಾಮಾನ್ಯರ ಮೇಲೆ ಒಂದರ ಮೇಲೊಂದರಂತೆ ಬೆಲೆ ಹೆಚ್ಚಳದ ಹೊರೆ ಹೇರಲು ಮುಂದಾಗಿರುವಂತೆ ತೋರುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಸರಕಾರ ಎಲ್ಲಾ ತೆರನಾದ ದುಂದುವೆಚ್ಚಗಳಿಗೆ ಕಡಿವಾಣ, ಅನಿವಾರ್ಯವಾದ ಅಭಿವೃದ್ಧಿ ಕಾಮಗಾರಿ, ಯೋಜನೆಗಳ ಅನುಷ್ಠಾನವನ್ನಷ್ಟೇ ಕೈಗೆತ್ತಿಕೊಂಡು ಉಳಿದ ಯೋಜನೆಗಳನ್ನು ತಿಂಗಳುಗಳ ಮಟ್ಟಿಗೆ ಮುಂದೂಡುವುದು, ಕಾಟಾಚಾರಕ್ಕಾಗಿ ನಡೆಸಲಾಗುವ ಅನಗತ್ಯ ಸರಕಾರಿ ಕಾರ್ಯಕ್ರಮ, ಸಭೆ, ಸಮಾರಂಭ, ಸಚಿವರು, ಅಧಿಕಾರಿಗಳ ಪ್ರವಾಸವನ್ನು ನಿರ್ಬಂಧಿಸುವುದರಿಂದ ರಾಜ್ಯದ ಬೊಕ್ಕಸಕ್ಕೆ ಆರ್ಥಿಕ ಬಲ ತುಂಬಿ ಈ ಹಣವನ್ನು ಸಂಕಷ್ಟದಲ್ಲಿರುವ ಹೈನುಗಾರರು, ಸಾರಿಗೆ ನಿಗಮಗಳಿಗೆ ಹಂಚಿಕೆ ಮಾಡಬಹುದಾಗಿದೆ. ಹೈನುಗಾರರಿಗೆ ಮತ್ತು ನಷ್ಟದಲ್ಲಿರುವ ಕೆಎಸ್‌ಆರ್‌ಟಿಸಿ ಗೆ ಆರ್ಥಿಕ ಬಲ ತುಂಬುವ ಕಳಕಳಿ ಇದ್ದದ್ದೇ ಆದಲ್ಲಿ ಜನಸಾಮಾನ್ಯರಿಗೆ ಬೆಲೆ ಏರಿಕೆಯ ಹೊಡೆತ ನೀಡುವ ಬದಲು ಇಂತಹ ಪರ್ಯಾಯ ಮಾರ್ಗಗಳನ್ನು ಸರಕಾರ ಅನುಸರಿಸುವುದು ಸೂಕ್ತ.

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

24

ಹಸ್ತಗಳು ತಂಪಾಗುತ್ತಿದ್ದರೆ ಈ ರೀತಿ ಮಾಡಿ

ಕೈ ತಂಪಾದಾಗ ಬರವಣಿಗೆ ನಿಧಾನವಾಗುತ್ತದೆ, ಅಕ್ಷರಗಳು ವಕ್ರವಾಗುತ್ತವೆ. ಪೆನ್ನನ್ನು ಬಿಗಿಯಾಗಿ ಹಿಡಿದಷ್ಟೂ ನೋವು ಹೆಚ್ಚುತ್ತದೆ. ಈ ಹೊತ್ತಿನಲ್ಲಿ ಗಾಬರಿಯಾಗುವುದು ಬೇಡ. ಇದು ತಾತ್ಕಾಲಿಕ ಸ್ಥಿತಿ. ರಕ್ತ ಸಂಚಾರವನ್ನು ಸರಿಪಡಿಸಿದರೆ ಎರಡೇ ನಿಮಿಷದಲ್ಲಿ ಕೈಗಳು ಮತ್ತೆ ಬೆಚ್ಚಗಾಗುತ್ತವೆ.

ಆತಂಕದ ಸಮಯದಲ್ಲಿ ಹಲವರ ಕೈಗಳು ಇದ್ದಕ್ಕಿದ್ದಂತೆ ತಂಪಾಗುತ್ತವೆ. ಪರೀಕ್ಷಾ ಕೊಠಡಿಯಲ್ಲಿ ಪೆನ್ನು ಹಿಡಿಯುವಾಗ ಬೆರಳುಗಳು ನಡುಗುತ್ತವೆ, ಮಂಜುಗಡ್ಡೆಯಂತೆ ತೋರುತ್ತವೆ. ಏನೋ ತೊಂದರೆಯೇ ಎಂದು ಭಯವಾಗುತ್ತದೆ. ಇದು ರೋಗವಲ್ಲ.

ಒತ್ತಡ ಬಂದಾಗ ದೇಹ ರಕ್ತವನ್ನು ಹೃದಯ ಮತ್ತು ಮಿದುಳಿನೆಡೆಗೆ ಹೆಚ್ಚು ಕಳುಹಿಸುತ್ತದೆ, ಕೈಕಾಲುಗಳಿಗೆ ರಕ್ತ ಹರಿವು ಕಡಿಮೆಯಾಗಿ ತಂಪು ಆವರಿಸುತ್ತದೆ.

ಅಂಗೈಗಳನ್ನು ಇಪ್ಪತ್ತು ಸೆಕೆಂಡು ಪರಸ್ಪರ ಉಜ್ಜಿ, ಮುಷ್ಟಿ ಮಾಡಿ ಹತ್ತು ಬಾರಿ ತೆರೆದು ಮುಚ್ಚಿ. ಕೈಗಳನ್ನು ಮೇಲಕ್ಕೆ ಎತ್ತಿ ನಿಧಾನವಾಗಿ ಅಲುಗಾಡಿಸಿ. ಉಗುರು ಬೆಚ್ಚಗಿನ ನೀರು ಕುಡಿಯಿರಿ, ಪಾದಗಳನ್ನು ನೆಲಕ್ಕೆ ಒತ್ತಿ ಬಿಡಿ, ಆಳವಾಗಿ ಉಸಿರಾಡಿ. ಮನಸ್ಸು ಶಾಂತವಾದಂತೆ ಕೈಗಳು ಸಹಜವಾಗಿ ಉಷ್ಣತೆಯನ್ನು ಪಡೆದುಕೊಳ್ಳುತ್ತವೆ. ತಂಪಾದ ಕೈ ಸೋಲಿನ ಸೂಚನೆಯಲ್ಲ, ದೇಹ ಒತ್ತಡದಲ್ಲಿದೆ ಎಂಬ ಎಚ್ಚರಿಕೆ. ಅದನ್ನು ಪ್ರೀತಿಯಿಂದ ನೋಡಿಕೊಳ್ಳಿ. ಕೈ ಬೆಚ್ಚಗಾದರೆ ಮನಸ್ಸು ಸ್ಥಿರವಾಗುತ್ತದೆ, ಸ್ಥಿರ ಮನದಿಂದ ಬರೆದ ಉತ್ತರವೇ ಯಶಸ್ಸು ತರುತ್ತದೆ.

ಕರುನಾಡ ಹಬ್ಬ......ನಮ್ಮ ಕನ್ನಡ ರಾಜ್ಯೋತ್ಸವ......

ಕನ್ನಡ ನಾಡು ಚಂದ
ಕನ್ನಡ ಭಾಷೆ ಅಂದ
ಕನ್ನಡ ಜನ ಚಂದ
ನಮ್ಮ ಕನ್ನಡ ನುಡಿ ಅಂದ......

ಜನನಿ ಜನ್ಮ ಭೂಮಿಶ್ಚ ಸ್ವರ್ಗ ರಪಿ ಗರಿಯಸಿ.... ಜನ್ಮ ಕೊಟ್ಟ ತಾಯಿ, ನಮ್ಮನ್ನು ಹೊತ್ತು ನಿಂತಿರುವ ಕನ್ನಡ ತಾಯಿ ಇಬ್ಬರೂ ಕೂಡ ಆ ಸ್ವರ್ಗಕ್ಕಿಂತ ಶ್ರೇಷ್ಠ.....ಜೈ ಭುವನೇಶ್ವರಿ

ಕನ್ನಡಿಗರ ಹಬ್ಬ....ಕರುನಾಡ ಜಾತ್ರೆ....ನಮ್ಮ ಹೆಮ್ಮೆಯ ಕನ್ನಡ ರಾಜ್ಯೋತ್ಸವ. ಎಲ್ಲ ಸಮಸ್ತ ಕನ್ನಡ ಮನಸುಗಳಿಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು...... ಸ್ನೇಹಿತರೆ...ನವೆಂಬರ್ ಬಂತು ಏನಪ್ಪ ನವಂಬರ್ ವಿಶೇಷ ಅಂದರೆ..ಕನ್ನಡ ರಾಜ್ಯೋತ್ಸವ. ಯಾರನ್ನ ಕೇಳಿದರು ಇದೇ ಉತ್ತರ ಅಂದ್ರೆ ಕನ್ನಡ ತಾಯಿ ಭುವನೇಶ್ವರಿಯನ್ನ ನಾವು ನೆನಪುಮಾಡಿಕೊಳ್ಳುವುದು ಕೇವಲ ನವಂಬರ್ ಒಂದನೇ ತಾರೀಕು ಮಾತ್ರವೇ.....? ಹೌದು ಇವತ್ತಿನ ದಿನಗಳಲ್ಲಿ ನಾವು ನವಂಬರ್ ತಿಂಗಳಲ್ಲಿ ಮಾತ್ರವೇ ಕನ್ನಡ... ನಾವು ಕರ್ನಾಟಕದಲ್ಲಿದ್ದೀವಿ , ನಾವು ಕನ್ನಡಿಗರು ಎಂದು ಹಳದಿ – ಕೆಂಪು ಶಾಲು, ಭಾವುಟ ಹಾಕಿ ರಾಜ್ಯೋತ್ಸವವನ್ನು ಮುಗಿಸಿಬಿಡುತ್ತೇವೆ. ಮತ್ತೆ ನಮಗೆ ಕನ್ನಡ ನೆನಪಾಗುವುದು ಮುಂದಿನ ನಂಬರ್ ಒಂದನೇ ತಾರೀಕು ಅಲ್ಲವೇ.... ಹೌದು ಇವತ್ತಿನ ವಾತಾವರಣ ಸ್ಥಿತಿ ಹಿಗಿದೆ.. ಇದು ನಮ್ಮ ದುರ್ದೈವ. ನಮ್ಮ ಕರ್ನಾಟಕದಲ್ಲಿ ಹುಟ್ಟಿರತಕ್ಕಂತಹ ಪ್ರತಿಯೊಬ್ಬ ಕನ್ನಡಿಗನು ಪ್ರತಿ ಕ್ಷಣ.. ಪ್ರತಿ ನಿಮಿಷ.. ಕನ್ನಡಿಗನಾಗಿಯೇ ಇರಬೇಕು ಎನ್ನುವುದು ನನ್ನ ಆಶಯ ಹಾಗಾದ್ರೆ ಬನ್ನಿ ಕನ್ನಡದ ಶ್ರೀಮಂತ ಇತಿಹಾಸದ ಬಗ್ಗೆ ನೋಡಣ..... ನಮ್ಮ ಸುಂದರ ಕರ್ನಾಟಕದ ಪರಂಪರೆಯಲ್ಲಿ ಕನ್ನಡದ ನೆಲಕ್ಕೆ ನಾವು ತಾಯಿಯ ಸ್ಥಾನವನ್ನು ಕೊಟ್ಟು ಗೌರವಿಸುತೆವೆ. ಅಷ್ಟರಮಟ್ಟಿಗೆ ತಾಯ್ನಾಡಿನ ಬಗ್ಗೆ ತಾಯಿ ನೆಲದ ಬಗ್ಗೆ ಆಡುವ ನುಡಿಯ ಬಗ್ಗೆ ಇಲ್ಲಿಯ ಜನ ಅಪಾರವಾದ ಅಭಿಮಾನ,ಶ್ರದ್ದೆ, ಭಕ್ತಿಯನ್ನು ಹೊಂದಿದ್ದಾರೆ. ಏಕೆಂದರೆ ಇಲ್ಲಿನ ಮಣ್ಣಿಗೆ...ಭಾಷೆಗೆ ಅಂತಹ ವೈಭವವಾದ ಇತಿಹಾಸವಿದೆ ಮತ್ತು ಶ್ರೀಮಂತವಾದ ಹಿನ್ನೆಲೆ ಕೂಡ ಇದೆ. ಕನ್ನಡ ಏನೇ ಕುಣಿದಾಡುವುದೆನ್ನದೆ ಕನ್ನಡ ಏನ ಕಿವಿ ನಿಮಿರುವುದು ನಮ್ಮ ಕನ್ನಡದಲ್ಲಿ ಅರಿ ಬರೆಯುತ್ತಾನೆ. ಕನ್ನಡ ಭಾಷೆಯಲ್ಲಿ ಪ್ರಾರ್ಥನೆ ಮಾಡಿದರೆ ಸಾಕ್ಷಾತ್ ಶಿವ ನಮ್ಮನ್ನ ಸಲಹುತ್ತಾನೆ. ಕುವೆಂಪುರವರು ಹೇಳುವ ಹಾಗೆ ಕನ್ನಡ ಅದು ಕೇವಲ ಹೆಸರಲ್ಲ ಅದೊಂದು ಮಂತ್ರ.... ನಮ್ಮ ಕನ್ನಡಕ್ಕೆ 2000 ದಿಂದ 2500 ವರ್ಷಗಳ ಮೀರಿದ ಭವ್ಯ ಇತಿಹಾಸವಿದೆ ಅಂತ ಅಂದಾಜು ಮಾಡಲಾಗಿದೆ.

ನಮ್ಮ ಕನ್ನಡವನ್ನ ಜಗತ್ತಿನ ಅತ್ಯಂತ ಹಳೆ ಭಾಷೆಗೆ ಸೇರಿಸಲಾಗಿದೆ. ನಮ್ಮ ದೇಶದಲ್ಲಿ ಹಳೆಯ ಭಾಷೆಗಳನ್ನ ಲೆಕ್ಕ ಹಾಕುವಾಗ ಕನ್ನಡಕ್ಕೆ ಮೂರನೇ ಸ್ಥಾನವನ್ನು ಕೊಡಲಾಗಿದೆ. ಇನ್ನು ಕನ್ನಡದ ಲಿಪಿಯ ವಿಚಾರಕ್ಕೆ ಬಂದರೆ ಅಶೋಕನ ಶಿಲಾ ಶಾಸನಗಳ ಮೂಲಕ ಭಾರತದ ಎಲ್ಲಾ ಕಡೆ ಜನಪ್ರಿಯಗೊಂಡು ಎಲ್ಲಾ ಆಧುನಿಕ ಭಾಷೆಗೆ ಮೂಲ ಲಿಪಿ ಎಂದು ಕರೆಸಿಕೊಂಡಿರುವ ಬ್ರಾಹ್ಮಿ ಲಿಪಿಯಿಂದ ಕನ್ನಡ ಭಾಷೆಯ ಲಿಖಿತ ರೂಪ ಗಳನ್ನು ಪಡೆಯಲಾಗಿದೆ. ನಾವು ಬಳಸುವ ಮೂಲ ಲಿಪಿಯರೂಪ ಬ್ರಾಹ್ಮೀ ಲಿಪಿ ಆಗಿದೆ. ಕ್ರಿಸ್ತಶಕ 450ಕ್ಕೆ ಸೇರಿದ ಹಲ್ಮಿಡಿ ಶಾಸನ ಕನ್ನಡದ ಆರಂಭ ರೂಪ ದೊರೆತಿದೆ.. ತಾಳಗುಂದ ಶಾಸನ ಹಲ್ಮಿಡಿ ಶಾಸನಕ್ಕಿಂತ ಹಳೆದು ಎಂದು ಪುರಾತತ್ವ ಇಲಾಖೆ ಹೇಳಿಕೊಂಡಿದೆ ಬಾದಾಮಿ ಚಾಲುಕ್ಯರ ಅನೇಕ ಶಾಸನಗಳನ್ನು ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗಿದೆ. ಈ ಕನ್ನಡ ಲಿಪಿಯ ಸೌಂದರ್ಯ ಮತ್ತು ಸರಳತೆಯನ್ನು ಮೆಚ್ಚಿ ಆಚಾರ್ಯ ವಿನೋಬಾವೆ ಕನ್ನಡದ ಲಿಪಿ ಜಗತ್ತಿನ ಲಿಪಿಗಳ ರಾಣಿ ಎಂದು ಹೇಳಿದ್ದಾರೆ. ಕನ್ನಡ ಕರ್ನಾಟಕದ ಅಧಿಕೃತ ಭಾಷೆ. ಭಾರತ ಸಂವಿಧಾನ ಗುರುತಿಸಿರುವ ಅಧಿಕೃತ 22 ಭಾಷೆಗಳಲ್ಲಿ ನಮ್ಮದು ಕೂಡ ಒಂದು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಪಡೆದ ಮೂರನೇ ಭಾಷೆಯಾಗಿದೆ. ಇವತ್ತಿಗೆ ಪ್ರಪಂಚದಲ್ಲಿ ಸುಮಾರು 56 ಮಿಲಿಯನ್ ಜನ ಕನ್ನಡವನ್ನ ಮಾತನಾಡುತ್ತಿದ್ದಾರೆ. ಜಗತ್ತಿನ ಅತಿ ಹೆಚ್ಚು ಮಾತನಾಡುವ ಭಾಷೆಯಲ್ಲಿ 30ನೇ ಸ್ಥಾನವಿದೆ. ನಮ್ಮ ಕನ್ನಡ 99.99 ರಷ್ಟು ಸೈಂಟಿಫಿಕ್ ಭಾಷೆಯಾಗಿದೆ. ನಮ್ಮ ಭಾಷೆಯಲ್ಲಿ ಏನು ಮಾತನಾಡುತ್ತೇವೆ ಹಾಗೆ ಅದನ್ನು ಬರೆಯುತ್ತೇವೆ. ವೈಜ್ಞಾನಿಕವಾಗಿ ಸ್ಪಷ್ಟವಾದ ಭಾಷೆಯಾಗಿದೆ. ಶ್ರೀವಿಜಯ ಕವಿರಾಜ ಮಾರ್ಗದಲ್ಲಿ ಕನ್ನಡಿಗರ ಬಗ್ಗೆ ಹೇಳುತ್ತಾ... ಕುರಿತೋದಯಂ ಕಾವ್ಯ ಪ್ರಯೋಗ ಪರಿಣಿತ ಮತ್ತಿಗಳ್....ಅಂದರೆ ಕನ್ನಡಿಗರು ಕಾವ್ಯವನ್ನು ಅಭ್ಯಾಸ ಮಾಡದೆ ಕಾವ್ಯ ಪ್ರಯೋಗವನ್ನೇ ಮಾಡುವ ಮಟ್ಟಿಗೆ ಜ್ಞಾನವನ್ನು ಹೊಂದಿದ್ದಾರೆ ಎಂದು. ಸ್ನೇಹಿತರೆ...... ಕರ್ನಾಟಕದ ಏಕೀಕರಣದ ಇತಿಹಾಸವನ್ನು ನೋಡುವುದಾದರೆ ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾಯರು, ಕರ್ನಾಟಕ ಏಕೀಕರಣ ಚಳುವಳಿಯನ್ನು 1905 ರಲ್ಲಿ ಪ್ರಾರಂಭಿಸಿದರು.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಭಾರತರತ್ನ,ಮಾಜಿ ಗೃಹ ಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲ್ ರವರ 151ನೇ ವರ್ಷದ ಜನ್ಮದಿನಾಚರಣೆ

ಸರ್ದಾರ್ ವಲ್ಲಭಾಯಿ ಪಟೇಲ್ ರವರು 1875 ಅಕ್ಟೋಬರ್ 31ರಂದು ಗುಜರಾತ್ ನಲ್ಲಿ ಜನಿಸಿದರು. ತಂದೆ ಜವೇರಬಾಯಿ, ತಾಯಿ ಲಾಡ್ಬಾ. ಅಪಾರವಾದ ದೇಶಭಕ್ತಿ,ಬಡವರ, ರೈತರ,ದೀನದಲಿತರ ಪರವಾಗಿ ನಿಂತವರಲ್ಲಿ ಒಬ್ಬರಾಗಿದ್ದವರು.

ಇವರ ವ್ಯಕ್ತಿತ್ವದ ಬಗ್ಗೆ ವರ್ಣಿಸಲು ಮಾತುಗಳೇ ಬರುತ್ತಿಲ್ಲ. ಅಂತಹ ಅದ್ಭುತ- ಅತ್ಯದ್ಭುತ ಆಡಳಿತಗಾರರು. ಇವರ ಧೈರ್ಯ, ಸಾಹಸ, ಚಾಣಾಕ್ಷತನದಿಂದ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ಸ್ಮರಣೀಯ. ಕೇಂದ್ರದ ಗೃಹ ಮಂತ್ರಿಯಾಗಿ ಅತ್ಯಂತ ಸಮರ್ಥವಾಗಿ ಹುದ್ದೆಯನ್ನು ನಿರ್ವಹಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕಾರಣಾಂತರದಿಂದ ಭಾರತದ ಪ್ರಧಾನಮಂತ್ರಿ ಹುದ್ದೆ ಕೈತಪ್ಪಿದಾಗ ಮನ ನೊಂದುಕೊಂಡ ಜೀವ.

ಸನ್ಮಾನ್ಯರಿಗೆ ಭಾರತದ ಉಕ್ಕಿನ ಮನುಷ್ಯ, ಭಾರತದ ಬಿಸ್ಮಾರ್ಕ್, ಸರ್ದಾರ್, ಹಿಮ ಮುಚ್ಚಿದ ಜ್ವಾಲಾಮುಖಿ ಬಿರುದುಗಳ ಜೊತೆಗೆ ಭಾರತ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಇಂತಹ ದೇಶಭಕ್ತ ,ರಾಷ್ಟ್ರಪ್ರೇಮಿ, ರಾಷ್ಟ್ರನಾಯಕ,ಸರ್ವ ಸಮರ್ಪಣಾ ಭಾವದಿಂದ ದೇಶ ಸೇವೆ ಸಲ್ಲಿಸಿದ ಸರ್ದಾರ್ ವಲ್ಲಭಾಯ್ ಪಟೇಲ್ ರವರು 1950 ಡಿಸೆಂಬರ್ 15ರಂದು ತಮ್ಮ ಭೌತಿಕ ಶರೀರವನ್ನು ತನ್ನ 75ನೇ ವಯಸ್ಸಿನಲ್ಲಿ ತೊರೆದರು.

ಇಂದು ಅವರ 151ನೇ ವರ್ಷದ ಜನ್ಮ ದಿನ.

ಇಂದು ನಾವುಗಳು ಶ್ರದ್ಧಾಭಕ್ತಿಯೊಂದಿಗೆ ಅವರ ಹುಟ್ಟುಹಬ್ಬವನ್ನು ಆಚರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಹೊಣೆಗಾರಿಕೆ ಮತ್ತು ಜವಾಬ್ದಾರಿ ಹೌದು.

ಸರ್ದಾರ್ ಪಟೇಲ್ ರವರ ಆದರ್ಶ, ಮಾರ್ಗದರ್ಶನ,ಆಡಳಿತ, ಪ್ರಮಾಣಿಕತೆ ಮಿಗಿಲಾಗಿ ಮಾನವೀಯತೆಯನ್ನು ಪಾಲಿಸಿದ್ದೇ ಆದರೆ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕುತ್ತದೆ.

ಭಾರತ ರತ್ನ ಹಾಗೂ ಮಾಜಿ ಪ್ರಧಾನಿ ಶ್ರೀಮತಿ: ಇಂದಿರಾಗಾಂಧಿಯವರ 42ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಇಂದಿರಾಗಾಂಧಿಯವರು 1917 ನವಂಬರ್ 19 ರಂದು ಅಲಹಾಬಾದಿನಲ್ಲಿ ಜನಿಸಿದರು.ತಂದೆ ಜವಾಹರ್ಲಾಲ್ ನೆಹರು ತಾಯಿ ಕಮಲ ನೆಹರು.

ಪಂಡಿತ್ ಜವಾಹರ್ ಲಾಲ್ ನೆಹರು,ಜಿಎಲ್ ನಂದಾ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿಯವರ ನಂತರ ಭಾರತ ದೇಶದ ಪ್ರಧಾನಮಂತ್ರಿ ಹುದ್ದೆಯ ಅಧಿಕಾರ ಚುಕ್ಕಾಣಿಯನ್ನು ಹಿಡಿದು ಸುಮಾರು 14 ವರ್ಷಗಳ ಕಾಲ ಸಮರ್ಥವಾಗಿ ನಿರ್ವಹಿಸಿದ ಒಬ್ಬ ಧೀಮಂತ ಮಹಿಳೆ.

ಅವರ ಅವಧಿಯಲ್ಲಿ ಅನೇಕ ಪ್ರಗತಿಪರ ಅಭಿವೃದ್ಧಿಗಳನ್ನು ಮಾಡಿರುವ ದಾಖಲೆಯಿದೆ. ಶ್ರೀಮತಿಯವರು ದೇಶದ ಸಮಗ್ರತೆಯ ಸರ್ವತೋಮುಖ ಅಭ್ಯುದಯಕ್ಕಾಗಿ, ನಿರಂತರವಾಗಿ ಶ್ರಮಿಸಿದ ರಾಷ್ಟ್ರನಾಯಕಿಯಾಗಿ ವಿಶ್ವದ ಗಮನ ಸೆಳೆದ ದಿಟ್ಟ ಮಹಿಳೆ.

ಭಾರತ ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಶ್ರೀಮತಿಯವರು ಅಕ್ಟೋಬರ್ 31,1984 ರಂದು ತಮ್ಮ ಅಂಗರಕ್ಷಕರ ಕಡೆಯಿಂದ ಹುತಾತ್ಮರಾದರು. ಅಂದು ಇಡೀ ವಿಶ್ವವೇ ಇಂದಿರಾಗಾಂಧಿಯವರ ಮರಣಕ್ಕಾಗಿ ಶೋಕಿಸಿತು.ಅವರ ಸ್ಮರಣಾರ್ಥ ಆ ದಿನವನ್ನು ಏಕತಾ ದಿನವನ್ನಾಗಿ ರಾಷ್ಟ್ರದಲ್ಲಿ ಆಚರಿಸಲಾಗುತ್ತಿದೆ. ಇಲ್ಲಿಗೆ ಅವರ 42 ನೇ ವರ್ಷದ ಪುಣ್ಯಸ್ಮರಣೆಯ ದಿನವಾದ ಇಂದು ಸ್ಮರಿಸಿ ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

ರಾಮಾಯಣ

23. ರಾವಣನೇ ಯುದ್ಧರಂಗಕ್ಕೆ ನಡೆತಂದುದು; ಅವನನ್ನು ಲಕ್ಷ್ಮನು ಎದುರಿಸುವು

• ಹಿಂದಿನ ಸಂಚಿಕೆಯಿಂದ

121ನೆಯ ಅಧ್ಯಾಯ

ಭೂಮಿಯಲ್ಲಾಗಲೀ ಪಾತಾಳದಲ್ಲಾಗಲೀ ರಣದಲ್ಲಿ ಇವನನ್ನು ಎದುರಿಸುವವರಿಲ್ಲ ಎಂಬ ಹೆಗ್ಗಳಿಕೆಯನ್ನು ಪಡೆದ ಈ ತನ ಅತಿಬಲನೂ ಮಹಾವಿಕ್ರಮಿಯೂ ಆದ ದಶಕಂಠ, ತ್ರಿದಶಾರಿ – ಅವನನ್ನು ನೋಡು?'' ಹೀಗೆಂದು ರಾವಣನ ಮಹಾಬಲದ ವೈಭವಗಳನ್ನೆಲ್ಲ ವಿವರವಾಗಿ ಹೇಳಿ ಕೈಮುಗಿದು ನಿಂತ ಅವನ ಮಾತುಗಳನ್ನು ಕೇಳಿದ ರಘುವರನು ಅವನನ್ನು ಹೊಗಳಿ, ''ಸೂರ್ಯಕಿರಣಗಳಂತೆ ಹೊಳೆಯುವ ದೇಹಭಾವ, ಹತ್ತು ತಲೆಗಳೂ, ಇಪ್ಪತ್ತು ಭುಜಗಳು – ಇವುಗಳಿಂದ ಕೂಡಿ ರಣಾಗ್ರಭವನಾದ ಈ ರಾವಣನು ಮಹಾಪರ್ವತದಂತೆ ಕಂಗೊಳಿಸುತ್ತಾನೆ! ಈ ರೂಪಸಂಪತ್ತು, ದೇಹಕಾಂತಿ, ಈ ತೋರ ಬಾಹುಗಳುಗಳಿಂದಲೂ ಪೌರುಷದಿಂದಲೂ ಕೂಡಿ ರಾವಣನು ಸರ್ವಲಕ್ಷಣಭರಿತನಾಗಿದ್ದಾನೆ! ಇಂತಹ ವೈಭವವು ಈ ಧರಾತಳದಲ್ಲಿ ಬೇರಾರಿಗಿದೆ ಶಿವನ ವಿಷ್ಣುವಿನ ಕೃಪೆಯನ್ನು ಹೊಂದಿದ ವೀರರಲ್ಲಿ ನಿಜವಾಗಿಯೂ ಈತನು ಅಗ್ರಗಣ್ಯ'' ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ. ''ಬಲಪೌರುಷಗಳು, ಸೂರ್ಯಸಮ ತೇಜಸ್ಸು, ಮಹಾ ಪರಾಕ್ರಮ, ಧೈರ್ಯಶೌರ್ಯಗಳಲ್ಲಿ ಇವನಿಗೆ ಸರಿಸಾಟಿಯಾಗಿ ನಿಲ್ಲಬಲ್ಲವರು ಧರೆಯಲ್ಲಿಯಾಗಲೀ ದೇವಾಸುರರಲ್ಲಿಯಾಗಲೀ ಯಾರಿದ್ದಾರೆ? ಕಲಿಗಳೂ, ಪರ್ವತಸಮದೇಹಿಗಳೂ, ಸಕಲ ಶಸ್ತ್ರಾಸ್ತ್ರಕಲಿತರೂ ಆದ ಭಟರಿಂದ ತುಂಬಿದ ರಕ್ಕಸಬಲವು ಈತನಿಗಲ್ಲದೆ ಮೂರುಲೋಕಗಳಲ್ಲಿ ಬೇರಾರಿಗುಂಟು? ಭೀಮವಿಕ್ರಮದಿಂದ, ಹರಿತ ಹಲ್ಲುಗಳಿಂದ ಕೂಡಿದ ಮಹಾ ಭೂತಗಳಿಂದ ಕೂಡಿ ಯಮನೇ ಭೂತಳಕ್ಕಿಂದಂತೆ ಕಾಣುವವರು ಇವನಂತೆ ಜಗತ್ತಿನಲ್ಲಿ ಮತ್ತಾರಿದ್ದಾರೆ? ಕಾಮವಶನಾಗಿ ಬೇರೆಯವನ ಹೆಂಡತಿಯನ್ನು ಬಯಸಿ ಅಜ್ಞಾನವಶನಾಗಿ ತಾನು ಕಷ್ಟದಿಂದ ಗಳಿಸಿರುವ ಈ ಮಹದ್ಭಾಗ್ಯವನ್ನು ಕಳೆದುಕೊಳ್ಳುವನಲ್ಲ ಎಂದು ಹೇಳಿ, ಪರಸತಿಯನ್ನು ಬಯಸಿದವನ ಐಸಿರಿಯು ಬಿಸಿಲ ತೊರೆಯಂತೆ ಕಣ್ಮರೆಯಾಗುವುದಲ್ಲದೆ ಸ್ಥಿರವಾಗಿರಬಲ್ಲುದೇ? ಇವನು ಹಿಂದಿರುಗಿ ಹೇಗೆ ಹೋಗುತ್ತಾನೋ ನೋಡೋಣ ಎಂದು ಕೋಪಗೊಂಡ ರಾಮನು ತನ್ನ ಬಿಲ್ಲುಬಾಣಗಳನ್ನು ಸಜ್ಜುಗೊಳಿಸಿಕೊಂಡು, ಸೌಮಿತ್ರಿಯೊಡನೆ ಸೇರಿ ಯುದ್ಧಸನ್ನದ್ಧನಾದ. ಇತ್ತ ರಾವಣನು ತನ್ನ ಪುರದ್ವಾರದಿಂದ ಹೊರಬರುತ್ತಲೇ, ಲಂಕೆಯ ಅಗಸೆ ಬಾಗಿಲುಗಳನ್ನು ಕಾಯಲು ತನ್ನ ಭಟರನ್ನು ಗುಂಪುಗಳನ್ನಾಗಿ ವಿಭಾಗಿಸಿ ನಿಲ್ಲಿಸಿ, ಈ ಶಾಖಾಮೃಗಸಂತತಿಯನ್ನು ನುಂಗಿ ನೊಣೆಯುತ್ತೇನೆ ಎಂದು ಲಯಕಾಲರುದ್ರನಂತೆ ಆರ್ಭಟಿಸುತ್ತ. ಅಸ್ತ್ರಶಸ್ತ್ರಗಳನ್ನು ಕೊಡಹುತ್ತ, ತನ್ನ ಎಡಬಲಗಳಲ್ಲಿ ಭಟರು ನಡೆದುಬರುತ್ತಿರಲು, ಭೂತಳವೇ ನಡುಗುವಂತೆ ಮುಂಬರಿದು ಬಂದ. ಇದನ್ನು ನೋಡಿದ ಸುಗ್ರೀವನು ಕಡುಗೋಪದಿಂದ ಒಂದು ಬೆಟ್ಟವನ್ನು ಹಿಡಿದು ಅವನ ಎದುರಿಗೆ ಬರುತ್ತಿರಲು ರಾವಣನು ತನ್ನ ಬಾಣಗಳಿಂದ ಬೆಟ್ಟವನ್ನು ಇಬ್ಭಾಗಮಾಡಿದ ಬೆಟ್ಟವನ್ನು ಹುಡಿಗೈದ ದೈತ್ಯರ ಅರಸನು ಗಾಳಿವೇಗದಿಂದ ಬಂದು ಬಿಲ್ಲಿನ ತಿರುವಿಗೆ ಬಾಣವನ್ನು ಹೂಡಿ ಸೂರ್ಯಕುವರನನ್ನು ಹೊಡೆಯಲೆಂದು ಬಿಟ್ಟ. ಆ ಶರವು ವೇಗವಾಗಿ ಬಂದು ಷಣ್ಮುಖನು ಬಿಟ್ಟ ಶಕ್ತ್ಯಾಯುಧವು ಕ್ರೌಂಚಪರ್ವತವನ್ನು ಸೀಳಿದಂತೆ ರವಿತನಯನ ದೇಹವನ್ನು ಭೇದಿಸಿತು, ಸುಗ್ರೀವನು ಕೂಗಿಕೊಳ್ಳುತ್ತ ಎಚ್ಚರದಪ್ಪಿ ಪುಟನೆಗೆದು ನೆಲದ ಮೇಲುರುಳಿದ. ಹೀಗೆ ಉರುಳಿದ ಸುಗ್ರೀವನನ್ನು ಕಂಡೊಡನೆ ದಾನವ ಸೈನ್ಯವು ತನ್ನ ಒಡೆಯನ ಶೌರ್ಯಕ್ಕೆ ಬೆರಗಾಗಿ ಜಯಕಾರ ಮಾಡಿತು.

ಆಗ ಗವಯ ಗವಾಕ್ಷ ನಭ ವೃಷಭ ನಳ ಜ್ಯೋತಿರ್ಮುಖ ಎಂಬ ವಾನರರು ಸೇರಿ ಬೆಟ್ಟಗಳನ್ನು ಹಿಡಿದುಕೊಂಡು ಅತಿಶಯ ಕ್ರೋಧದಿಂದ ಬರಲು, ರಾವಣನು ಕೆಲವು ಬಾಣಗಳಿಂದ ಆ ಬೆಟ್ಟಗಳನ್ನು ಸೀಳಿ ಕೆಡಹುತ್ತ ಆ ಭಟರನ್ನೂ ಗಾಯಗೊಳಿಸಿದ. ದಶಶಿರನ ಉಗ್ರ ಶರಹತಿಯಿಂದ ಅವರೆಲ್ಲರೂ ಎಚ್ಚರದಪ್ಪಿ ನೆಲಕ್ಕುರುಳಲು, ಎದುರಿಗಿದ್ದ ಕಪಿಸೈನ್ಯದ ಮೇಲೆ ಬಾಣಗಳನ್ನು ಬಿಟ್ಟು ಅದರ ಬಹುಪಾಲನ್ನು ನಾಶಗೊಳಿಸಿದ. ಅದನ್ನು ಕಂಡ ಅಮರರು ಇನ್ನೇನು ಕೆಲವೇ ನಿಮಿಷಗಳಲ್ಲಿ ರಾವಣನು ಕಪಿಸೇನೆಯನ್ನೆಲ್ಲ ಧ್ವಂಸಗೊಳಿಸಿಬಿಡುವನೆಂದು ಕಳವಳಗೊಂಡರು.

ಮುಂದುವರೆಯುವುದು

ಗೊರಕೆ ಮತ್ತು ಪಾರ್ಶ್ವವಾಯು: ತಿಳಿಯಬೇಕಾದ ವಿಷಯಗಳು ಜೋರಾದ ಗೊರಕೆ ಮತ್ತು ಕದಡಿದ ನಿದ್ರೆಯನ್ನು ನಿರ್ಲಕ್ಷಿಸಬೇಡಿ

ಡಾ. ವೀರಣ್ಣ ಗಡಾದ
ನರರೋಗ ತಜ್ಞರು,
ಎಸ್‌ಎಸ್ ನಾರಾಯಣ
ಸೂಪರ್ ಸ್ಪೆಷಾಲಿಟಿ
ಹಾಸ್ಪಿಟಲ್ ದಾವಣಗೆರೆ

ಪ್ರಶ್ನೆ: ಅಬ್ಸ್ಟ್ರಕ್ಟಿವ್ ಸ್ಲೀಪ್ ಅಪ್ನಿಯಾ ಒಎಸ್‌ಎ) ಎಂದರೇನು? ನಿದ್ರೆಯ ಸಮಯದಲ್ಲಿ ಗಂಟಲಿನ ಸ್ನಾಯುಗಳು ಅತಿಯಾಗಿ ಸಡಿಲಗೊಂಡು ಶ್ವಾಸನಾಳ ಕಿರಿದಾಗುವ ಅಥವಾ ಮುಚ್ಚಿಹೋಗುವ ನಿದ್ರಾ ಸಮಸ್ಯೆ ಇದು. ಆಗ ಕೆಲವು ಸೆಕೆಂಡುಗಳ ಕಾಲ ಉಸಿರಾಟ ನಿಲ್ಲುತ್ತದೆ, ಕೆಲವೊಮ್ಮೆ ರಾತ್ರಿಯಲ್ಲಿ ನೂರಾರು ಬಾರಿ. ಉಸಿರಾಟ ಪುನಃ ಆರಂಭಿಸಲು ಮೆದುಳು ವ್ಯಕ್ತಿಯನ್ನು ಕ್ಷಣಕಾಲ ಎಚ್ಚರಗೊಳಿಸುತ್ತದೆ, ಆಗ ಸಾಮಾನ್ಯವಾಗಿ ಕೆಮ್ಮು ಅಥವಾ ಏದುಸಿರಿನ ಶಬ್ದ ಬರುತ್ತದೆ. ಹೆಚ್ಚಿನವರಿಗೆ ಈ ಎಚ್ಚರ ನೆನಪಿರುವುದಿಲ್ಲ, ಆದರೆ ಅವರ ನಿದ್ರೆ ಪದೇ ಪದೇ ಮುರಿಯುತ್ತಿರುತ್ತದೆ. ಪ್ರಶ್ನೆ: ಗೊರಕೆ ಮತ್ತು ಸ್ಲೀಪ್ ಅಪ್ನಿಯಾ ಒಂದೇ ಏನು? ಅಲ್ಲ, ಅನೇಕರು ಒಎಸ್‌ಎ ಇಲ್ಲದೆಯೂ ಗೊರಕೆ ಹೊಡೆಯುತ್ತಾರೆ. ಆದರೆ ಜೋರಾದ, ಪ್ರತಿದಿನದ ಗೊರಕೆಯ ಜೊತೆಗೆ ಉಸಿರಾಟದಲ್ಲಿ ವಿರಾಮ ಮತ್ತು ಹಗಲಿನ ಆಯಾಸ ಇದ್ದರೆ ಅದು ಒಎಸ್‌ಎಯ ಸಾಮಾನ್ಯ ಎಚ್ಚರಿಕೆಯ ಸೂಚನೆ. ಇಂಥ ಸಂದರ್ಭದಲ್ಲಿ ವೈದ್ಯರ ಪರೀಕ್ಷೆ ಅಗತ್ಯ.

ಪ್ರಶ್ನೆ: ಒಎಸ್‌ಎಗೂ ಪಾರ್ಶ್ವವಾಯುವಿಗೂ (ಸ್ಟ್ರೋಕ್) ಏನು ಸಂಬಂಧ ಪ್ರತಿ ಬಾರಿ ಉಸಿರು ನಿಂತಾಗ ದೇಹದ ರಕ್ತನಾಳಗಳ ಮೇಲೆ ಒತ್ತಡ ಬೀಳುತ್ತದೆ. ಚಿಕಿತ್ಸೆ ಇಲ್ಲದ ಒಎಸ್‌ಎ ಸಮಯ ಕಳೆದಹಾಗೆ ರಕ್ತದೊತ್ತಡ ಹೆಚ್ಚಿಸಬಹುದು, ರಕ್ತದಲ್ಲಿನ ಆಮ್ಲಜನಕ ಕಡಿಮೆ ಮಾಡಬಹುದು, ರಕ್ತನಾಳಗಳಲ್ಲಿ ಹಾನಿ ಉಂಟುಮಾಡಬಹುದು. ಜೊತೆಗೆ ಹೃದಯ ಬಡಿತ ಕಂಪನ (ಏಟ್ರಿಯಲ್ ಫೈಬ್ರಿಲೇಶನ್)ಎಂಬ ಅನಿಯಮಿತ ಹೃದಯ ಬಡಿತಕ್ಕೂ ಕಾರಣವಾಗಬಹುದು, ಇದರಿಂದ ಮೆದುಳಿಗೆ ಹೋಗುವ ರಕ್ತಗಟ್ಟುಗಳು ರೂಪುಗೊಳ್ಳಬಹುದು. ಇದು ಮಧುಮೇಹ ಮತ್ತು ಬೊಜ್ಜನ್ನು ಸಹ ಹೆಚ್ಚಿಸುತ್ತದೆ, ಇವೆರಡೂ ಪಾರ್ಶ್ವವಾಯುವಿನ ಅಪಾಯಕಾರಿ ಅಂಶಗಳು. ಪಾರ್ಶ್ವವಾಯು ಬಂದವರಲ್ಲಿ ಒಎಸ್‌ಎ ಬಹಳ ಸಾಮಾನ್ಯ ಎಂದು ಅಧ್ಯಯನಗಳು ತೋರಿಸಿವೆ, ಮತ್ತು ಚಿಕಿತ್ಸೆ ಇಲ್ಲದಿದ್ದರೆ ಚೇತರಿಕೆ ನಿಧಾನವಾಗಬಹುದು. ಪ್ರಶ್ನೆ: ಯಾರಿಗೆ ಒಎಸ್‌ಎ ಅಪಾಯ ಹೆಚ್ಚು ಅಧಿಕ ತೂಕ ಅಥವಾ ದಪ್ಪ ಕುತ್ತಿಗೆ ಇರುವವರು, ಅಧಿಕ ರಕ್ತದೊತ್ತಡ , ಮಧುಮೇಹ ಅಥವಾ ಹೃದ್ರೋಗ ಇರುವವರು, ಮಧ್ಯವಯಸ್ಕರು ಮತ್ತು ವಯಸ್ಸಾದವರು, ಧೂಮಪಾನಿಗಳು, ಮಲಗುವ ಸಮಯದ ಹತ್ತಿರ ಮದ್ಯಪಾನ ಮಾಡುವವರು, ಕುಟುಂಬದಲ್ಲಿ ಈ ತೊಂದರೆ ಇರುವವರು ಅಥವಾ ಸಹಜವಾಗಿ ಕಿರಿದಾದ ಶ್ವಾಸನಾಳ ಹೊಂದಿರುವವರು. ಮಹಿಳೆಯರಲ್ಲಿ ಋತುಬಂಧದ ನಂತರ ಅಪಾಯ ಹೆಚ್ಚುತ್ತದೆ. ಮಕ್ಕಳಲ್ಲಿ ಮತ್ತು ಸಾಮಾನ್ಯ ತೂಕದ ಜನರಲ್ಲಿಯೂ ಒಎಸ್‌ಎ ಬರಬಹುದು. ಕೆಲವು ಬಾರಿ ಅನುವಂಶೀಯವಾಗಿ ಕಂಡುಬರುವುದುಂಟು. ಪ್ರಶ್ನೆ: ಒಎಸ್‌ಎಯ ಎಚ್ಚರಿಕೆಯ ಲಕ್ಷಣಗಳು ಯಾವುವುಜೋರಾದ, ನಿರಂತರ ಗೊರಕೆ ಉಸಿರಾಟದಲ್ಲಿ ವಿರಾಮ, ಕೆಮ್ಮುವುದು ಅಥವಾ ಏದುಸಿರು ಬಿಡುವುದು (ಪಕ್ಕದಲ್ಲಿ ಮಲಗಿದವರು ಗಮನಿಸುತ್ತಾರೆ) ಬೆಳಿಗ್ಗೆ ಎದ್ದಾಗ ಬಾಯಿ ಒಣಗುವುದು ಅಥವಾ ತಲೆನೋವು ರಾತ್ರಿ ಪೂರ್ತಿ ಮಲಗಿದರೂ ಹಗಲಿನಲ್ಲಿ ವಿಪರೀತ ನಿದ್ರೆ ಬರುವುದು.

ಏಕಾಗ್ರತೆಯ ಕೊರತೆ, ಸಿಡುಕು ಅಥವಾ ಮನಸ್ಥಿತಿ ಕುಗ್ಗುವುದು ರಾತ್ರಿ ಪದೇ ಪದೇ ಮೂತ್ರಕ್ಕೆ ಏಳುವುದು ಪ್ರಶ್ನೆ: ಒಎಸ್‌ಎಯನ್ನು ಹೇಗೆ ಪತ್ತೆ ಮಾಡಲಾಗುತ್ತದೆ ನಿದ್ರಾ ಅಧ್ಯಯನ (ಸ್ಲೀಪ್ ಸ್ಟಡಿ) ಮೂಲಕ. ಇದರಲ್ಲಿ ನಿದ್ರೆಯ ಸಮಯದ ಉಸಿರಾಟ, ರಕ್ತದ ಆಮ್ಲಜನಕ ಮಟ್ಟ ಮತ್ತು ಹೃದಯ ಬಡಿತವನ್ನು ದಾಖಲಿಸಲಾಗುತ್ತದೆ. ಇದನ್ನು ನಿದ್ರಾ ಪ್ರಯೋಗಾಲಯದಲ್ಲಿ ಅಥವಾ ಕೆಲವೊಮ್ಮೆ ಮನೆಯಲ್ಲಿಯೇ ಮಾಡಬಹುದು. ನಿಮಗೆ ಯಾವ ಪರೀಕ್ಷೆ ಸೂಕ್ತ ಎಂದು ವೈದ್ಯರು ಸಲಹೆ ನೀಡುತ್ತಾರೆ.

ಪ್ರಶ್ನೆ: ಒಎಸ್‌ಎಗೆ ಚಿಕಿತ್ಸೆ ಇದೆಯೇ?

ಹೌದು. ಅತ್ಯಂತ ಹೆಚ್ಚು ಬಳಕೆಯಲ್ಲಿರುವ ಚಿಕಿತ್ಸೆ ಸಿಪ್ಯಾಪ್ , ಇದರಲ್ಲಿ ಮುಖವಾಡದ ಮೂಲಕ ನಿದ್ರೆಯ ಸಮಯದಲ್ಲಿ ಶ್ವಾಸನಾಳವನ್ನು ತೆರೆದಿಡಲಾಗುತ್ತದೆ. ತೂಕ ಇಳಿಸುವುದು, ನಿಯಮಿತ ವ್ಯಾಯಾಮ, ಒಂದು ಪಕ್ಕಕ್ಕೆ ಹೊರಳಿ ಮಲಗುವುದು, ಮಲಗುವ ಮುನ್ನ ಮದ್ಯ ಮತ್ತು ನಿದ್ರೆ ಮಾತ್ರೆಗಳನ್ನು ತಪ್ಪಿಸುವುದು ಇತರ ಕ್ರಮಗಳು. ಆಯ್ದ ಸಂದರ್ಭಗಳಲ್ಲಿ ತಜ್ಞರ ಸಲಹೆಯಂತೆ ಬಾಯಿಯ ಸಾಧನಗಳು ಅಥವಾ ಶಸ್ತ್ರಚಿಕಿತ್ಸೆ ಸಹಾಯಕವಾಗಬಹುದು. ಚಿಕಿತ್ಸೆಯಿಂದ ನಿದ್ರೆ, ಚೈತನ್ಯ ಮತ್ತು ರಕ್ತದೊತ್ತಡ ನಿಯಂತ್ರಣ ಸುಧಾರಿಸುತ್ತದೆ, ಹಾಗೂ ಹೃದಯ ಮತ್ತು ಮೆದುಳಿನ ಆರೋಗ್ಯ ಕಾಪಾಡುವಲ್ಲಿ ಇದು ಮುಖ್ಯ ಪಾತ್ರವಹಿಸುತ್ತದೆ.

ಪ್ರಶ್ನೆ: ಪಾರ್ಶ್ವವಾಯುವಿನ ಲಕ್ಷಣಗಳು ಯಾವುವು?: ಸಮತೋಲನ ಇದ್ದಕ್ಕಿದ್ದಂತೆ ಸಮತೋಲನ ಅಥವಾ ಸಮನ್ವಯ ತಪ್ಪುವುದು ಕಣ್ಣು): ಇದ್ದಕ್ಕಿದ್ದಂತೆ ದೃಷ್ಟಿ ಮಂಜಾಗುವುದು ಅಥವಾ ಕಳೆದುಹೋಗುವುದು ಈ ಮುಖ ನಗುವಾಗ ಮುಖದ ಒಂದು ಬದಿ ಜೋತುಬೀಳುವುದು ಕೈ ಒಂದು ಕೈ ಅಥವಾ ಕಾಲಿನಲ್ಲಿ ಬಲಹೀನತೆ ಅಥವಾ ಮರಗಟ್ಟುವಿಕೆ ಮಾತು ಮಾತು ತೊದಲುವುದು ಅಥವಾ ಗೊಂದಲದ ಮಾತು ಸಮಯ ಲಕ್ಷಣಗಳು ಯಾವಾಗ ಶುರುವಾದವು ಎಂದು ಗಮನಿಸಿ, ತಕ್ಷಣ ಆಸ್ಪತ್ರೆಗೆ ಕರೆದೊಯ್ಯಿರಿ ಪ್ರಶ್ನೆ: ಯಾರಿಗಾದರೂ ಪಾರ್ಶ್ವವಾಯುವಿನ ಲಕ್ಷಣಗಳು ಕಂಡರೆ ಏನು ಮಾಡಬೇಕು? ಇದನ್ನು ತುರ್ತು ಪರಿಸ್ಥಿತಿ ಎಂದು ಪರಿಗಣಿಸಿ. ತುರ್ತು ಸೇವೆಗೆ ಕರೆ ಮಾಡಿ ಅಥವಾ ನಿಮ್ಮದೇ ಆದ ವಾಹನದಲ್ಲಿ 3 ಘಂಟೆ ಒಳಗೆ ಅಧಿಕೃತ ಪಾರ್ಶ್ವವಾಯು ಕೇಂದ್ರಗಳಿಗೆ ಕರೆದೊಯ್ಯಿರಿ. ಆಹಾರ, ನೀರು ಅಥವಾ ಮನೆಮದ್ದುಗಳನ್ನು ಕೊಡಬೇಡಿ. ಪ್ರಶ್ನೆ : ನಾರಾಯಣ ಹೆಲ್ತ್ ನಲ್ಲಿ ಗೊರಕೆ / ಔಖಂ ಪಾರ್ಶ್ವವಾಯು ಗೆ ಚಿಕಿತ್ಸೆ ಇದಿಯೇ ? ಹೌದು, ನಾರಾಯಣ ಹೆಲ್ತ್ ನಲ್ಲಿ ಪಾರ್ಶ್ವಯು ತುರ್ತು ಚಿಕಿತ್ಸೆಗೆ ನುರಿತ ವೈದ್ಯರ ತಂಡ ಹಾಗು ಗೊರಕೆ / ಸಮಸ್ಯೆ ಚಿಕಿತ್ಸೆ ಲಭ್ಯವಿರುತ್ತದೆ. ಪ್ರಶ್ನೆ: ಅಪಾಯವನ್ನು ಕಡಿಮೆ ಮಾಡಲು ನಾನು ಏನು ಮಾಡಬಹುದು? ಜೋರಾದ ಗೊರಕೆಯ ಜೊತೆ ಹಗಲಿನ ನಿದ್ರೆ ಇದ್ದರೆ ವೈದ್ಯರನ್ನು ಭೇಟಿಯಾಗಿ ರಕ್ತದೊತ್ತಡ, ರಕ್ತದ ಸಕ್ಕರೆ ಮತ್ತು ಕೊಲೆಸ್ಟ್ರಾಲ್ ಅನ್ನು ನಿಯಮಿತವಾಗಿ ಪರೀಕ್ಷಿಸಿಕೊಳ್ಳಿಚುರುಕಾಗಿರಿ, ಸಮತೋಲಿತ ಆಹಾರ ಸೇವಿಸಿ, ಆರೋಗ್ಯಕರ ತೂಕ ಕಾಪಾಡಿಕೊಳ್ಳಿ ತಂಬಾಕು ತ್ಯಜಿಸಿ, ಮದ್ಯಪಾನ ಮಿತಿಗೊಳಿಸಿ ಲಕ್ಷಣಗಳನ್ನು ನಿಮ್ಮ ಕುಟುಂಬದವರೊಂದಿಗೆ ಹಂಚಿಕೊಳ್ಳಿ

ಶ್ರೀಪಾದ ವಡೇರ ಸ್ವಾಮೀಜಿಯವರ ಅಮೃತಹಸ್ತದಿಂದ 'ಸನಾತನ ಪಂಚಾಂಗ 2027' ಕನ್ನಡ ಆ್ಯಪ್ ಲೋಕಾರ್ಪಣೆ !

ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದಲ್ಲಿ ಮಠಾಧೀಶರಾದ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರ ಪವಿತ್ರ ಹಸ್ತದಿಂದ 'ಸನಾತನ ಪಂಚಾಂಗ 2027' ಈ ಕನ್ನಡ ಆ್ಯಪ್ ಅನ್ನು ಭಕ್ತಿಪೂರ್ವಕ ವಾತಾವರಣದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಈ ಪವಿತ್ರ ಸಂದರ್ಭದಲ್ಲಿ ಸ್ವಾಮೀಜಿಯವರು ಪಂಚಾಂಗ ಆ್ಯಪ್‌ಗೆ ತಮ್ಮ ಆಶೀರ್ವಾದವನ್ನು ನೀಡಿದರು. ಈ ಪಂಚಾಂಗ ಆ್ಯಪ್ ಕೇವಲ ಕನ್ನಡ ಮಾತ್ರವಲ್ಲದೆ, ಒಟ್ಟು ಏಳು ಭಾಷೆಗಳಲ್ಲಿ ಲಭ್ಯವಿರುವ ಬಗ್ಗೆ ಸ್ವಾಮೀಜಿಯವರಿಗೆ ಮಾಹಿತಿ ನೀಡಿದಾಗ, ಅವರು ಚೆನ್ನಾಗಿದೆ ಎಂದು ಉದ್ಗರಿಸಿ ಈ ಕಾರ್ಯವನ್ನು ಶ್ಲಾಘಿಸಿದರು. ಹಾಗೆಯೇ ಈ ಆ್ಯಪ್ ಗೆ ಇದುವರೆಗೆ 40 ಲಕ್ಷಕ್ಕೂ ಅಧಿಕ ಡೌನ್‌ಲೋಡ್‌ಗಳಾಗಿವೆ ಎಂದು ತಿಳಿದು ಅವರು ವಿಶೇಷ ಸಂತಸ ವ್ಯಕ್ತಪಡಿಸಿ ಈ ಯಶಸ್ಸನ್ನು ಪ್ರಶಂಸಿಸಿದರು.

ಸ್ವಾಮೀಜಿಯವರ ಹಸ್ತದಿಂದ ಕನ್ನಡ ಆ್ಯಪ್ ಲೋಕಾರ್ಪಣೆಗೊಂಡಿದ್ದಕ್ಕಾಗಿ 'ಸನಾತನ ಪಂಚಾಂಗ' ಸಮೂಹದ ಪರವಾಗಿ ಅವರ ಚರಣಗಳಲ್ಲಿ ಕೃತಜ್ಞತೆಯನ್ನು ಅರ್ಪಿಸಲಾಯಿತು.

ಭ್ರಷ್ಟಾಚಾರ ನಿರ್ಮೂಲನೆ ಎಲ್ಲರ ಹೊಣೆ: ಲೋಕಾಯುಕ್ತ ಬಿ.ವೀರಪ್ಪ

ಸಮಾಜದ ಪ್ರತಿಯೊಬ್ಬರೂ ಭ್ರಷ್ಟಾಚಾರ ನಿರ್ಮೂಲನೆಗೆ ಸಂಕಲ್ಪ ಮಾಡಬೇಕು ಎಂದು ಕರ್ನಾಟಕ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಕರೆ ನೀಡಿದ್ದಾರೆ.

• **ಉದಯವಾಹಿನಿ, ಬೆಳಗಾವಿ:**

ಸಮಾಜದಲ್ಲಿ ಭ್ರಷ್ಟಾಚಾರ ಎಂಬ ಭೂತವನ್ನು ನಾವೆಲ್ಲರೂ ಕೂಡಿ ಬೆಳೆಸಿಕೊಂಡು ಬಂದಿದ್ದೇವೆ. ಭ್ರಷ್ಟಾಚಾರವನ್ನು ಬರೀ ಲೋಕಾಯುಕ್ತ ಸಂಸ್ಥೆಯಿಂದ ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲ. ಸಮಾಜದ ಪ್ರತಿಯೊಬ್ಬರೂ ಭ್ರಷ್ಟಾಚಾರ ನಿರ್ಮೂಲನೆಗೆ ಸಂಕಲ್ಪ ಮಾಡಬೇಕು ಎಂದು ಕರ್ನಾಟಕ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಕರೆ ನೀಡಿದ್ದಾರೆ.

1 : ಸುಳ್ಳು ಕೇಸ್‌ಗಳಿಂದ ನ್ಯಾಯ ವಿಳಂಬ
2 : ದೂರುದಾರರಿಗೆ ಜೈಲು ಶಿಕ್ಷೆ- ಎಚ್ಚರಿಕೆ
3 : ಸರ್ಕಾರ ಇದೀಗ ಆದೇಶ ಹೊರಡಿಸಿದ್ದು

ಇಲ್ಲಿನ ಸುವರ್ಣ ವಿಧಾನಸೌಧದ ಸೆಂಟ್ರಲ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಬೆಳಗಾವಿ ಮತ್ತು ಬೈಲಹೊಂಗಲ ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ್ದಾರೆ. ಶಾಸಕಾಂಗ, ಕಾರ್ಯಾಂಗಗಳು ವಿಫಲವಾಗುತ್ತಿರುವ ಇಂತಹ

ಉದಯವಾಹಿನಿ ಚಿತ್ರ

ಸಂದಿಗ್ಧ ಸ್ಥಿತಿಯಲ್ಲಿ ನ್ಯಾಯಾಂಗ ಮತ್ತು ನಾಲ್ಕನೇ ಅಂಗ ಎಂದು ಕರೆಯಲಾಗುವ ಪತ್ರಿಕಾರಂಗ ಕೂಡ ಇತ್ತೀಚೆಗೆ ಅಶಕ್ತವಾಗುತ್ತಿವೆ ಎಂದು ಅನಿಸತೊಡಗಿದೆ. ಸಮಾಜದಲ್ಲಿ ಎಲ್ಲೇ ಅನ್ಯಾಯ ಆದಾಗ ನ್ಯಾಯಾಂಗ ಮತ್ತು ಪತ್ರಿಕಾರಂಗಗಳು ಧ್ವನಿ ಎತ್ತುವ ಮೂಲಕ ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿವೆ ಎಂದರು. ವಿದ್ಯಾವಂತ ಮೋಸಗಾರರು ಹೆಚ್ಚಾಗುತ್ತಿರುವುದಕ್ಕೆ ಕಾರಣ ಕೂಡ ಸಮಾಜ. ಚುನಾವಣೆ ಸಂದರ್ಭದಲ್ಲಿ ಹಣ ಪಡೆದು ಮತದಾನ ಮಾಡುತ್ತಿರುವುದರ ಫಲವಾಗಿ ಸಮಾಜ ಅಧೋಗತಿಗೆ ಹೊರಟಿದೆ. ಸಮಾಜ ಬದಲಾದರೆ ಮಾತ್ರ ಎಲ್ಲವೂ ಸರಿ ಹೋಗುತ್ತದೆ.

> ಕರ್ನಾಟಕ ಲೋಕಾಯುಕ್ತ ತನ್ನ ನಿಷ್ಪಕ್ಷಪಾತ ತನಿಖೆ ಹಾಗೂ ಕಾರ್ಯಾಚರಣೆಯಿಂದ ದೇಶದಲ್ಲಿ ತನ್ನದೇ ಛಾಪು ಮೂಡಿಸಿದೆ. ಆದಾಗ್ಯೂ ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸ ಸಾಧ್ಯವಾಗುತ್ತಿಲ್ಲ. ಭ್ರಷ್ಟಾಚಾರಿಗಳನ್ನು ಸಮಾಜ ಮತ್ತು ಕುಟುಂಬದವರು ಬಹಿಷ್ಕರಿಸಬೇಕು. ಭ್ರಷ್ಟಾಚಾರ ನಿರ್ಮೂಲನೆಗೆ ಇದೇ ಮದ್ದು ಎಂದು ಹೇಳಿದ್ದಾರೆ.
> - ಬಿ.ವೀರಪ್ಪ

ಸ್ವಾರ್ಥ ಬಿಟ್ಟು ಭ್ರಷ್ಟಾಚಾರ ಭೂತ ತೊಲಗಿಸಿದರೆ ಭಾರತ ವಿಶ್ವದ ಬಲಿಷ್ಠ ರಾಷ್ಟ್ರವಾಗಲಿದೆ. ಭ್ರಷ್ಟಾಚಾರದಲ್ಲಿ ಈಗ ಸ್ಪರ್ಧೆ ಏರ್ಪಟ್ಟಿದ್ದು, ಪ್ರಕೃತಿಯೇ ಎಚ್ಚರಿಕೆ ಗಂಟೆ ಬಾರಿಸುತ್ತಿದೆ. ಇದನ್ನು ಅರಿತು ನಾವು ಬದಲಾಗಬೇಕಿದೆ ಎಂದರು.

ಲೋಕಾಯುಕ್ತ ಸಂಸ್ಥೆಯ ನಿರಂತರ ಪ್ರಯತ್ನದ ಫಲವಾಗಿ ಎಲ್ಲಾ ಮಾಜಿ ಸೈನಿಕರಿಗೆ ಹಾಗೂ ವಾರಸುದಾರರಿಗೆ ಆಯಾ ಜಿಲ್ಲೆ/ ತಾಲ್ಲೂಕಿನಲ್ಲಿ ನಿವೇಶನ ನೀಡಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಸತತ ಒಂದೂವರೆ ವರ್ಷದ ಪ್ರಯತ್ನದ ಫಲವಾಗಿ ಸರ್ಕಾರ ಇದೀಗ ಆದೇಶ ಹೊರಡಿಸಿದ್ದು, ನಿವೇಶನ ಗುರುತಿಸಿ ವಿತರಿಸುವ ಕೆಲಸ ಯುದ್ಧೋಪಾದಿಯಲ್ಲಿ ಆಗಬೇಕಿದೆ ಎಂದು

> ಇನ್ನೂ ಎಪಿಎಂಸಿ ಆವರಣದಲ್ಲಿ ಕುಡಿಯುವ ನೀರಿಗಾಗಿ ಇಟ್ಟಿದ್ದ ಟ್ಯಾಂಕ್ ಒಳಗೆ ತರಕಾರಿ ಮೂಟೆಗಳನ್ನು ತುಂಬಿಸಿರುವುದು, ಎಲ್ಲೆಂದರಲ್ಲಿ ಕಸ, ಕಾರ್ಮಿಕರ, ರೈತರ ವಿಶ್ರಾಂತ ಕೊಠಡಿಗೆ ಏಕೆ ಬೀಗ ಹಾಕಲಾಗಿದೆ ಎಂದು ಪ್ರಶ್ನಿಸಿದರು.

ಅಭಿಪ್ರಾಯ ಪಟ್ಟರು.ಇತ್ತೀಚಿನ ದಿನಗಳಲ್ಲಿ ಸುಳ್ಳು ಪ್ರಕರಣ, ಮೂಕರ್ಜಿಗಳಿಂದ ನಿಜವಾದ ಪ್ರಕರಣಗಳ ವಿಚಾರಣೆ ಮಾಡುವುದು ನ್ಯಾಯ ಒದಗಿಸುವುದು ವಿಳಂಬವಾಗುತ್ತಿದೆ ಎಂದು ಬೇಸರ ಹೊರ ಹಾಕಿದ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು, ಸಾಮಾಜಿಕ ಕಾರ್ಯಕರ್ತರು, ಮಾಹಿತಿ ಹಕ್ಕು ಕಾರ್ಯಕರ್ತರು ಎಂದುಕೊಂಡು ಅಧಿಕಾರಿಗಳ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸುವ ದೂರುದಾರರಿಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಉಪ ಲೋಕಾಯುಕ್ತರು ಎಚ್ಚರಿಕೆ ನೀಡಿದರು. ಇದೇ ರೀತಿ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ ತೆಗೆದುಕೊಳ್ಳುವ ಅವಕಾಶಗಳು ಲೋಕಾಯುಕ್ತರಿಗಿದೆ. ಆದ್ದರಿಂದ ಎಚ್ಚರಿಕೆಯಿಂದ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಸೂಚಿಸಿದ್ದಾರೆ.

ವಸತಿ ಶಾಲೆಗಳ ಪ್ರಾಂಶುಪಾಲರು, ಮೇಲ್ವಿಚಾರಕರ ವರ್ಗಾವಣೆಗೆ ಆಗ್ರಹ

• **ಉದಯವಾಹಿನಿ, ಬೀದರ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ವಿವಿಧ ಇಲಾಖೆಗಳ ಮೂಲಕ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಮೇಲ್ವಿಚಾರಕರನ್ನು ಅಂತರಜಿಲ್ಲಾ ವರ್ಗಾವಣೆ ಮಾಡಬೇಕು ಮತ್ತು ಶಾಲೆಗಳಿಗೆ ಬಿಡುಗಡೆಯಾದ ಅನುದಾನದ ಬಳಕೆ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ವಿವಿಧ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರು, ಸೂಕ್ತ ಭದ್ರತೆ ಹಾಗೂ ಅಗತ್ಯ ಮೂಲಸೌಕರ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ ಎಂಬ ದೂರುಗಳಿವೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ವಸತಿ ಶಾಲೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಸರ್ಕಾರ ಪ್ರತಿವರ್ಷ ಲಕ್ಷಾಂತರ ರೂಪಾಯಿ ಅನುದಾನ ಬಿಡುಗಡೆ

ಉದಯವಾಹಿನಿ ಚಿತ್ರ

ಮಾಡುತ್ತಿದ್ದರೂ, ಕೆಲವು ಶಾಲೆಗಳಲ್ಲಿ ಅನುದಾನದ ಸಮರ್ಪಕ ಬಳಕೆಯಾಗುತ್ತಿಲ್ಲ ಎಂಬ ಆರೋಪಗಳಿವೆ. ಈ ಹಿನ್ನಲೆಯಲ್ಲಿ ಅಧಿಕಾರಿಗಳು ಶಾಲೆಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ವಿದ್ಯಾರ್ಥಿಗಳೊಂದಿಗೆ ನೇರವಾಗಿ ಮಾತನಾಡಿ ಅವರ ಸಮಸ್ಯೆಗಳನ್ನು ಆಲಿಸಬೇಕು ಎಂದು ಒತ್ತಾಯಿಸಿದ್ದಾರೆ. ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಆರ್ಥಿಕವಾಗಿ ದುರ್ಬಲ ಕುಟುಂಬಗಳ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರ ಶೈಕ್ಷಣಿಕ ಹಿತದೃಷ್ಟಿಯಿಂದ ಶಾಲೆಗಳಲ್ಲಿನ ಅವ್ಯವಸ್ಥೆಗಳನ್ನು ಸರಿಪಡಿಸಿ, ಗುಣಮಟ್ಟದ ಶಿಕ್ಷಣದ ಜೊತೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಹೋಮಿ ಜಹಾಂಗೀರ್ ಬಾಬಾರವರ ಕೊಡುಗೆ ಅಪಾರ

• **ಉದಯವಾಹಿನಿ, ಕಲಬುರಗಿ :**

ಹೋಮಿ ಜಹಂಗೀರ್ ಬಾಬಾರವರು ''ಭಾರತೀಯ ಪರಮಾಣು ಕಾರ್ಯಕ್ರಮದ ಪಿತಾಮಹ''. ಅವರು ಪರಮಾಣು ಭೌತಶಾಸ್ತ್ರಜ್ಞರು. ಭಾರತೀಯ ಪರಮಾಣು ಶಕ್ತಿ ಕಾರ್ಯಕ್ರಮದ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. ಟಿಐಎಫ್ ಆರ್, ಎಇಇಟಿಯ ಸಂಸ್ಥಾಪಕ ನಿರ್ದೇಶಕರು. ಭಾರತೀಯ ಪರಮಾಣು ಶಕ್ತಿ ಕಾರ್ಯಕ್ರಮದ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ರಾಷ್ಟ್ರದ ಅಭಿವೃದ್ಧಿಗೆ ಹೋಮಿ ಜಹಾಂಗೀರ್ ಬಾಬಾರವರ ಕೊಡುಗೆ ಅಪಾರವಾಗಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಚ್ .ಬಿ.ಪಾಟೀಲ್ ಹೇಳಿದರು. ನಗರದ ಆಳಂದ ರಸ್ತೆಯ ಖಾದ್ರಿ ಚೌಕ್‌ನ ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ '' ಹೋಮಿ ಜಹಾಂಗೀರ್ ಬಾಬಾರವರ ಜನ್ಮದಿನಾಚರಣೆ ''ಯಲ್ಲಿ ಅವರು ಮಾತನಾಡುತ್ತಿದ್ದರು. ಬಾಬಾರವರು ಪರಮಾಣು ಶಕ್ತಿಯ ಶಾಂತಿಯುತ ಬಳಕೆಗಳನ್ನು ಪ್ರೋತ್ಸಾಹಿಸಿದರು ಮತ್ತು ವಿಶ್ವಸಂಸ್ಥೆಯ ಮೊದಲ ಪರಮಾಣು ಶಕ್ತಿ ಸಮ್ಮೇಳನವನ್ನು ಆಯೋಜಿಸಿದರು. ಭಾರತದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿಯೂ ಕೂಡಾ ಮಹತ್ವದ ಪಾತ್ರ ವಹಿಸಿದವರು.

ಉದಯವಾಹಿನಿ ಚಿತ್ರ

ಇಂತಹ ಮಹನೀಯರ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಾಗಿದೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಕರಾವಿಪ ಗ್ರಾಮೀಣ ಘಟಕದ ಮಾಜಿ ಸಂಚಾಲಕ ಶಿವಯೋಗೆಪ್ಪಾ ಎಸ್. ಬಿರಾದಾರ, ಸಂಸ್ಥೆಯ ಶಿಕ್ಷಕಿಯರಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್, ಸ್ನೇಹಾ ಚೌಹಾಣ, ರುಕ್ಸಾನಾ ಪಟೇಲ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸೂಕ್ತ ದರ ಘೋಷಿಸದಿದ್ದರೆ ಶನಿವಾರ ಜಮಖಂಡಿ ಬಂದ್‌ಗೆ ನಿರ್ಧಾರ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಜಮಖಂಡಿ:**

ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ಜಮಖಂಡಿಯಲ್ಲಿ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಮೂರನೇ ದಿನ ಪೂರ್ಣಗೊಂಡಿದ್ದು, ಗುರುವಾರ ನಾಲ್ಕನೇ ದಿನಕ್ಕೆ ಕಾಲಿಡಲಿದೆ. ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿರುವ ತಾಲ್ಲೂಕಿನ ವಿವಿಧ ರೈತ ಸಂಘಟನೆಗಳು, ಗುರುವಾರ ಬೆಳಗ್ಗೆ 11 ಗಂಟೆಗೆ ತಾಲ್ಲೂಕು ಆಡಳಿತ ಸೌಧದ ಬಳಿ ನಡೆಯಲಿರುವ ಬೃಹತ್ ಪ್ರತಿಭಟನೆ ಹಾಗೂ ಬೈಕ್ ರ‍್ಯಾಲಿಯಲ್ಲಿ ರೈತರು ಮತ್ತು ರೈತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರೈತ ಮುಖಂಡ ರಾಜು ನದಾಫ ಮನವಿ ಮಾಡಿದರು. ನಗರದ ತಾಲ್ಲೂಕು ಆಡಳಿತ ಸೌಧದ ಬಳಿ ಮಾತನಾಡಿದ ಅವರು, ರೈತರ ಬೇಡಿಕೆಗಳತ್ತ ಸರ್ಕಾರದ ಗಮನ ಸೆಳೆಯಲು ಬೃಹತ್ ಬೈಕ್ ರ್ಯಾಲಿ ಮೂಲಕ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಹೋರಾಟಕ್ಕೆ ಹೆಚ್ಚಿನ ಜನಬೆಂಬಲ ಕ್ರೋಢೀಕರಿಸುವ ಉದ್ದೇಶದಿಂದ ರೈತ ಸಂಘಟನೆಗಳ ನೇತೃತ್ವದಲ್ಲಿ ಜಮಖಂಡಿ ನಗರದಾದ್ಯಂತ ಬೈಕ್ ರ್ಯಾಲಿ ನಡೆಸಲಾಗುವುದು. ಈ ಸಂದರ್ಭದಲ್ಲಿ ನಗರದ ವಿವಿಧ ಸಂಘ-ಸಂಸ್ಥೆಗಳು, ಕನ್ನಡಪರ ಸಂಘಟನೆಗಳು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರನ್ನು ಭೇಟಿಯಾಗಿ ರೈತರ ಹೋರಾಟಕ್ಕೆ ಬೆಂಬಲ ನೀಡುವಂತೆ ಮನವಿ ಮಾಡಲಾಗುವುದು ಎಂದು ತಿಳಿಸಿದರು. ಸರ್ಕಾರ ಕಬ್ಬಿಗೆ ಸೂಕ್ತ ದರ ಘೋಷಿಸಿ ರೈತರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ, ಶನಿವಾರ ಜಮಖಂಡಿ ನಗರ ಬಂದ್‌ಗೆ ಕರೆ ನೀಡಲು ರೈತ ಸಂಘಟನೆಗಳು ನಿರ್ಧರಿಸಿವೆ. ಈ ನಿಟ್ಟಿನಲ್ಲಿ ನಗರದ ವ್ಯಾಪಾರಸ್ಥರು, ಕನ್ನಡಪರ ಸಂಘಟನೆಗಳು, ವಿವಿಧ ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬಂದ್ ನಡೆಸಲು ತೀರ್ಮಾನಿಸಲಾಗಿದೆ ಎಂದು ರಾಜು ನದಾಫ ಹೇಳಿದರು.

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬಿಜೆಪಿ ದೇಶಾದ್ಯಂತ ಹೋರಾಟ

• **ಉದಯವಾಹಿನಿ, ವಿಜಯಪುರ, :**

ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವ ಶಕ್ತಿಗಳ ವಿರುದ್ಧ ಬಿಜೆಪಿ ದೇಶಾದ್ಯಂತ ಸಂಘಟಿತ ಹೋರಾಟ ನಡೆಸಲಿದೆ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಪೊರ. ಎಂ. ನಾಗರಾಜ್ ಹೇಳಿದರು.

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತವು ಪ್ರಜಾಪ್ರಭುತ್ವದ ಮೇಲೆ ಆಳವಾದ ನಂಬಿಕೆ ಹೊಂದಿರುವ ದೇಶ. ಸನಾತನ ಧರ್ಮ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಸ್ಥಿರಗೊಳಿಸುವ ಯಾವುದೇ ಪ್ರಯತ್ನ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದರು. ಅಧಿಕಾರ ಪಡೆಯಲು ಬೀದಿಗಳಲ್ಲಿ ಹೋರಾಟ ನಡೆಸುವುದಕ್ಕಿಂತ

ಉದಯವಾಹಿನಿ ಚಿತ್ರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಎದುರಿಸಿ, ಜನರ ವಿಶ್ವಾಸ ಗಳಿಸಿ ಬಹುಮತದ ಆಧಾರದ ಮೇಲೆ ಅಧಿಕಾರಕ್ಕೆ ಬರಬೇಕು. ಬೀದಿಗಳಲ್ಲಿ ಅರಾಜಕತೆ ಸೃಷ್ಟಿಸುವ ಮೂಲಕ ಅಧಿಕಾರ ಬದಲಾವಣೆ ತರಲು ಸಾಧ್ಯವಿಲ್ಲ ಎಂದು ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದರು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಷ್ಟು ಸುಲಭವಾಗಿ ಅಲುಗಾಡಿಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳನ್ನು

> ರಾಹುಲ್ ಗಾಂಧಿ ಅವರ ಹೇಳಿಕೆಗಳಿಗೆ ಸಂಬಂಧಿಸಿದ ವಾಸ್ತವಾಂಶಗಳನ್ನು ಜನರ ಮುಂದಿಡುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು ಎಂದರು.

ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಕರೆಯ ಮೇರೆಗೆ ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಅರಾಜಕತೆಯ ವಿರುದ್ಧ ಬಿಜೆಪಿ ಕಾರ್ಯಕರ್ತರು ಸಂಘಟಿತರಾಗಿ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು. ಅಕ್ಟೋಬರ್ 23ರಿಂದ ನವೆಂಬರ್ 5ರವರೆಗೆ ದೇಶಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗಿದೆ. ವಿಭಾಗೀಯ ಕೇಂದ್ರಗಳಲ್ಲಿ ಸಾವಿರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಪ್ರಜಾಪ್ರಭುತ್ವದ ರಕ್ಷಣೆಯ ಸಂದೇಶವನ್ನು ಜನರಿಗೆ ತಲುಪಿಸಬೇಕು.

ಆತ್ಮವಿಶ್ವಾಸ, ಕೌಶಲ್ಯ ಬೆಳೆಸಿಕೊಂಡು ಪರಿಪೂರ್ಣ ಪತ್ರಕರ್ತರಾಗಿ

• **ಉದಯವಾಹಿನಿ, ವಿಜಯಪುರ, :**

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಆತ್ಮವಿಶ್ವಾಸ, ಸೃಜನಶೀಲತೆ ಹಾಗೂ ತಂತ್ರಜ್ಞಾನದ ಅರಿವು ಅತ್ಯಗತ್ಯ. ವಿದ್ಯಾರ್ಥಿನಿಯರು ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಂಡು ಪರಿಪೂರ್ಣ ಪತ್ರಕರ್ತರಾಗಬೇಕು ಎಂದು ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀಕೃಷ್ಣ ಕುಲಕರ್ಣಿ ಹೇಳಿದರು.ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ್ದ ಫ್ರೆಶರ್ಸ್ ಡೇ ಹಾಗೂ ಮಹಿಳಾ ಮೀಡಿಯಾ ಕ್ಲಬ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಪತ್ರಕರ್ತರಲ್ಲಿ ಆತ್ಮವಿಶ್ವಾಸ ಹಾಗೂ ವೃತ್ತಿಬದ್ಧತೆ ಇರಬೇಕು. ಕಾರ್ಯನಿರ್ವಹಿಸುವ ಸಂಸ್ಥೆಯಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕೆಲಸ ಮಾಡುವ ಜತೆಗೆ, ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವ ಸರಳ ಭಾಷೆಯಲ್ಲಿ ಸುದ್ದಿಯನ್ನು ನೀಡಬೇಕು. ಪ್ರತಿಭೆಗೆ ಸದಾ ಮನ್ನಣೆ ದೊರೆಯುತ್ತದೆ. ಹೀಗಾಗಿ ವಿದ್ಯಾರ್ಥಿನಿಯರು ವೃತ್ತಿಯೊಂದಿಗೆ ತಮ್ಮ ಆಸಕ್ತಿ ಹಾಗೂ ಪ್ರವೃತ್ತಿಗಳನ್ನೂ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿನಿಯರು ವೃತ್ತಿಪರ ಕೌಶಲ್ಯಗಳನ್ನು ರೂಢಿಸಿಕೊಳ್ಳುವ ಕುರಿತು ಅವರು

ಉದಯವಾಹಿನಿ ಚಿತ್ರ

ಮಾರ್ಗದರ್ಶನ ನೀಡಿದರು.ಡಾ. ತಹಮೀನಾ ನಿಗಾರ್ ಸುಲ್ತಾನಾ ಕೋಲಾರ ಮಾತನಾಡಿ, ವಿದ್ಯಾರ್ಥಿನಿಯರು ಆತ್ಮವಿಶ್ವಾಸ ಬೆಳೆಸಿಕೊಳ್ಳುವುದರ ಜತೆಗೆ ವಿಭಾಗದಲ್ಲಿರುವ ತಂತ್ರಜ್ಞಾನಗಳನ್ನು ಸಮರ್ಪಕವಾಗಿ ಕಲಿತು ಉತ್ತಮ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದರು.

ಡಾ. ಸಂದೀಪ್ ನಾಯಕ್ ಮಾತನಾಡಿ, ವಿದ್ಯಾರ್ಥಿನಿಯರು ಕಲಿಕೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಇಂಟರ್ನೆಟ್ ಯುಗದಲ್ಲಿ ಇತರರನ್ನು ಅವಲಂಬಿಸದೆ ಸ್ವಯಂ ಕಲಿಕೆಯ ಮೂಲಕ ಹೊಸ ತಂತ್ರಜ್ಞಾನಗಳನ್ನು ಅರಿತುಕೊಳ್ಳಬೇಕು. ಪ್ರತಿಯೊಂದು ಹಂತದಲ್ಲೂ ಸೃಜನಶೀಲ ಕಲಿಕೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಸಂವಿಧಾನದ ಅರಿವು ಬೆಳೆಸಿಕೊಂಡು ನೀತಿ ನಿರೂಪಕರಾಗಿ ಹೊರಹೊಮ್ಮಲಿ

• **ಉದಯವಾಹಿನಿ,ವಿಜಯಪುರ, :**

ಯುವಜನರು ಸಂವಿಧಾನದ ಆಶಯಗಳು, ಸಂಸದೀಯ ಕಾರ್ಯಕಲಾಪಗಳು ಹಾಗೂ ಕಾನೂನು ರಚನೆಯ ಪ್ರಕ್ರಿಯೆಯ ಕುರಿತು ಸಮಗ್ರ ಅರಿವು ಹೊಂದಿ, ಭವಿಷ್ಯದಲ್ಲಿ ಜವಾಬ್ದಾರಿಯುತ ನೀತಿ ನಿರೂಪಕರಾಗಿ ಹೊರಹೊಮ್ಮಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಕರೆ ನೀಡಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯುವ ಸಂಸತ್ ಕಾರ್ಯಕ್ರಮವು ಯುವಜನರಿಗೆ ಸಂಸತ್ತು ಹಾಗೂ ಶಾಸಕಾಂಗದ ಕಾರ್ಯವಿಧಾನ, ಪ್ರಶ್ನೋತ್ತರ ಕಲಾಪ, ಕಾನೂನುಗಳ ಮಂಡನೆ ಮತ್ತು ಅವುಗಳ ಕುರಿತು ನಡೆಯುವ ಚರ್ಚೆಗಳ ಬಗ್ಗೆ ಪ್ರಾಯೋಗಿಕ ತಿಳಿವಳಿಕೆ ನೀಡುತ್ತದೆ. ಯಾವುದೇ ವಿಷಯದ ಕುರಿತು ಚರ್ಚಿಸುವಾಗ ನಿಗದಿತ ನಿಯಮಗಳು ಹಾಗೂ ಸಂಸದೀಯ ಪ್ರಕ್ರಿಯೆಗಳನ್ನು ಪಾಲಿಸುವ ಮಹತ್ವವನ್ನು ಇಂತಹ ಕಾರ್ಯಕ್ರಮಗಳ ಮೂಲಕ ಅರಿತುಕೊಳ್ಳಬಹುದು ಎಂದರು.

ಕಾಂಗ್ರೆಸ್ ಸರ್ಕಾರದ ಕುತಂತ್ರ ಶೀಘ್ರ ವಿಫಲ: ಯಶಪಾಲ್

• **ಉದಯವಾಹಿನಿ, ಉಡುಪಿ:**

ಜನರ ಹೊಟ್ಟೆಗೆ ಹಿಟ್ಟು ನೀಡಲು ಯೋಗ್ಯತೆ ಇಲ್ಲದ ಕಾಂಗ್ರೆಸ್ ಸರ್ಕಾರ ಸುಳ್ಳು ಹೇಳಿ ಜನರ ಜುಟ್ಟಿಗೆ ಮಲ್ಲಿಗೆ ಮುಡಿಸುವುದಕ್ಕೆ ಹೊರಟಿದೆ. ಕಾಂಗ್ರೆಸ್‌ನ ಕುತಂತ್ರವನ್ನು ಜನರು ಶೀಘ್ರ ವಿಫಲ ಮಾಡಲಿದ್ದಾರೆ ಎಂದು ಉಡುಪಿ ಶಾಸಕ ಯಶಪಾಲ್ ಎ. ಸುವರ್ಣ ಎಚ್ಚರಿಸಿದ್ದಾರೆ.ಅವರು ಉಡುಪಿ ನಗರ ಬಿಜೆಪಿ ವತಿಯಿಂದ ಮೆಸ್ಕಾಂ ವೈಫಲ್ಯ ವಿರುದ್ಧ ಬುಧವಾರ ಬೋರ್ಡ್ ಹೈಸ್ಕೂಲಿನಿಂದ ಮೆಸ್ಕಾಂ ಕಚೇರಿ ತನಕ ನಡೆದ ಪಂಜಿನ ಮೆರವಣಿಗೆಯಲ್ಲಿ ಮಾತನಾಡಿದರು.

ಇನ್ನೂ ಬೇಸಿಗೆ ಆರಂಭವಾಗಿಲ್ಲ, ಆದರೂ ನಿತ್ಯವೂ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿ, ವಿದ್ಯಾರ್ಥಿಗಳ ಓದಿಗೆ ತೊಂದರೆ ಮಾಡಲಾಗುತ್ತಿದೆ. ಸರ್ಕಾರ ಖಜಾನೆಯಲ್ಲಿ ದುಡ್ಡಿಲ್ಲದಿದ್ದರೂ ಕರಾವಳಿ ಸಂಪುಟ ಸಭೆ ಹೆಸರಲ್ಲಿ 36,000 ಕೋಟಿ ರು. ಅನುದಾನ ನೀಡುವ ಸುಳ್ಳು ಹೇಳಿದೆ. ವಿಧಾನ ಪರಿಷತ್ ಚುನಾವಣೆಯ ಫಲಿತಾಂಶದ ಮೂಲಕ ಜನರು ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಇನ್ನಾದರೂ ಸರ್ಕಾರ ಸ್ಟಿಂಗ್ ಆಪರೇಶನ್ ಎಂಬ ನೆಪಗಳನ್ನು ಬಿಟ್ಟು ಜನರ ಸಮಸ್ಯೆ ಆಲಿಸಿ, ಪರಿಹರಿಸಿ ಎಂದವರು ಆಗ್ರಹಿಸಿದರು.

ಬಳ್ಳಾರಿ ಬಿಎಂಸಿಆರ್‌ಸಿಯಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ ಯಶಸ್ವಿ

ಎರಡು ತಿಂಗಳ ಮಗುವಿನ ಹೊಟ್ಟೆಯೊಳಗೆ ಪತ್ತೆಯಾದ ಭ್ರೂಣವನ್ನು ಬಳ್ಳಾರಿಯ ವಿಮ್ಸ್ ವೈದ್ಯರ ತಂಡ ಅಪರೂಪದ ಶಸ್ತ್ರಚಿಕಿತ್ಸೆ ಮಾಡುವ ಮೂಲಕ ಹೊರತೆಗೆದಿದೆ.

• **ಉದಯವಾಹಿನಿ, ಬಳ್ಳಾರಿ:**

1 : ಏನಿದು 'ಫೀಟಸ್ ಇನ್ ಫೀಟು'
2 : ಭ್ರೂಣ ಇರುವುದು ಪತ್ತೆಯಾಗಿತ್ತು
3 : ಬೆಳವಣಿಗೆ ಹೊಂದದ ಭ್ರೂಣವು

ನಗರದ ಬಿಎಂಸಿಆರ್‌ಸಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ (ವಿಮ್ಸ್) ವೈದ್ಯರ ತಂಡವು ಎರಡು ತಿಂಗಳ ಗಂಡು ಮಗುವಿನ ಹೊಟ್ಟೆಯಲ್ಲಿದ್ದ ಭ್ರೂಣವನ್ನು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದು ಮಗುವಿಗೆ ಮರುಜನ್ಮ ನೀಡಿದೆ. ಮಗು ಗರ್ಭದಲ್ಲಿದ್ದಾಗಲೇ ಬಿಎಂಸಿಆರ್‌ಸಿಯ ವಿಕಿರಣಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸದಾಶಿವಗೌಡ ಅವರ ನೇತೃತ್ವದ ತಂಡವು ಈ ಅಪರೂಪದ ಸಮಸ್ಯೆಯನ್ನು ಪತ್ತೆಹಚ್ಚಿತ್ತು. ಎರಡು ತಿಂಗಳ ಹಿಂದೆ ಇದೇ ಆಸ್ಪತ್ರೆಯಲ್ಲಿ ಮಗು ಜನಿಸಿದ್ದು, ಜನನದ ನಂತರ ಅಗತ್ಯ ತಪಾಸಣೆ ನಡೆಸಿ, ನಿಖರ ಯೋಜನೆಯೊಂದಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ಪೂರ್ಣಗೊಳಿಸಲಾಗಿದೆ ಎಂದು ಪ್ರಕಟಣೆ ಹೊರಡಿಸಲಾಗಿದೆ. ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಗಡ್ಡಿ ದಿವಾಕರ್

ಉದಯವಾಹಿನಿ ಚಿತ್ರ

ಅವರ ನೇತೃತ್ವದಲ್ಲಿ ನಡೆದ ಈ ಸಂಕೀರ್ಣ ಕಾರ್ಯಾಚರಣೆಯಲ್ಲಿ ಡಾ. ಸಂಜೀವ್ ಜೋಶಿ, ಡಾ. ರಾಮ್ ಮೋಹನ್ ಮತ್ತು ಡಾ. ಅಶ್ವಿತಾ ಭಾಗವಹಿಸಿದ್ದರು. ಅರಿವಳಿಕೆ ವಿಭಾಗದ ಮುಖ್ಯಸ್ಥರಾದ ಡಾ. ಬಾಲಸುಬ್ರಹ್ಮಣ್ಯ, ಡಾ. ಪರಿಮಳಾ, ಡಾ. ನಿಜಾಮುದ್ದೀನ್, ಡಾ. ರಘುನಾಥ್, ಡಾ. ಮಧುಶ್ರೀ ಹಾಗೂ ಶುಶ್ರೂಷಕರಾದ ಪುಷ್ಪಲತಾ ಮತ್ತು ಸಲೀಂ ಪಾಷಾ ಅವರನ್ನೊಳಗೊಂಡ ತಂಡ ಯಶಸ್ವಿಯಾಗಿ ಸಹಕರಿಸಿದೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ. ಆಸ್ಪತ್ರೆಯ ಡೀನ್ ಮತ್ತು ನಿರ್ದೇಶಕ ಡಾ. ಮರಿರಾಜ್, ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಎಂ., ವೈದ್ಯಕೀಯ ಅಧೀಕ್ಷಕ ಡಾ. ಅರುಣ್,

> ಸುಮಾರು ಐದು ಲಕ್ಷ ಜನನಗಳಲ್ಲಿ ಒಂದರಲ್ಲಿ ಮಾತ್ರ ಇಂತಹ ಪ್ರಕರಣಗಳು ಕಂಡುಬರುತ್ತವೆ. ಸರಿಯಾದ ಸಮಯದಲ್ಲಿ ಪತ್ತೆಹಚ್ಚಿ ಶಸ್ತ್ರಚಿಕಿತ್ಸೆ ನಡೆಸಿದರೆ ಮಗುವನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯ ಎನ್ನುತ್ತಾರೆ. - ತಜ್ಞ ವೈದ್ಯರು.

ಮುಖ್ಯ ಆಡಳಿತಾಧಿಕಾರಿ ಡಾ. ನಯನಾ ಹಾಗೂ ಹಣಕಾಸು ಸಲಹೆಗಾರ ಮಹೇಶ್ ಅವರ ನಿರಂತರ ಬೆಂಬಲಕ್ಕೆ ವೈದ್ಯರ ತಂಡ ಕೃತಜ್ಞತೆ ಸಲ್ಲಿಸಿದೆ. ಬಿಎಂಸಿಆರ್‌ಸಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಗಡ್ಡಿ ದಿವಾಕರ್ ಅವರು ಈ ಕುರಿತು ಮಾತನಾಡಿ, ಮಗುವಿನ ಹೊಟ್ಟೆಯೊಳಗೆ ಮತ್ತೊಂದು ಭ್ರೂಣ ಬೆಳವಣಿಗೆಯಾಗಿರುವುದು ಅತ್ಯಂತ ಅಪರೂಪದ ವೈದ್ಯಕೀಯ ಪ್ರಕರಣವಾಗಿದೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ 'ಫೀಟಸ್ ಇನ್ ಫೀಟು' ಎಂದು ಕರೆಯಲಾಗುತ್ತದೆ.

ಮಗು ಗರ್ಭದಲ್ಲಿದ್ದಾಗಲೇ ಈ ಸಮಸ್ಯೆಯನ್ನು ವಿಕಿರಣಶಾಸ್ತ್ರ ವಿಭಾಗದ ವೈದ್ಯರು ಪತ್ತೆಹಚ್ಚಿದ್ದರು. ಮಗು ಜನಿಸಿದ ಬಳಿಕ ಅಗತ್ಯ ತಪಾಸಣೆ ನಡೆಸಿ, ಶಸ್ತ್ರಚಿಕಿತ್ಸೆಗೆ ಸೂಕ್ತ ಸಿದ್ಧತೆ ಮಾಡಿಕೊಳ್ಳಲಾಗಿತ್ತು.

ವೈದ್ಯರ ತಂಡದ ಸಂಘಟಿತ ಪ್ರಯತ್ನದಿಂದ ಸಂಕೀರ್ಣ

> ಕಳೆದ ವರ್ಷ ಹುಬ್ಬಳ್ಳಿಯಲ್ಲಿಯೂ ಇಂತಹದ್ದೇ ಘಟನೆ ಬೆಳಕಿಗೆ ಬಂದಿತ್ತು. 14 ದಿನಗಳ ನವಜಾತ ಶಿಶುವಿನ ಹೊಟ್ಟೆಯಲ್ಲಿದ್ದ ಭ್ರೂಣವನ್ನು ಇಲ್ಲಿನ ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಕೆಎಂಸಿಆರ್‌ಐ) ವೈದ್ಯರು ಯಶಸ್ವಿಯಾಗಿ ಹೊರ ತೆಗೆದು ಮಗುವಿನ ಜೀವ ಉಳಿಸಿದ್ದರು.

ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಮಗುವಿನ ಹೊಟ್ಟೆಯಲ್ಲಿದ್ದ ಭ್ರೂಣವನ್ನು ಹೊರತೆಗೆಯಲಾಗಿದೆ.

ಸದ್ಯ ಮಗುವಿನ ಆರೋಗ್ಯದ ದೃಷ್ಟಿಯಿಂದ ಈ ಶಸ್ತ್ರಚಿಕಿತ್ಸೆ ಮಹತ್ವದ ಯಶಸ್ಸು ಕಂಡಿದೆ. ಇಂತಹ ಪ್ರಕರಣಗಳು ಸುಮಾರು ಐದು ಲಕ್ಷ ಜನನಗಳಲ್ಲಿ ಒಂದು ಬಾರಿ ಮಾತ್ರ ಕಾಣಿಸಿಕೊಳ್ಳುತ್ತವೆ ಎಂದು ತಿಳಿಸಿದರು. ಭ್ರೂಣಕ್ಕೆ ಬೆನ್ನು ಹುರಿ, ಚರ್ಮ, ಕೈ - ಕಾಲು, ಕರುಳು ಇದ್ದವು, ಆದರೆ ಮೆದುಳು ಮತ್ತು ಹೃದಯ ಇರಲಿಲ್ಲ ಎನ್ನುವುದು ಅಲ್ಟ್ರಾಸೌಂಡ್‌ನಿಂದ ಗೊತ್ತಾಗಿತ್ತು. ನಂತರ ಎಂಆರ್‌ಐ ಮಾಡಿದಾಗ ಭ್ರೂಣ ಇರುವುದು ದೃಢಪಟ್ಟಿತ್ತು. ಶಸ್ತ್ರಚಿಕಿತ್ಸಾ ತಜ್ಞರ ಒಪ್ಪಿಗೆ ಪಡೆದು ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಪಿಎಂಎಸ್‌ಎಸ್ ವೈದ್ಯಕೀಯ ಅಧೀಕ್ಷಕ ಡಾ. ರಾಜಶೇಖರ್ ಎಸ್ ಅವರ ನೇತೃತ್ವದಲ್ಲಿ 45 ನಿಮಿಷ ಶಸ್ತ್ರಚಿಕಿತ್ಸೆ ನೆರವೇರಿಸಿ, ಶಿಶುವಿನಲ್ಲಿದ್ದ ಭ್ರೂಣವನ್ನು ಹೊರ ತೆಗೆಯಲಾಗಿತ್ತು.

ಮಿನಿ ನ್ಯೂಸ್

ಅಡಕೆ ಪರ್ಯಾಯ ಉತ್ಪನ್ನ ಸೇರ್ಪಡೆ ಚರ್ಚೆ

• **ಉದಯವಾಹಿನಿ, ಮಂಗಳೂರು:**

ಪ್ರಸ್ತುತ ಅಡಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ ಅಡಕೆ ಸಂಶೋಧನೆಗೆ ಮಾತ್ರ ಸೀಮಿತವಾಗಿದ್ದು, ಕರಿಮೆಣಸು, ಕಾಫಿ, ಕೋಕೋ, ರಬ್ಬರ್ ಸೇರಿದಂತೆ ಇತರ ಕೃಷಿ ಉತ್ಪನ್ನಗಳನ್ನೂ ಸಂಶೋಧನೆಯ ವ್ಯಾಪ್ತಿಗೆ ಸೇರಿಸುವ ಉದ್ದೇಶದಿಂದ ಟ್ರಸ್ಟ್ ಡೀಡ್‌ನಲ್ಲಿ ಅಗತ್ಯ ತಿದ್ದುಪಡಿ ಮಾಡುವ ಕುರಿತು ಅಡಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ(ಎಆರ್ ಡಿಎಫ್) ಸಭೆಯಲ್ಲಿ ನಿರ್ಧರಿಸಲಾಯಿತು

ಅಡಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನದ ಸಭೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದಲ್ಲಿ ನಡೆಯಿತು. ಈ ಸಂದರ್ಭ 59ನೇ ಪಟ್ಟಾಭಿಷೇಕ ವರ್ಧಂತ್ಯುತ್ಸವದ ಅಂಗವಾಗಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಲಾಯಿತು. ಅಡಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನಕ್ಕೆ ಸರ್ಕಾರಿ ಮಟ್ಟದಲ್ಲಿ ಮನ್ನಣೆ ದೊರೆಯುವ ಉದ್ದೇಶದಿಂದ ಸಂಶೋಧನೆ ನಡೆಸುತ್ತಿರುವ ವಿಶ್ವವಿದ್ಯಾಲಯಗಳು ಅಥವಾ ಸರ್ಕಾರಿ ಇಲಾಖೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು, ಸಂಶೋಧನೆಗೆ ಅಗತ್ಯವಿರುವ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ ಹಾಗೂ ಅಗತ್ಯ ಸಿಬ್ಬಂದಿ ನೇಮಿಸಿಕೊಳ್ಳುವ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ತೀರ್ಮಾನಿಸಲಾಯಿತು. ಈ ನಿಟ್ಟಿನಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಅಗತ್ಯ ಮಾಹಿತಿಯನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು. ಈ ಸಾಲಿನಲ್ಲಿ ಒಟ್ಟು 34 ಅಡಕೆ ಮಾದರಿಗಳು ಪರಿಶೀಲನೆಗಾಗಿ ಕಂದಾಯ ಗುಪ್ತಚರ ನಿರ್ದೇಶನಾಲಯ ಮತ್ತು ಸುಂಕ ಇಲಾಖೆಯಿಂದ ಬಂದಿದ್ದು, ಇದು ಅಡಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ದೊರೆಯುತ್ತಿರುವ ಮನ್ನಣೆಯ ದ್ಯೋತಕವಾಗಿದೆ ಎಂದು ತಿಳಿಸಿದರು.

ನಾಲ್ವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

• **ಉದಯವಾಹಿನಿ, ಮಂಗಳೂರು:**

ಪ್ರೇಮ ಪ್ರಕರಣದ ಹಿನ್ನೆಲೆಯಲ್ಲಿ ಯುವಕನೊಬ್ಬನನ್ನು ತಲವಾರಿನಿಂದ ಕಡಿದು ಬರ್ಬರವಾಗಿ ಕೊಲೆ ಮಾಡಿದ ನಾಲ್ವರು ಅಪರಾಧಿಗಳಿಗೆ ಮಂಗಳೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ. ಪ್ರಕರಣದ ಆರೋಪಿಗಳಾದ ಸುನೀಲ್ ಕುಮಾರ್ ಯಾನೆ ಕೌಟಿ, ಪ್ರವೀಣ್ ಪೂಜಾರಿ ಯಾನೆ ಚೋಟು, ಪ್ರೀತಮ್ ಯಾನೆ ಅಭಿ ಹಾಗೂ ರೋಹಿತ್ ಕುಮಾರ್ ಯಾನೆ ಶೂಟರ್ ಶಿಕ್ಷೆಗೆ ಒಳಗಾದ ದೋಷಿಗಳು. 2019ರ ಜನವರಿ 3 ರಂದು ಪಂಜಿಮೊಗರು ಮಾಲಾಡಿ ರಸ್ತೆಯ ಒ.ಗಿ. ಶೆಟ್ಟಿ ಕಾಲೇಜ್ ಬಳಿ ಈ ಕೊಲೆ ಪ್ರಕರಣ ನಡೆದಿತ್ತು. ಪ್ರಕರಣದ 1ನೇ ಆರೋಪಿ ಸುನಿಲ್ ಕುಮಾರ್ ಎಂಬಾತನ ತಂಗಿಯನ್ನು ಮೃತ ರಾಕೇಶ್ ಪ್ರೀತಿಸುತ್ತಿದ್ದ ಎಂಬ ಕಾರಣಕ್ಕೆ ಆಕ್ರೋಶಗೊಂಡ ಆರೋಪಿಗಳೆಲ್ಲರೂ ಸೇರಿ ಸಂಚು ರೂಪಿಸಿ, ರಾಕೇಶ್ ನನ್ನು ತಲವಾರ್ ನಿಂದ ಕಡಿದು ಹತ್ಯೆ ಮಾಡಿದ್ದರು. ಈ ಕುರಿತು ಕಾವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಕಾವೂರು ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಆರ್. ನಾಯ್ಕ್ ಅವರು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ ಮಾರುತಿ ಕಮಟೆ ಅವರು ಸುದೀರ್ಘ ವಿಚಾರಣೆ ಬಳಿಕ ನಾಲ್ವರೂ ಆರೋಪಿಗಳು ದೋಷಿಗಳು ಎಂದು ತೀರ್ಪು ನೀಡಿದ್ದಾರೆ.

ಕೊಪ್ಪಳ ಜಿಲ್ಲೆಗೆ ಒಲಿದ ಎರಡು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು

• **ಉದಯವಾಹಿನಿ, ಕೊಪ್ಪಳ:**

ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಜಾನಪದ ಕಲೆಯ ಶ್ರೀಮಂತ ಪರಂಪರೆಯನ್ನು ತಮ್ಮ ಕಲಾಸೇವೆಯ ಮೂಲಕ ಉಳಿಸಿ ಬೆಳೆಸುತ್ತಿರುವ ಕೊಪ್ಪಳ ಜಿಲ್ಲೆಯ ಇಬ್ಬರು ಹಿರಿಯ ಜಾನಪದ ಕಲಾವಿದರಿಗೆ 2026ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಒಲಿದು ಬಂದಿದೆ.ಕುಷ್ಟಗಿ ತಾಲ್ಲೂಕಿನ ಹಾಬಲಕಟ್ಟಿ ಗ್ರಾಮದ ಗೀಗೀಪದ ಕಲಾವಿದ ದಾವಲಸಾಬ ಅತ್ತಾರ ಹಾಗೂ ಕಾರಟಗಿ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಹಗಲುವೇಷ ಕಲಾವಿದ ಶಿವಲಿಂಗಪ್ಪ ರಾಮಣ್ಣ ಸಿದ್ದಾಪುರ ಅವರು ಪ್ರಶಸ್ತಿಗೆ ಇಬ್ಬರು ಆಯ್ಕೆಯಾಗಿದ್ದು, ಜಿಲ್ಲೆಯ ಕಲಾಭಿಮಾನಿಗಳಲ್ಲಿ ಸಂತಸ ಮನೆಮಾಡಿದೆ. ಬಡತನದ ಬದುಕಿನಲ್ಲೂ ಜಾನಪದ ಕಲೆಯ ಶ್ರೀಮಂತಿಕೆ ಮೆರೆದ ದಾವಲಸಾಬ ಅತ್ತಾರ ಕುಷ್ಟಗಿ ತಾಲ್ಲೂಕಿನ ಹಾಬಲಕಟ್ಟಿ ಗ್ರಾಮದ ದಾವಲಸಾಬ ಅತ್ತಾರ ಅವರು ಉತ್ತರ ಕರ್ನಾಟಕದ ಸಾಂಪ್ರದಾಯಿಕ ಗೀಗೀಪದ ಕಲೆಯನ್ನು ಕಳೆದ ನಾಲ್ಕು ದಶಕಗಳಿಂದ ಉಳಿಸಿ ಬೆಳೆಸುತ್ತಿರುವ ಹಿರಿಯ ಕಲಾವಿದರಾಗಿದ್ದಾರೆ. ಸುಮಾರು 55 ವರ್ಷದ ಇವರು ವೃತ್ತಿಯಿಂದ ಅಗರಬತ್ತಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರೂ, ಜಾನಪದ ಕಲೆಯ ಮೇಲಿನ ಆಸಕ್ತಿಯನ್ನು ಇಂದಿಗೂ ಜೀವಂತವಾಗಿಟ್ಟುಕೊಂಡಿದ್ದಾರೆ. ಬಡತನದ ನಡುವೆಯೂ ಕಲೆಯನ್ನೇ ಶ್ರೀಮಂತ ಆಸ್ತಿಯನ್ನಾಗಿ ಮಾಡಿಕೊಂಡಿರುವ ಇವರ ಬದುಕು ಹಲವರಿಗೆ ಮಾದರಿಯಾಗಿದೆ. ಜಾನಪದ ಕಲೆ ಇವರಿಗೆ ಮನೆತನದ ಬಳುವಳಿಯಾಗಿ ಬಂದಿದೆ. ತಂದೆ ಮೋಹರಂ ಹಾಡುಗಳಲ್ಲಿ ಪ್ರಸಿದ್ಧಿ ಪಡೆದಿದ್ದರೆ, ಅಜ್ಜ ಬಯಲಾಟ ಕಲಾವಿದರಾಗಿದ್ದರು. ಇದೇ ಕಲಾಪರಂಪರೆಯನ್ನು ಮೊಮ್ಮಗ ದಾವಲಸಾಬ ಗೀಗೀಪದ ಗಾಯನದ ಮೂಲಕ ಮುಂದುವರಿಸಿದ್ದಾರೆ.

ಉದಯವಾಹಿನಿ ಚಿತ್ರ

50 ಲಕ್ಷ ಜನರಿಂದ ರಾಷ್ಟ್ರೀಯ ಹೆದ್ದಾರಿ ಬಂದ್

• **ಉದಯವಾಹಿನಿ, ಚಿಕ್ಕೋಡಿ:**

ಕಬ್ಬಿಗೆ ಯೋಗ್ಯ ಬೆಲೆ ನಿಗದಿ ಮಾಡುವಂತೆ ಆಗ್ರಹಿಸಿ ಕಳೆದ ಒಂದೂವರೆ ತಿಂಗಳಿನಿಂದ ನಿರಂತರ ಹೋರಾಟ ನಡೆಸುತ್ತಿರುವ ಕಬ್ಬು ಬೆಳೆಗಾರರ ತಾಳ್ಮೆ ಇದೀಗ ಕಳೆದುಕೊಂಡಿದೆ. ಸರ್ಕಾರ ರೈತರ ಬೇಡಿಕೆಗಳಿಗೆ ತಕ್ಷಣವೇ ಸ್ಪಂದಿಸದಿದ್ದರೆ 50 ಲಕ್ಷ ಜನರನ್ನು ಸೇರಿಸಿ ಶನಿವಾರ ಬೆಂಗಳೂರು ಪುಣೆ ರಾಷ್ಟ್ರೀಯ ಹೆದ್ದಾರಿ ಹಾಗೂ ಹತ್ತರಗಿ ಟೋಲ್ ಬಂದ್ ಮಾಡಲಾಗುವುದು ಎಂದು ರೈತ ಮುಖಂಡ ಚೂನಪ್ಪ ಪೂಜಾರಿ ರಾಜ್ಯ ಸರ್ಕಾರಕ್ಕೆ ನೇರ ಎಚ್ಚರಿಕೆ ರವಾನಿಸಿದ್ದಾರೆ.ಅವರು ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರದಲ್ಲಿ ನಡೆಯುತ್ತಿರುವ ಆರನೇ ದಿನದ ಕಬ್ಬು ಹೋರಾಟಗಾರ ಪ್ರತಿಭಟನೆ ಸ್ಥಳದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ರಾಜ್ಯದಲ್ಲಿ ತೀವ್ರ ಬರಗಾಲವಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಬೀದಿಗಿಳಿದು ಹೋರಾಟ ಮಾಡುತ್ತಿದ್ದರೂ ಸರ್ಕಾರ ಮಾತ್ರ ಕ್ಯಾರೇ ಎನ್ನುತ್ತಿಲ್ಲ. 24 ಗಂಟೆಗಳ ಕಾಲ ಸುದೀರ್ಘ ಸಭೆ ನಡೆಸಿದರೂ ಮುಖ್ಯಮಂತ್ರಿ ರೈತರಿಗೆ ಯಾವುದೇ ಸ್ಪಷ್ಟ ಪರಿಹಾರವನ್ನು ಘೋಷಣೆ ಮಾಡಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	09:00 ರಿಂದ 10:30
ಗುಳಿಕ ಕಾಲ	ಬೆಳಿಗ್ಗೆ	06:00 ರಿಂದ 07:30
ಯಮಗಂಡ ಕಾಲ	ಮಧ್ಯಾಹ್ನ	01:30 ರಿಂದ 03:00

ಮೇಷ ನಿಮ್ಮ ಆರೋಗ್ಯ ಇಂದು ಪರಿಪೂರ್ಣವಾಗಿಲ್ಲದಿದ್ದರಿಂದ ನೀವು ನಿಮ್ಮ ಕೆಲಸದ ಮೇಲೆ ಗಮನ ಕೊಡುವುದು ಕಷ್ಟವಾಗಬಹುದು. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

ವೃಷಭ ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ. ಒಬ್ಬ ಹಿರಿಯ ವ್ಯಕ್ತಿಯ ಆರೋಗ್ಯ ಕೊಂಚ ಆತಂಕಕ್ಕೆ ಕಾರಣವಾಗುತ್ತದೆ.

ಮಿಥುನ ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಆನಂದವನ್ನು ಹಂಚಿಕೊಳ್ಳಿ. ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ. ಮನೆಯಲ್ಲಿ ಸಾಮರಸ್ಯ ತರಲು ನಿಕಟ ಸಹಕಾರದಕೆಲಸ ಮಾಡಬೇಕು. ಕಾರ್ಯಕ್ರಮ ವಿಫಲವಾಗಬಹುದಾದ್ದರಿಂದ ನಿರಾಶೆಯಾಗಬಹುದು.

ಕಟಕ ಸ್ನಾಯುಗಳಿಗೆ ಆರಾಮ ನೀಡಲು ನಿಮ್ಮ ದೇಹವನ್ನು ತೈಲದಿಂದ ಮಸಾಜ್ ಮಾಡಿ ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತಿರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ.

ಸಿಂಹ ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ – ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

ಕನ್ಯಾ ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ. ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು.

ತುಲಾ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ.

ವೃಶ್ಚಿಕ ಮಾನಸಿಕ ಸ್ಪಷ್ಟತೆಯನ್ನು ನಿರ್ವಹಿಸಲು ಗೊಂದಲ ಮತ್ತು ಹತಾಶೆಯನ್ನು ತಪ್ಪಿಸಿ ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ.

ಧನಸ್ಸು ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

ಮಕರ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮನ್ನು ಸಕ್ರಿಯಗೊಳಿಸುತ್ತದೆ.ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು, ಅವರಿಗೆ ಸಾಲ ಕೊಡುವುದಕ್ಕಿಂತ ಮುಂಚೆ ಅವರ ನಂಬಿಕೆಯನ್ನು ಅಗತ್ಯವಾಗಿ ಪರೀಕ್ಷಿಸಿ, ಇಲ್ಲದಿದ್ದರೆ ಹಣದ ನಷ್ಟವಾಗುವ ಸಾಧ್ಯತೆ ಇದೆ.

ಕುಂಭ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ. ಬಿಕ್ಕಟ್ಟಿನ ಸಮಯದಲ್ಲಿ ಸಂಬಂಧಿಗಳೂ ಸಹಾಯ ಮಾಡುತ್ತಾರೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

ಮೀನ ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಸಹ ಖರ್ಚು ಆಗಬಹುದು. ನಿಮ್ಮ ಪರಿಸ್ಥಿತಿ ಮತ್ತು ನಿಮ್ಮ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವ ನಿಕಟ ಸ್ನೇಹಿತರೊಂದಿಗೆ ಹೊರಗೆ ಹೋಗಿ.

ಇಂದು ಸರ್ದಾರ ವಲ್ಲಭಭಾಯಿ ಪಟೇಲ ಜನ್ಮದಿನ

• **ಉದಯವಾಹಿನಿ, ಕಲಬುರಗಿ, :**

ಭಾರತ ದೇಶದ ಏಕತಾ ಪುರುಷ ವಿಶೇಷವಾಗಿ ಹೈದ್ರಾಬಾದ ಸಂಸ್ಥಾನ ಭಾರತದಲ್ಲಿ ವಿಲೀನಕ್ಕೆ ದಿಟ್ಟತನದ ಧೋರಣೆ ಅನುಸರಿಸಿ ವಿಶಾಲ ಭಾರತದಲ್ಲಿ ಸೇರಿಸಲು ಕಾರಣಿಭೂತರಾದ ದೇಶದ ಮೊದಲನೇ ಉಪಪ್ರಧಾನಿ ಮತ್ತು ಗೃಹ ಮಂತ್ರಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭ ಭಾಯಿ ಪಟೇಲರ ಜನ್ಮ ದಿನ ನಾಳೆ (ಅ.31) ಆಚರಿಸಲಾಗುವುದು. ಮುಂಜಾನೆ 9.30 ಗಂಟೆಗೆ ನಗರದ ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲರ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾಯಕ್ರಮದಲ್ಲಿ ಸಚಿವರು, ಸಂಸದರು, ಶಾಸಕರು, ಉನ್ನತ ಅಧಿಕಾರಿಗಳು, ಆಯಾ ಕ್ಷೇತ್ರದ ಗಣ್ಯರು, ಸಂಘ ಸಂಸ್ಥೆಯ ಪ್ರಮುಖರು ಹಾಜರಾಗಬೇಕೆಂದು ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲ ಜಯಂತೋತ್ಸವ ಸಮಿತಿ ಮತ್ತು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಗೌರವಾಧ್ಯಕ್ಷ ಬಸವರಾಜ ದೇಶಮುಖ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿ ಅವರು ಮನವಿ ಮಾಡಿದ್ದಾರೆ.

ಮಹಾಲಕ್ಷ್ಮೀ ಜಾತ್ರೆಯಲ್ಲಿ ಸಚಿವ ಡಾ. ಅಜಯ್‌ಸಿಂಗ್ ಭಾಗಿ

• **ಉದಯವಾಹಿನಿ, ಕಲಬುರಗಿ,:**

ಜಿಲ್ಲೆಯ ಜೇವರಗಿಯ ಆರಾಧ್ಯ ದೇವತೆಯಾದ ಕಲ್ಕತ್ತಾದೇವಿ (ಮಹಾಲಕ್ಷ್ಮೀ ದೇವಿ) ಜಾತ್ರಾ ಮಹೋತ್ಸವದ ಮೂರನೇ ದಿನದ ಅಂಗವಾಗಿ, ಬಡಿಗೇರ ಮನೆಯಲ್ಲಿ ಸಣ್ಣ ನೀರಾವರಿ, ವಿಜ್ಞಾನ, ತಂತ್ರಜ್ಞಾನ ಸಚಿವರಾದ ಡಾ. ಅಜಯ್ ಸಿಂಗ್, ಶ್ವೇತಾ ಸಿಂಗ್ ದಂಪತಿ ಶ್ರೀದೇವಿಯ ದರ್ಶನ ಪಡೆದು, ಉಡಿ ತುಂಬಿ ಭಕ್ತಿಭಾವದಿಂದ ವಿಶೇಷ ಪೂಜೆ ಸಲ್ಲಿಸಿದರು.

ನಾಡಿನ ಸಮಸ್ತ ಜನತೆಯ ಸುಖ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸಿ, ಎಲ್ಲರ ಬಾಳಿನಲ್ಲಿ ಸಂತೋಷ, ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಲಿ ಹಾಗೂ ರೈತರು, ಕಾರ್ಮಿಕರು ಸೇರಿದಂತೆ ಸಮಾಜದ ಪ್ರತಿಯೊಂದು ವರ್ಗದ ಜನರ ಬದುಕು ಹಸನಾಗಲಿ ಎಂದು ಶ್ರೀ ದೇವಿಯಲ್ಲಿ ಭಕ್ತಿಪೂರ್ವಕವಾಗಿ ಡಾ. ಅಜಯ್ ಸಿಂಗ್ ದಂಪತಿ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಕಾಂಗ್ರೇಸ್ ಮುಖಂಡರು, ಗಣ್ಯರು ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಉಪಸ್ಥಿತರಿದ್ದು, ಶ್ರೀ ದೇವಿಯ ದರ್ಶನ ಪಡೆದರು.

ಮಕ್ಕಳ ರಕ್ಷಣೆಗೆ ಅನೇಕ ಕಾನೂನು

• **ಉದಯವಾಹಿನಿ, ಬೀದರ್:**

ಮಕ್ಕಳ ರಕ್ಷಣೆಗೆ ಅನೇಕ ಕಾನೂನುಗಳು ಇವೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಹೈಯಾಳಪ್ಪ ಹೇಳಿದರು.ಋಷಿಕೇಶ ಶಿಕ್ಷಣ ಸಂಸ್ಥೆಯ ಸಂಚಾಲಿತ ಇಲ್ಲಿಯ ಅರುಣೋದಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಸುರಕ್ಷಿತ ಬಾಲ್ಯ ಅಭಿಯಾನ ಅಂಗವಾಗಿ ಆಯೋಜಿಸಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಲೈಂಗಿಕ ದೌರ್ಜನದಿಂದ ರಕ್ಷಿಸುವ ಪೋಕ್ಸೊ ಕಾಯ್ದೆ, ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಕಾನೂನು ಬದ್ಧ ರಕ್ಷಣೆ ಹಾಗೂ ಪುನರ್ವಸತಿ ಒದಗಿಸಲು ನೆರವಾಗುವ ಬಾಲ ನ್ಯಾಯ ಕಾಯ್ದೆ, 6 ರಿಂದ 14 ವರ್ಷದ ಒಳಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಕಲ್ಪಿಸುವ ಶಿಕ್ಷಣ ಹಕ್ಕು ಕಾಯ್ದೆ, ಬಾಲ್ಯ ವಿವಾಹ, ಬಾಲ ಕಾರ್ಮಿಕ ನಿಷೇಧ ಮತ್ತಿತರ ಕಾಯ್ದೆಗಳು ಜಾರಿಯಲ್ಲಿವೆ ಎಂದು ತಿಳಿಸಿದರು. ಸಂಕಷ್ಟದಲ್ಲಿ ಇರುವ ಮಕ್ಕಳು ತುರ್ತು ನೆರವಿಗಾಗಿ ಮಕ್ಕಳ ಸಹಾಯವಾಣಿ 1098 ಅಥವಾ 112ಗೆ ಸಂಪರ್ಕಿಸಬೇಕು ಎಂದು ತಿಳಿಸಿದರು.

ನೆಲದ ಕಾನೂನನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ಹೇಳಿದರು. ಅಕ್ಕ ಪಡೆಯ ಪ್ರಭಾರಿ ಸಂಗೀತಾ ಎಂ.ಬಿ. ಮಾತನಾಡಿ, ಮಕ್ಕಳು ಯಾವುದೇ ರೀತಿಯ ಶೋಷಣೆ ಸಹಿಸಿಕೊಳ್ಳಬಾರದು. ಏನೇ ತೊಂದರೆ ಇದ್ದರೂ ಪೊಲೀಸರ ಗಮನಕ್ಕೆ ತರಬೇಕು ಎಂದು ಹೇಳಿದರು. ಮಹಿಳಾ ಠಾಣೆ ಸಬ್ ಇನ್‌ಸ್ಪೆಕ್ಟರ್ ಅಡೆಪ್ಪ ಬನ್ನಿ ಮಾತನಾಡಿ, ಅಕ್ಕ ಪಡೆ ಹೆಣ್ಣು ಮಕ್ಕಳ ಸುರಕ್ಷತೆಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು.

ನಾಗರಾಳ ಜಲಾಶಯ ಅಧಿಕಾರಿಗಳ ತಾರತಮ್ಯ ಅಧಿಕಾರಿಗಳಿಗೆ ಅಮಾನತ್ತು ಮಾಡಲು: ಗೋಪಾಲ ಎಂಪಿ ಒತ್ತಾಯ

• **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ ರೈತರ ಜೀವನಾಡಿರುವ ಕೆಳದಂಡೆ ಮುಲ್ಲಾಮಾರಿ ನಾಗರಾಳ ಜಲಾಶಯದಿಂದ ರೈತರು ಟ್ರಾಕ್ಟರ್ ಯಂತ್ರ ಬಳಸಿ ಜಮೀನುಗಳಿಗೆ ನೀರು ಹರಿಸುತ್ತಿದ್ದರೆ ಜಲಾಶಯ ಕೆಳಗಡೆಯಿರುವ ರೈತರಿಗೆ ನದಿಯಲ್ಲಿ ನೀರಿಲ್ಲ ನೀರಿನ ಮೋಟರ್ ಅಳವಡಿಸಿಕೊಂಡರೆ ಜಪ್ತಿ ಮಾಡಿಕೊಂಡು ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ ಇದರಿಂದ ಅಧಿಕಾರಿಗಳ ತಾರತಮ್ಯವನ್ನು ಪರಿಶೀಲಿಸಿ ಮೇಲಾಧಿಕಾರಿಗಳು ಜಲಾಶಯದ ಸಂಬಂಧಪಟ್ಟ ಅಧಿಕಾರಿಗಳಿಗೆ ಅಮಾನತ್ತು ಮಾಡಬೇಕು ಎಂದು ಯುವರೈತ ಹೋರಾಟಗಾರ ಗೋಪಾಲ ಎಂಪಿ ಆಗ್ರಹಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು,ಈಗಾಗಲೇ ನಾಗರಾಳ ಗ್ರಾಮದಿಂದ ಪೋತಂಗಲ್ ಹಲಕೋಡಾ ಗ್ರಾಮದವರೆಗೆ ಮುಲ್ಲಾಮಾರಿ ನದಿಯ ದಂಡೆಗೆ ಇರುವ ಎಲ್ಲಾ ರೈತರ ಕಾರ್ಖಾನೆಗಳ ನೀರು ಎತ್ತುವ ಯಂತ್ರಗಳು ಹಾಗೂ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದಾರೆ ಆದರೆ ನಾಗರಾಳ ಜಲಾಶಯದಿಂದಲ್ಲೇ ಕೆಲ ರೈತರು ಟ್ರಾಕ್ಟರ್ ಯಂತ್ರ ಬಳಸಿ ಬೆಳೆಗಳಿಗೆ ನೀರು ಉಪಯೋಗಿಸುತ್ತಿರುವುದು ಯಾವ ಕಾರಣಕ್ಕೆ ಜಲಾಶಯ ಅಧಿಕಾರಿಗಳ ನಿರ್ಲಕ್ಷ್ಯವೂ ಅಥವಾ ಅಧಿಕಾರಿಗಳ ಕುಮ್ಮಕ್ಕು ಎಂಬುವುದು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಜಲಾಶಯ ಕೆಳಗೆ ಇರುವ ರೈತರಿಗೊಂದು ನ್ಯಾಯ ಜಲಾಶಯ ಸುತ್ತಮುತ್ತಲ್ಲಿರುವ

☛ ಉದಯವಾಹಿನಿ ಚಿತ್ರ

ರೈತರಿಗೊಂದು ನ್ಯಾಯವೇ ಎಂದು ಗೋಪಾಲ ಎಂಪಿ ಪ್ರಶ್ನಿಸಿ ತಕ್ಷಣವೇ ಜಲಾಶಯ ಸಂಬಂಧ ಪಟ್ಟ ಅಧಿಕಾರಿಗಳಿಗೆ ಅಮಾನತ್ತು ಮಾಡಬೇಕು ಎಂದು ಆಗ್ರಹಿಸಿದರು. ಈಗಾಗಲೇ ಮುಲ್ಲಾಮಾರಿ ನದಿಯು ಬತ್ತಿಹೋಗಿದೆ ನೀರಿಲ್ಲ ಇದರಿಂದ ರೈತರು,ಮೇಕೆ ಕುರಿ ಧನಕರುಗಳಿಗೆ ಕುಡಿಯಲು ನೀರಿಲ್ಲ,ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ,ಬೋರವೆಲ್ ಗಳಲ್ಲಿ ನೀರು ಬರುತ್ತಿಲ್ಲ ಮುಲ್ಲಾಮಾರಿ ನದಿಗೆ ಕಾಲುವೆಗಳಿಗೆ ಜಲಾಶಯ ನೀರು ಹರಿಸಿದರೆ ರೈತರಿಗೆ ಜೋಳ,ಕಡ್ಲೆಬೇಳೆ,

ಜಲಾಶಯ ಎಇಇ ಸ್ಪಷ್ಟನೆ:- ನಾಗರಾಳ ಜಲಾಶಯದಿಂದ ರೈತರು ಟ್ರಾಕ್ಟರ್ ಮೂಲಕ ನೀರು ಬೆಳೆಗಳಿಗೆ ಉಪಯೋಗ ಮಾಡಿಕೊಳ್ಳುವ ಸುದ್ದಿ ತಿಳಿಯುತ್ತಿದಂತೆ ಸ್ಥಳಕ್ಕೆ ಭೇಟಿ ನೀಡಿ ರೈತರ ಟ್ರಾಕ್ಟರ್ ತೆರವುಗೊಳಿಸಿ ಇನ್ನೋಮ್ಮೆ ಮಾಹಿತಿ ಇಲ್ಲದೆ ನೀರು ಉಪಯೋಗಿಸಿಕೊಳ್ಳುವುದು ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ರೈತರಿಗೆ ಬುದ್ದಿವಾದ ಹೇಳಿದ್ದೇವೆ ಎಂದು ತಿಳಿಸಿದ್ದಾರೆ.- ನಾಗರಾಳ ಜಲಾಶಯ ಎಇಇ ಅಮೃತ ಪವ್ವಾರ

☛ ಉದಯವಾಹಿನಿ ಚಿತ್ರ

ಕಬ್ಬು,ಅರಶೀಣ,ಬಾಳೆಹಣ್ಣು ಇತರೆ ಬೆಳೆಗಳು ಬೆಳೆಸಲು ಅನುಕೂಲವಾಗುತ್ತದೆ.

ಜೋತೆಯಲ್ಲಿ ಜಾನುವಾರಗಳಿಗೆ ಕುರಿ ಮೇಕೆಗಳಿಗೆ ಕುಡಿಯಲು ನೀರು ಮೇವು ಅನುಕೂಲವಾಗುತ್ತದೆ ಹಾಗಾಗಿ ಸರ್ಕಾರ ಮುತುವರ್ಜಿ ವಹಿಸಿ ಜಿಲ್ಲಾಡಳಿತಕ್ಕೆ ಸೂಕ್ತ ನಿರ್ದೇಶನ ನೀಡಿ ನಾಗರಾಳ ಜಲಾಶಯದಿಂದ ಮುಲ್ಲಾಮಾರಿ ನದಿಗೆ ನೀರು ಹೊರ ಬೀಡಬೇಕು ಎಂದು ಗೋಪಾಲ ಎಂಪಿ,ವಕೀಲರ ಸಂಘದ ಮಾಜಿ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ,ಬಿಜೆಪಿ ಅಲ್ಪಸಂಖ್ಯಾತ ಘಟಕದ ರಾಜ್ಯ ಉಪಾಧ್ಯಕ್ಷ ಕೆಎಂ ಬಾರಿ,ಜೆಡಿಎಸ್ ಹಿಂದುಳಿದ ವರ್ಗಗಳ ಜಿಲ್ಲಾ ಉಪಾಧ್ಯಕ್ಷ ಹಣಮಂತ ಪೂಜಾರಿ ಒತ್ತಾಯಿಸಿದರು.

ಕನಿಷ್ಠ 6 ಸಾವಿರ ಬೆಲೆ ನಿಗದಿಪಡಿಸುವಂತೆ ರೈತರ ಒತ್ತಾಯ

ಕ್ವಿಂಟಾಲ್‌ಗೆ 5 ರಿಂದ 6 ಸಾವಿರ ರೂಪಾಯಿ ಇದ್ದ ಈರುಳ್ಳಿ ಬೆಲೆ ಈಗ ಏಕಾಏಕಿ ಪಾತಾಳಕ್ಕೆ ಕುಸಿದಿದೆ. ಕನಿಷ್ಠ 6 ಸಾವಿರ ಬೆಲೆ ನಿಗದಿಪಡಿಸುವಂತೆ ಬಳ್ಳಾರಿಯಲ್ಲಿ ರೈತರು ಒತ್ತಾಯಿಸುತ್ತಿದ್ದಾರೆ.

• **ಉದಯವಾಹಿನಿ, ಬಳ್ಳಾರಿ:**

ಗ್ರಾಹಕರ ಕಣ್ಣಲ್ಲಿ ನೀರು ತರಿಸಿದ್ದ ಈರುಳ್ಳಿ ಈಗ ರೈತರ ಕಣ್ಣಲ್ಲಿ ಕಣ್ಣೀರು ತರಿಸುತ್ತಿದೆ. ಬಳ್ಳಾರಿ ಎಪಿಎಂಸಿ ಮಾರುಕಟ್ಟೆಯಲ್ಲಿ ಈರುಳ್ಳಿ ದರ ದಿಢೀರ್ ಪಾತಾಳಕ್ಕೆ ಕುಸಿದ ಪರಿಣಾಮ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

1 : 2,500ರಿಂದ 4,500 ರೂಪಾಯಿಗೆ ಕುಸಿದಿದೆ
2 : 5ರಿಂದ 6 ಸಾವಿರ ರೂ ಮಾರಾಟವಾಗುತ್ತಿತ್ತು
3 : ಕೂಲಿ ಕಾರ್ಮಿಕರಿಗಾಗಿ ಸಾವಿರಾರು ರೂಪಾಯಿ

ನಾಲ್ಕು ದಿನಗಳ ಹಿಂದಷ್ಟೇ ಕ್ವಿಂಟಾಲ್‌ಗೆ 5ರಿಂದ 6 ಸಾವಿರ ರೂಪಾಯಿ ಇದ್ದ ಬೆಲೆ, ಇದೀಗ 2,500 ರಿಂದ 4,500 ರೂಪಾಯಿಗೆ ಇಳಿಕೆಯಾಗಿದೆ. ಹವಾಮಾನ ವೈಪರೀತ್ಯದ ಜತೆಗೆ ದಲ್ಲಾಳಿಗಳ ಕುತಂತ್ರವೇ ಬೆಲೆ ಕುಸಿತಕ್ಕೆ ಕಾರಣ ಎಂದು ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕನಿಷ್ಠ 6 ಸಾವಿರ ರೂಪಾಯಿ ಬೆಲೆ ನಿಗದಿಪಡಿಸಬೇಕು, ಇಲ್ಲದಿದ್ದರೆ ಉಗ್ರ ಹೋರಾಟಕ್ಕೆ ಮುಂದಾಗುವುದಾಗಿ ಎಚ್ಚರಿಕೆ ನೀಡಿದ್ದಾರೆ.

☛ ಉದಯವಾಹಿನಿ ಚಿತ್ರ

ಬಳ್ಳಾರಿ ಎಪಿಎಂಸಿ ಮಾರುಕಟ್ಟೆಯಲ್ಲಿ ಎಲ್ಲಿ ನೋಡಿದರೂ ಈರುಳ್ಳಿ ರಾಶಿಗಳೇ ಕಾಣಿಸುತ್ತಿವೆ.

ಉತ್ತಮ ಬೆಲೆಯ ನಿರೀಕ್ಷೆಯೊಂದಿಗೆ ಬೆಳೆ ತಂದಿದ್ದ ರೈತರಿಗೆ ದಿಢೀರ್ ದರ ಕುಸಿತ ಆಘಾತ ನೀಡಿದೆ. ನಾಲ್ಕು ದಿನಗಳ ಹಿಂದಷ್ಟೇ ಕ್ವಿಂಟಾಲ್‌ಗೆ 5ರಿಂದ 6 ಸಾವಿರ ರೂಪಾಯಿವರೆಗೆ ಮಾರಾಟವಾಗುತ್ತಿತ್ತು. ಇದೀಗ 2,500ರಿಂದ 4,500 ರೂಪಾಯಿಗೆ ಕುಸಿದಿದೆ ಎಂದು ರೈತರು ತಮ್ಮ ಅಳಲು ತೋಡಿಕೊಂಡರು.

ಈರುಳ್ಳಿ ಬೆಳೆಯಲು ಬಿತ್ತನೆ ಬೀಜ, ಗೊಬ್ಬರ, ಔಷಧ,

ಮಾರುಕಟ್ಟೆಯಲ್ಲಿನ ದಲ್ಲಾಳಿಗಳ ಹಾವಳಿಗೆ ಅಧಿಕಾರಿಗಳು ಕಡಿವಾಣ ಹಾಕಬೇಕು. ಎಪಿಎಂಸಿ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ರೈತರ ನೆರವಿಗೆ ಧಾವಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ರೈತ ಮುಖಂಡರು ಎಚ್ಚರಿಕೆ ನೀಡಿದ್ದಾರೆ.-ರೈತರು

ನೀರಾವರಿ ಹಾಗೂ ಕೂಲಿ ಕಾರ್ಮಿಕರಿಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಲಾಗಿದೆ. ಆದರೆ, ಈಗಿನ ಬೆಲೆಗೆ ಮಾರಾಟ ಮಾಡಿದರೆ ಹಾಕಿದ ಬಂಡವಾಳವೂ ಕೈಗೆ ಸಿಗದ ಪರಿಸ್ಥಿತಿ ಇದೆ. ಸಾಲ ಮಾಡಿ ಬೆಳೆ ಬೆಳೆದ ರೈತರು ಸಾಲ ತೀರಿಸುವುದು ಹೇಗೆ ಎಂಬ ಆತಂಕದಲ್ಲಿದ್ದಾರೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ಎಪಿಎಂಸಿ ಅಧಿಕಾರಿಗಳು ಮಾರುಕಟ್ಟೆಗೆ ಭೇಟಿ ನೀಡಿ ರೈತರ ಸಮಸ್ಯೆ ಆಲಿಸುತ್ತಿಲ್ಲ. ಮಾರುಕಟ್ಟೆಯಲ್ಲಿನ ದಲ್ಲಾಳಿಗಳ ಹಾವಳಿಗೂ ಕಡಿವಾಣ ಹಾಕುತ್ತಿಲ್ಲ ಎಂದು ರೈತರು ದೂರಿದ್ದಾರೆ.

ಕ್ವಿಂಟಾಲ್ ಈರುಳ್ಳಿಗೆ 5,500 ರೂಪಾಯಿ ಇದ್ದುದರಿಂದ ಇಷ್ಟು ದಿನಗಳ ಕಾಲ ರೈತರು ಖುಷಿಯಲ್ಲಿದ್ದರು. ಇಂದು

ಈ ಬೆಲೆ ಕುಸಿತದ ಹಿಂದೆ ದಲ್ಲಾಳಿಗಳ ಕೈವಾಡವಿದೆ. ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಆಟಕ್ಕೆ ಕಡಿವಾಣ ಇಲ್ಲದಂತಾಗಿದೆ. ರೈತರ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ಹವಾಮಾನ ವೈಪರೀತ್ಯದ ಪರಿಣಾಮವೂ ಬೆಲೆ ಕುಸಿತಕ್ಕೆ ಕಾರಣವಾಗಿದೆ ಎಂದು ಬೇಸರ

2000ರಿಂದ 2,500 ರೂಪಾಯಿ ಆಗಿದೆ. ಏಕೆ ಅಂತ ರೈತರು ಅಂಗಡಿಯವರನ್ನು ಕೇಳಿದರೆ, ಇನ್ನಿಲ್ಲದ ಕಾರಣ ಹೇಳುತ್ತಿದ್ದಾರೆ. ಏಕಾಏಕಿ ಅರ್ಧಕ್ಕರ್ಧ ಬೆಲೆ ಹೇಗೆ ಕಡಿಮೆ ಆಗುತ್ತದೆ?. ಈರುಳ್ಳಿ ತೆಗೆದುಕೊಂಡು ಹೋದ ಎಷ್ಟೋ ರೈತರು ಇಂದು ಬೆಲೆ ಬರಬಹುದು, ನಾಳೆ ಉತ್ತಮ ಬೆಲೆ ಬರಬಹುದು ಅಂತ ಎಪಿಎಂಸಿ ಮಾರುಕಟ್ಟೆಯಲ್ಲಿಯೇ ಮಲಗುತ್ತಿದ್ದಾರೆ.

ಅವರಿಗೆ ಗೋದಾಮಿನಲ್ಲಿ ಜಾಗ ಕೂಡ ಕೊಡುತ್ತಿಲ್ಲ. ಇಂದು 500 ರೂಪಾಯಿ ಕಡಿಮೆ ಕೇಳುತ್ತಿದ್ದಾರೆ ಹೊರೆತು ಬೆಲೆ ಹೆಚ್ಚಿಸುತ್ತಿಲ್ಲ, ಸರ್ಕಾರ ಗಮನ ಹರಿಸಬೇಕು.ಈ ಮೂಲಕ ರೈತರ ಸಮಸ್ಯೆ ಬಗೆಹರಿಸಬೇಕು. ಈರುಳ್ಳಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು. - ಸಂಗನಕಲ್ಲು ಕೃಷ್ಣಪ್ಪ, ರೈತ

ನಾನೇ ಸರ್ಕಾರ, ನಾನು ಹೇಳಿದ್ದೇ ಫೈನಲ್: ಶಿವಲಿಂಗೇಗೌಡ ಆಕ್ರೋಶ

• **ಉದಯವಾಹಿನಿ, ಹಾಸನ:**

ಹಾಸನಾಂಬ ಜಾತ್ರೆಯಲ್ಲಿ 100 ರೂ.ಗೆ 2 ಲಾಡು ಪ್ರಸಾದ ಮಾರಾಟ ಮಾಡುತ್ತಿದ್ದವರ ವಿರುದ್ಧ ಸಚಿವ ಕೆ.ಎಂ ಶಿವಲಿಂಗೇಗೌಡ ಗರಂ ಆಗಿದ್ದಾರೆ. ವರ್ಷಕ್ಕೊಮ್ಮೆ ಮಾತ್ರ ಬಾಗಿಲು ತೆರೆಯುವ ಚಾರಿತ್ರಿಕ ಪ್ರಸಿದ್ಧ ಹಾಸನಾಂಬೆ ದೇವಾಲಯದ ಲಾಡು ಪ್ರಸಾದದ ದರ ಹೆಚ್ಚಳಕ್ಕೆ ಸಚಿವ ಕೆ.ಎಮ್. ಶಿವಲಿಂಗೇಗೌಡ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಸಾದದ ದರವನ್ನು 100 ರೂಪಾಯಿಗೆ ನಿಗದಿಪಡಿಸಿದ್ದ ಜಿಲ್ಲಾಡಳಿತ ಹಾಗೂ ದೇವಾಲಯದ ಅಧಿಕಾರಿಗಳ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿರುವ ಸಚಿವರು, ತಕ್ಷಣವೇ ದರವನ್ನು 60 ರೂಪಾಯಿಗೆ ಇಳಿಸಿ ಸಾರ್ವಜನಿಕರಿಗೆ ಮಾರಾಟ

☛ ಉದಯವಾಹಿನಿ ಚಿತ್ರ

ಮಾಡುವಂತೆ ಖಡಕ್ ಸೂಚನೆ ನೀಡಿದ್ದಾರೆ. 60 ರೂ.ಗೆ 2 ಲಾಡು ಕೊಡ್ಬೇಕು, ನಾನೇ ಸರ್ಕಾರ, ನಾನು ಹೇಳಿದ ಮೇಲೆ ಫೈನಲ್ ಎಂದು ತೀವ್ರ ಆಕ್ರೋಶ ಹೊರಹಾಕಿದ್ದಾರೆ. ದೇವಾಲಯದ ಸುತ್ತಮುತ್ತ ಪರಿಶೀಲನೆ ನಡೆಸುವಾಗ 100 ರೂ.ಗೆ ಲಾಡು ಮಾರಾಟ ಮಾಡುವ ವಿಚಾರ ಗೊತ್ತಾಗಿದೆ. ಈ ವೇಳೆ, ಟೆಂಡರ್ ಪಡೆದ ಇಸ್ಕಾನ್ ಸಂಸ್ಥೆಗೆ ಕರೆ ಮಾಡಿ, ನಾನು ಮಿನಿಸ್ಟರ್ ಮಾತನಾಡುತ್ತಿದ್ದೇನೆ. 60

ಲಾಡು ಪ್ರಸಾದ ಮಾರಾಟ ಮಾಡಿ ದೇವಾಲಯದ ಆದಾಯವನ್ನು ಹೆಚ್ಚಿಸುವ ಯಾವುದೇ ಅಗತ್ಯವಿಲ್ಲ' ಎಂದು ಗರಂ ಆದ ಸಚಿವರು, ತಕ್ಷಣವೇ ದರ ಬದಲಾವಣೆ ಮಾಡುವಂತೆ ಆದೇಶಿಸಿದರು.

ರೂ.ಗೆ ಎರಡು ಲಾಡುಗಳನ್ನು ಮಾರಾಟ ಮಾಡಬೇಕು. 1000 ರೂ. 300 ರೂ. ವಿಶೇಷ ದರ್ಶನದ ಟಿಕೆಟ್ ಪಡೆದು ದರ್ಶನ ಮಾಡಿದವರಿಗೆ ಉಚಿತವಾಗಿ ಲಾಡು ನೀಡಬೇಕು ಎಂದು ಖಡಕ್ ಸೂಚನೆ ನೀಡಿದ್ದಾರೆ.

ಹಾಸನಾಂಬೆ ದರ್ಶನಕ್ಕೆ ಲಕ್ಷಾಂತರ ಭಕ್ತಾದಿಗಳು ಆಗಮಿಸುವ ಹಿನ್ನೆಲೆಯಲ್ಲಿ ದೇವಾಲಯದ ಆದಾಯದ ದೃಷ್ಟಿಯಿಂದ ಲಾಡು ಪ್ರಸಾದವನ್ನು 100 ರೂಪಾಯಿಗೆ ಮಾರಾಟ ಮಾಡಲು ಅಧಿಕಾರಿಗಳು ಯೋಜನೆ ರೂಪಿಸಿದ್ದರು.

SIT ನೂತನ ಮುಖ್ಯಸ್ಥರಾಗಿ ಚೇತನ್ ಸಿಂಗ್ ರಾಥೋಡ್ ನೇಮಕ..!

• **ಉದಯವಾಹಿನಿ, ಮಂಗಳೂರು:**

☛ ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿರುವ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗಾಗಿ ರಚಿಸಲಾಗಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ನೂತನ ಮುಖ್ಯಸ್ಥರಾಗಿ ಬೆಂಗಳೂರಿನ ಸಿಐಡಿ ವಿಭಾಗದ ಐಜಿಪಿ ಚೇತನ್ ಸಿಂಗ್ ರಾಥೋಡ್ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ಈ ಹಿಂದೆ ಎಸ್‌ಐಟಿ ಮುಖ್ಯಸ್ಥರಾಗಿದ್ದ ಐಜಿಪಿ ಎನ್. ಶಶಿಕುಮಾರ್ ಅವರು ತಮ್ಮನ್ನು ಈ ಜವಾಬ್ದಾರಿಯಿಂದ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಅಕ್ಟೋಬರ್ 30ರ ಶುಕ್ರವಾರ ರಾಜ್ಯ ಸರ್ಕಾರ ಚೇತನ್ ಸಿಂಗ್ ಅವರನ್ನು ನೂತನ ಮುಖ್ಯಸ್ಥರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

ಸೌಜನ್ಯ ಪ್ರಕರಣದ ತನಿಖೆಯ ಕುರಿತು ಪ್ರಶ್ನೆಗಳನ್ನು ಎತ್ತಿದ್ದ ಕೆಲವರು, ಶಶಿಕುಮಾರ್ ಅವರು ಧರ್ಮಸ್ಥಳ ದೇವಸ್ಥಾನದ ಆಡಳಿತ ಮಂಡಳಿಗೆ ಹತ್ತಿರವಾಗಿದ್ದಾರೆ ಎಂದು ಆರೋಪಿಸಿದ್ದರು. ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಅವಧಿಯಲ್ಲಿಯೂ ಅವರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಲಾಗಿತ್ತು. ಇದಲ್ಲದೆ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವೆಂಕಟೇಶ್ ಪ್ರಸನ್ನ ಅವರ ಮನವಿಯ ಮೇರೆಗೆ ಅವರನ್ನು ಎಸ್‌ಐಟಿಯಿಂದ ಬದಲಾಯಿಸಲಾಗಿದೆ. ಅವರ ಸ್ಥಾನಕ್ಕೆ ಹಾಸನದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶ್ರೀನಿಧಿ ಅವರನ್ನು ಎಸ್‌ಐಟಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಎಸ್‌ಐಟಿಯಲ್ಲಿ ಡಿಐಜಿ ಸಿ.ಎಚ್. ಸುಧೀರ್ ಕುಮಾರ್ ರೆಡ್ಡಿ, ಮಂಗಳೂರು ನಗರ ಪೊಲೀಸ್ ಆಯುಕ್ತೆ ನಿಶಾ ಜೇಮ್ಸ್ (ಬೆಂಗಳೂರು ಗುಪ್ತಚರ ವಿಭಾಗದ ಎಸ್‌ಪಿ) ಮತ್ತು ಬೆಂಗಳೂರಿನ ಸಿಐಡಿ ಎಸ್‌ಪಿ ಲೋಕೇಶ್ ಜಗಲಾಸರ್ ಕೂಡ ಸದಸ್ಯರಾಗಿದ್ದಾರೆ.

BIMS ಆಸ್ಪತ್ರೆಗೆ ಉಪ ಲೋಕಾಯುಕ್ತ ದಿಢೀರ್ ದಾಳಿ

• **ಉದಯವಾಹಿನಿ, ಬೆಳಗಾವಿ:**

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಬಿ.ಐ.ಎಂ.ಎಸ್) ಔಷಧಾಲಯದ ಮೇಲೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿದ್ದು, ಈ ವೇಳೆ ಆಸ್ಪತ್ರೆಯ ಫಾರ್ಮಸಿಯಲ್ಲಿ ರೋಗಿಗಳಿಗೆ ವಿತರಿಸಲು ಇಡಲಾಗಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಅವಧಿ ಮುಗಿದ ಔಷಧಗಳು ಹಾಗೂ ಆಂಟಿ-ರೇಬೀಸ್ (ನಾಯಿ ಕಡಿತದ) ಲಸಿಕೆಗಳು ಪತ್ತೆಯಾಗಿವೆ. ಸಾರ್ವಜನಿಕರ ದೂರುಗಳ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿದ ಉಪ ಲೋಕಾಯುಕ್ತರು, ಫಾರ್ಮಸಿಯಲ್ಲಿದ್ದ ಸ್ಟಾಕ್ ರಿಜಿಸ್ಟರ್ ಹಾಗೂ ಔಷಧಗಳನ್ನು ಕೂಲಂಕಷವಾಗಿ ಪರಿಶೀಲಿಸಿದರು. ಈ ವೇಳೆ ರೇಬೀಸ್‌ನಂತಹ ಗಂಭೀರ ಕಾಯಿಲೆಗೆ ತುತ್ತಾದ ರೋಗಿಗಳಿಗೆ ಈಗಾಗಲೇ ಅವಧಿ ಮುಗಿದಿರುವ ಲಸಿಕೆಗಳನ್ನೇ ನೀಡುತ್ತಿರುವುದು ಕಂಡುಬಂದಿದೆ. ಇದರಿಂದ ತೀವ್ರ ಕೆಂಡಾಮಂಡಲಗೊಂಡ ಉಪ ಲೋಕಾಯುಕ್ತರು, ಸಾರ್ವಜನಿಕರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಆಸ್ಪತ್ರೆಯ ಬೇಜವಾಬ್ದಾರಿತನಕ್ಕೆ ಅಧಿಕಾರಿಗಳನ್ನು ಸ್ಥಳದಲ್ಲೇ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಅವಧಿ ಮೀರಿದ ಲಸಿಕೆಗಳು ಇಷ್ಟೊಂದು ಪ್ರಮಾಣದಲ್ಲಿ ದಾಸ್ತಾನಾಗಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ ಅವರು, ಲಸಿಕೆಗಳು ಅವಧಿ ಮುಗಿದ ಬಳಿಕವೂ ಸಂಗ್ರಹದಲ್ಲಿರಲು ಕಾರಣವೇನು ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಅಲ್ಲದೆ, ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ನಿರ್ದೇಶನ ನೀಡಿದ್ದಾರೆ. ಔಷಧ ಮತ್ತು ಲಸಿಕೆಗಳ ಅವಧಿಯನ್ನು ನಿಯಮಿತವಾಗಿ ಪರಿಶೀಲಿಸುವ ವ್ಯವಸ್ಥೆ ಇರಬೇಕು. ಅವಧಿ ಮೀರಿದ ದಾಸ್ತಾನುಗಳನ್ನು ವಿತರಿಸದಂತೆ ಅಥವಾ ಬಳಸದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು. ಇಂತಹ ನಿರ್ಲಕ್ಷ್ಯ ಸಾರ್ವಜನಿಕ ಆರೋಗ್ಯಕ್ಕೆ ಅಪಾಯ ಉಂಟುಮಾಡಬಹುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮರಗಳ ತೆರವಿಗೆ ವಕೀಲರ ಮನವಿ

• **ಉದಯವಾಹಿನಿ, ಶಿವಮೊಗ್ಗ**

ಮಲೆನಾಡು ಭಾಗದಲ್ಲಿ ರಸ್ತೆ ಬದಿಯಲ್ಲಿರುವ ನೀಲಗಿರಿ ಹಾಗೂ ಅಕೇಶಿಯಾ ಮರಗಳನ್ನು ತೆರವುಗೊಳಿಸುವಂತೆ ಆಗ್ರಹಿಸಿ, ಡಿಸಿ ಕಚೇರಿಯಲ್ಲಿ ಮಲೆನಾಡು ವಕೀಲರ ವೇದಿಕೆಯು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅವರಿಗೆ ಮನವಿ ಪತ್ರ ಅರ್ಪಿಸಿದೆ.ನೀಲಗಿರಿ ಹಾಗೂ ಅಕೇಶಿಯಾ ಮರಗಳು ನಿರಂತರವಾಗಿ ವಿದ್ಯುತ್ ಕಂಬಗಳು ಹಾಗೂ ರಸ್ತೆಗಳ ಮೇಲೆ ಬೀಳುತ್ತಿವೆ. ಇದರಿಂದ ಸಾಕಷ್ಟು ತೊಂದರೆಯಾಗುತ್ತಿವೆ. ಕೆಲವೆಡೆ ಸದರಿ ಮರಗಳು ಬಿದ್ದು ಸಾವು-ನೋವುಗಳು ಕೂಡ ಸಂಭವಿಸಿವೆ .ಹುಂಚ ಗ್ರಾಮದ ಹೊಂಡಲಗದ್ದೆಯಿಂದ ಕುಬಟಹಳ್ಳಿವರೆಗಿನ ರಸ್ತೆ ಅಕ್ಕಪಕ್ಕದಲ್ಲಿರುವ ನೀಲಗಿರಿ ಅಕೇಶಿಯಾ ಮರಗಳನ್ನು ತೆರವು ಗೊಳಿಸಲು ಎಂಪಿಎಂ ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಸಿದ್ದೇಶ್ವರದಲ್ಲಿ ಬಸವಣ್ಣನವರ ಅಶ್ವಾರೂಢ ಮೂರ್ತಿ ಅನಾವರಣ

• **ಉದಯವಾಹಿನಿ, ಬೀದರ್:**

ಭಾಲ್ಕಿ ತಾಲ್ಲೂಕಿನ ಸಿದ್ದೇಶ್ವರ ಗ್ರಾಮದಲ್ಲಿ ವಿಶ್ವಗುರು ಬಸವಣ್ಣನವರ ಅಶ್ವಾರೂಢ ಮೂರ್ತಿ ಅನಾವರಣ ಹಾಗೂ ಗ್ರಾಮದ ನೂತನ ಮಹಾದ್ವಾರದ ಉದ್ಘಾಟನಾ ಸಮಾರಂಭವನ್ನು ನವೆಂಬರ್ 1ರಂದು ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಜೈರಾಜ್ ಖಂಡ್ರೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕರ್ನಾಟಕ ರಾಜ್ಯೋತ್ಸವದ ದಿನವೇ ನಡೆಯಲಿರುವ ಈ ಸಮಾರಂಭಕ್ಕೆ ವಿವಿಧ ಮಠಗಳ ಪೂಜ್ಯರು, ಜನಪ್ರತಿನಿಧಿಗಳು, ಬಸವಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾವಿರಾರು ಬಸವಭಕ್ತರು ಸಾಕ್ಷಿಯಾಗಲಿದ್ದಾರೆ ಎಂದು ಹೇಳಿದರು.

ಅಂದು ಸಂಜೆ 6 ಗಂಟೆಗೆ ನಡೆಯುವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ವಿಶ್ವಗುರು ಬಸವಣ್ಣನವರ ಅಶ್ವಾರೂಢ ಮೂರ್ತಿಯನ್ನು ಅನಾವರಣಗೊಳಿಸಲಿದ್ದಾರೆ. ಬೀದರ್ ಲೋಕಸಭಾ ಸದಸ್ಯ ಸಾಗರ್ ಖಂಡ್ರೆ ಅವರು ಗ್ರಾಮದ ನೂತನ ಮಹಾದ್ವಾರವನ್ನು

☛ ಉದಯವಾಹಿನಿ ಚಿತ್ರ

ಉದ್ಘಾಟಿಸಲಿದ್ದಾರೆ. ಭಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬು ವಾಲಿ ಧ್ವಜಾರೋಹಣ ನೆರವೇರಿಸಲಿದ್ದು, ಜೈರಾಜ್ ಖಂಡ್ರೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು.

ವಚನ ಸಾಹಿತ್ಯದ ಭವ್ಯ ಮೆರವಣಿಗೆ: ಸಮಾರಂಭದ ಅಂಗವಾಗಿ ಅಂದು ಬೆಳಿಗ್ಗೆ 10 ಗಂಟೆಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರ, ಹಾಗೂ ವಚನ ಸಾಹಿತ್ಯದ ಭವ್ಯ ಮೆರವಣಿಗೆ ಆಯೋಜಿಸಲಾಗಿದೆ. ಸಾವಿರಾರು ಶರಣರು ಮತ್ತು ಬಸವಭಕ್ತರು ತಲೆಯ ಮೇಲೆ ವಚನ ಸಾಹಿತ್ಯದ ಗ್ರಂಥಗಳನ್ನು ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

9 ವರ್ಷಗಳಾದ್ರೂ ಪೂರ್ಣವಾಗದ ಪಂಜೆ ಮಂಗೇಶರಾಯರ ಭವನ!

'ಪಂಜೆ ಭವನ'ದ ಕಾಮಗಾರಿ ಅಂತಿಮ ಹಂತ ತಲುಪಿದೆ. ಆದರೆ, ಪೂರಕ ಅನುದಾನದ ಕೊರತೆಯಿಂದಾಗಿ ಕಟ್ಟಡದ ಕಾಮಗಾರಿ ಇನ್ನೂ ಪೂರ್ಣಗೊಳ್ಳದೆ ವಿಳಂಬವಾಗುತ್ತಿದೆ.

• **ಉದಯವಾಹಿನಿ, ಬಂಟ್ವಾಳ:**

ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಪಂಜೆ ಮಂಗೇಶರಾಯರ ಹುಟ್ಟೂರಿನಲ್ಲೇ, ಅವರ ಮನೆ ಸನಿಹದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಪರ್ದಿಯಲ್ಲಿ ನಿರ್ಮಾಣಗೊಳ್ಳುತ್ತಿರುವ 'ಪಂಜೆ ಭವನ'ದ ಕಾಮಗಾರಿ ಅಂತಿಮ ಹಂತ ತಲುಪಿದೆ.

ಆದರೆ, ಪೂರಕ ಅನುದಾನದ ಕೊರತೆಯಿಂದಾಗಿ ಕಟ್ಟಡದ

1 : ಅರ್ಧ ಎಕರೆ ಜಾಗದಲ್ಲಿ ನಿರ್ಮಾಣ
2 : ಸಾಹಿತ್ಯಿಕ ಕಾರ್ಯಕ್ರಮಕ್ಕೆ ಅವಕಾಶ
3 : ನಿರ್ಮಾಣ ಕಾರ್ಯದ ಅಂತಿಮ ಕಾರ್ಯ

ಕಾಮಗಾರಿ ಇನ್ನೂ ಪೂರ್ಣಗೊಳ್ಳದೆ ವಿಳಂಬವಾಗುತ್ತಿದೆ. ಕನ್ನಡ ಸಾಹಿತ್ಯ ದಿಗ್ಗಜನಿಗೆ ಸಲ್ಲಿಸುವ ನಿಜವಾದ ಗೌರವ ಈ ಭವನದ ಶೀಘ್ರ ಉದ್ಘಾಟನೆ. ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಾದರೂ ಇದಕ್ಕೆ ಹಣ ಬಿಡುಗಡೆಯಾಗಲಿ ಎಂಬುದು ಸಾಹಿತ್ಯಪ್ರಿಯರ ಆಶಯ.

ಪಂಜೆ ಮಂಗೇಶರಾಯರು ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳದಲ್ಲಿ 1874 ಫೆಬ್ರುವರಿ 22ರಂದು ಜನಿಸಿದರು. ಈಗ ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ವೈದ್ಯರ ಕ್ವಾರ್ಟರ್ಸ್ ಇರುವ ಮನೆಯೇ

ಪಂಜೆಯವರು ಜನಿಸಿದ, ಬಾಳಿದ ಮನೆ. ಅಲ್ಲೇ ಸಮೀಪದ ಮಹಾಲಿಂಗೇಶ್ವರ ದೇವಸ್ಥಾನದ ಪಕ್ಕ ರೆವೆನ್ಯೂ ಇಲಾಖೆಯ ಕಚೇರಿ ಬಳಿ ಪಂಜೆ ಮಂಗೇಶರಾಯರ ಸ್ಮಾರಕ ಭವನ ನಿರ್ಮಾಣ ಆಗುತ್ತಿದೆ.

2017ರಲ್ಲಿ ಶಿಲಾನ್ಯಾಸವಾಗಿತ್ತು: 2017ರಲ್ಲಿ ಸಚಿವರಾಗಿದ್ದ ಬಿ.ರಮಾನಾಥ ರೈ ನಿರ್ದೇಶನದ ಮೇರೆಗೆ ರೇಖಾ ಅಂದಾಜುಪಟ್ಟಿಯನ್ನು ಕರ್ನಾಟಕ ಗೃಹಮಂಡಳಿ ವತಿಯಿಂದ ತಯಾರಿಸಿ, ಆಡಳಿತ ಅನುಮೋದನೆಗೆ ನೀಡಲಾಗಿತ್ತು. ಆ ವರ್ಷ ಅಕ್ಟೋಬರ್‌ನಲ್ಲಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ 5 ಕೋಟಿ ರೂ. ವೆಚ್ಚದ ಪ್ರಸ್ತಾಪಿತ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಇದಕ್ಕೂ ಮೊದಲು

ಹಿರಿಯ ರಂಗಕರ್ಮಿ ಮಹಾಬಲೇಶ್ವರ ಹೆಬ್ಬಾರ ಮಾತನಾಡಿ, ಬಂಟ್ವಾಳಕ್ಕೊಂದು ರಂಗಮಂದಿರ ಅವಶ್ಯವಿದ್ದು, ಪಂಜೆ ಭವನ ನಿರ್ಮಾಣ ಇದನ್ನು ಈಡೇರಿಸುತ್ತದೆ. ಅಲ್ಲದೆ, ಪಂಜೆ ಮಂಗೇಶರಾಯರ ನೆನಪಿಗೆ ಇದೊಂದು ಶಾಶ್ವರ ರಚನೆಯಾಗಿರುತ್ತದೆ ಎಂದರು.-ಸಾಹಿತ್ಯಪ್ರಿಯರು

2007ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭ ಬಂಟ್ವಾಳದಲ್ಲಿ ಪಂಜೆ ಸ್ಮಾರಕ ನಿರ್ಮಾಣಕ್ಕೆ 50 ಲಕ್ಷ ರೂ. ಘೋಷಣೆ ಮಾಡಲಾಗಿತ್ತು. ಆದರೆ ಆಗ ಭವನಕ್ಕೆ ಸ್ಥಳ ನಿಗದಿಯಾಗಿರಲಿಲ್ಲ.

ಹುಟ್ಟಿದ ಮನೆ ಸರ್ಕಾರಿ ಆಸ್ಪತ್ರೆ ಉಪಯೋಗಕ್ಕೆ: ಪಂಜೆಯವರು ಹುಟ್ಟಿದ, ಬಾಳಿದ ಮನೆ ಈಗ ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ವೈದ್ಯರ ವಸತಿಗೃಹವಾಗಿದೆ. ಅದನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಯೋಚನೆಯೂ ಇದೆ. ಸಾರ್ವಜನಿಕರ ಸೇವೆಗೆಂದು ಕವಿಯೊಬ್ಬರು ಹುಟ್ಟಿ, ಬೆಳೆದ ಮನೆಯನ್ನು ಸರ್ಕಾರಕ್ಕೊಪ್ಪಿಸುವುದು ವಿರಳ ಸನ್ನಿವೇಶ. ಅಲ್ಲೇ ಪಕ್ಕದಲ್ಲಿ ಅಮೃತಶಿಲೆಯಲ್ಲಿ ಕೆತ್ತಿದ ಫಲಕವೊಂದು ನೆನಪಿಗಾಗಿ ಇದೆ.

ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಪಂಜೆ: ಪಂಜೆ ಮಂಗೇಶರಾಯರು. (ಜನನ: 1874 ಫೆಬ್ರುವರಿ 22, ನಿಧನ: 1937

ಈ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್ ಪ್ರತಿಕ್ರಿಯಿಸಿ, ಅನುದಾನ ಬಿಡುಗಡೆಗೆ ಕಾಯಲಾಗುತ್ತಿದ್ದು, ಅದಾದ ಬಳಿಕ ನಿರ್ಮಾಣ ಕಾರ್ಯದ ಅಂತಿಮ ಕಾರ್ಯಗಳು ನಡೆಯಲಿವೆ ಎಂದು ಹೇಳಿದ್ದಾರೆ.

ಅಕ್ಟೋಬರ್ 24) ಕವಿಶಿಷ್ಯ ಕಾವ್ಯನಾಮದಿಂದ ಖ್ಯಾತರಾಗಿದ್ದು, ಅಧ್ಯಾಪಕರಾಗಿ, ದುಡಿದ ಪ್ರಾತಃಸ್ಮರಣೀಯ ಸಾಹಿತಿ. ಶಿಶು ಸಾಹಿತ್ಯದಲ್ಲಿ ಸೇವೆ ಸಲ್ಲಿಸಿದವರು.ಬಂಟವಾಳದಲ್ಲಿಯೇ ಅವರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಕನ್ನಡ ಪಾಠಗಳಿಗೆ ಪದ್ಯಗಳು ಬೇಕಾದ ಆ ಕಾಲದಲ್ಲಿ ಪ್ರಥಮವಾಗಿ ಪದ್ಯಪುಸ್ತಕಗಳನ್ನು ಸಂಪಾದಿಸಿದರು.

'ನಾಗರಹಾವೆ ಹಾವೊಳು ಹೂವೆ' – ಇವರ ಪ್ರಸಿದ್ಧ ಬಾಲಗೀತೆ, ಕವಿತೆಯು ಆಂಗ್ಲರನ್ನು ಪ್ರತಿಮಾರೂಪದಿಂದ ಉದ್ದೇಶಿಸಿ ಬರೆದ ಕವಿತೆಯಾಗಿದೆ. 'ಅಣ್ಣನ ವಿಲಾಪ' ಹೊಸಗನ್ನಡದ ಮೊಟ್ಟಮೊದಲ ಶೋಕಗೀತೆ. ಕನ್ನಡದಲ್ಲಿ ಮೊದಲ ಬಾರಿಗೆ ಕಥನಕವನಗಳನ್ನು ಬರೆದವರೂ ಪಂಜೆಯವರೇ. ಡೊಂಬರ ಚೆನ್ನಯ ಸ್ವತಂತ್ರವಾದ ಕಥನ ಕವನ, ರಂಗಸೆಟ್ಟಿ, ನಾಗಣ್ಣನ ಕನ್ನಡಕ, ಕಡೆಕಂಜಿ ಪ್ರಸಿದ್ಧ ಕಥನ ಕವನಗಳು. 1900ರಲ್ಲಿ ಪಂಜೆಯವರು 'ನನ್ನ ಚಿಕ್ಕತಾಯಿ' ಎಂಬ ಸಣ್ಣ ಕತೆ ಬರೆದಿದ್ದರು.